ಮಹಾತ್ಮರ ಮನೋರಂಗ

ಅನುವಾದಕರು :
ಶ್ರೀ. ರಂ. ರಾ. ದಿವಾಕರ
ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ಅವರ ಭಾಷಣ ಲೇಖನಗಳಿಂದಲೇ ಆಯ್ದು, ಸಂಗ್ರಹಿಸಿದ ಪುಸ್ತಕ.
೩೦೪ ಪುಟ, ಬೆಲೆ: ೪-೮-೦
ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

ಬೆಲೆ: ಎರಡು ಆಣೆ

ಕರ್ಮವೀರ

ಸಂಪಾದಕರು :
ಹ. ರಾ. ಪುರೋಹಿತ ಎಂ. ಎ.

——ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ——

ಜಡಚೇತನ ರಹಸ್ಯ
ಲೇ: ಶ್ರೀ. ರಂ. ರಾ. ದಿವಾಕರ
ಕರ್ನಾಟಕದ ... ನಡೆಸಿದ ... ಬಗ್ಗೆ ವಿಚಾರ ... ಪೂರ್ಣ ವಿವೇಚನೆ.
ಬೆಲೆ : ೫ ರೂಪಾಯಿ
ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

Editor
H. R. Purohit, M. A.

---(ಸಂಪುಟ ೧೯)---

ಹುಬ್ಬಳ್ಳಿ ಸೋಮವಾರ ತಾರೀಖು ೨೩---೬---೧೯೪೭

---(ಸಂಚಿಕೆ ೧೨)---

ಹಿಂದುಸ್ತಾನಕ್ಕೆ ರಶಿಯಾದಿಂದ ಗಂಡಾಂತರ ನಿಜವೇ?

"ಕೇವಲ ಸಾಮ್ರಾಜ್ಯವಾದಿಗಳ ಗುಮ್ಮನ ಕತೆ"—ರಶಿಯನ್ ಬೆದರಿಕೆ ಬರಿ ಟೊಳ್ಳೆಂದು ಲುಯಿ ಫಿಶರರ ಮತ

ರಶಿಯಾದ ಭಯ, ಕಮ್ಯುನಿಝಮ್‌ನ ಗಂಡಾಂತರ ಎಂಬಿವು ಸಾಮ್ರಾಜ್ಯವಾದಿಗಳಿಗೆ ಅನುಕೂಲವಾದ ನೆವಗಳಾಗಿ ಬಿಟ್ಟವೆ. ಹಿಂದುಸ್ತಾನಕ್ಕೆ ಉತ್ತರದಿಂದ ರಶಿಯಾದ ದಾಳಿಯ ಭಯವುಂಟೆಂದು ಹೇಳಿ, ಹಿಂದುಸ್ತಾನದಿಂದ ಕಾಲ್ತೆಗೆದ ಬ್ರಿಟಿಶರು ನಮ್ಮ "ಗಡಿ ಕಾಯಲು" ಕಾಶ್ಮೀರ ಸಂಸ್ಥಾನದಲ್ಲಿ ತಳವೂರುವ ಸಂಭವವುಂಟೆಂದು ಸುದ್ದಿ ಹಬ್ಬಿದೆ. ಸೋವಿಯೆಟ್ ಪ್ರಭಾವವುಳ್ಳ ಹೊರ ಮಂಗೋಲಿಯಾದ ಸೈನಿಕರು ಹಿಂದುಸ್ತಾನದ ಉತ್ತರಕ್ಕೆ, ಕಾಶ್ಮೀರದ ಗಡಿಯಲ್ಲಿರುವ ಚೀನಿ ಪ್ರಾಂತವಾದ ಸಿಂಕಿಯಾಂಗಿನಲ್ಲಿ ನುಗ್ಗಿ ಕಾಶಗರ [ಕಾಶ್ಮೀರ ಗಡಿಯ ಹತ್ತಿರ] ದಲ್ಲಿ ಚಟುವಟಿಕೆ ನಡೆಸಿದ್ದಾರೆಂದೂ ಪಾಮೀರ ತಪ್ಪಲಿನಲ್ಲಿ ಕಾಶಗರದ ಹತ್ತಿರ ಸೋವಿಯೆಟ್ ಸೈನಿಕರ ಚಟುವಟಿಕೆ ನಡೆದಿದೆಯೆಂದೂ ಹೇಳಲಾಗಿದೆ. ಕಾಶ್ಮೀರದ ಸಮೀಪದಲ್ಲಿರುವ ಸ್ವತಂತ್ರ ನೇಪಾಲ ರಾಜ್ಯದಲ್ಲಿ ವಾಣಿಜ್ಯ ಒಪ್ಪಂದದ ಹೆಸರಲ್ಲಿ ಈಗಾಗಲೆ ಅಮೇರಿಕೆ ತಳವೂರಿದೆ. ಈಗ ಸೋವಿಯೆಟ್ ಭಯದ ಹೆಸರಲ್ಲಿ ಕಾಶ್ಮೀರದಲ್ಲಿ ಬ್ರಿಟನ್ನು ಕಾಲೂರಬೇಕೆನ್ನುತ್ತಿದೆ. ಈ ಸಂದರ್ಭದಲ್ಲಿ ರಶಿಯಾದಿಂದ ಹಿಂದುಸ್ತಾನಕ್ಕಿರುವ ಭಯ ನಿಜವೆ? ಹಾಗಿದ್ದರೆ ಎಷ್ಟು ಮಟ್ಟಿಗೆ, ಎಂದರಿಯುವದು ಯೋಗ್ಯ. ಸೋವಿಯೆಟ್ ರಾಜಕಾರಣದಲ್ಲಿ ತಜ್ಞರಾದ ಹಾಗು ಓದುಗರಿಗೆ ಪರಿಚಿತರಾದ ಲುಯಿಫಿಶರರು ರಶಿಯದ ದಾಳಿ ಅಸಂಭವವೆಂದು ಇಲ್ಲಿ ತೋರಿಸಿಕೊಟ್ಟಿದ್ದಾರೆ.

ಈಚೆಗೆ ಹಿಂದುಸ್ತಾನಕ್ಕೆ ಹೋಗಿ ಬಂದವರು—ಹಿಂದೀಯರು ಮತ್ತು ಇತರರು ಸೇರಿಯೆ—ಹಿಂದುಸ್ತಾನದ ಭವಿತವ್ಯವನ್ನು ಕುರಿತು ನಡೆದ ಚರ್ಚೆಗಳಲ್ಲಿ ಆ ದೇಶದ ಮೇಲೆ ರಶಿಯಾದ ದಾಳಿಯಾಗುವ ಸಂಭವವನ್ನೂ ಗಮನಿಸಲಾಗುತಿದೆಯೆಂದು ಹೇಳುತ್ತಾರೆ. ಝಾರನ ಕಾಲದ ಮತ್ತು ಸೋವಿಯೆಟ್ ಕಾಲದ ರಶಿಯನ್ ವಿದೇಶ ಧೋರಣೆಗಳೆರಡನ್ನೂ ವಿಶೇಷವಾಗಿ ಅಭ್ಯಸಿಸಿದ ನಾನು ಇದೊಂದು ಬರಿ ಕಲ್ಪನೆಯೆಂದು ಹೇಳಿದರೆ ಅನಧಿಕಾರಪ್ರಸಂಗವಾಗಲಿಕ್ಕಿಲ್ಲ.

ಸದ್ಯದಲ್ಲಿ ಆಗಲಿ ನಿಕಟ ಭವಿಷತ್ತಿನಲ್ಲಾಗಲಿ ಸೋವಿಯಟ್ ಸರಕಾರ ಹಿಂದುಸ್ತಾನದ ಮೇಲೆ ಏರಿ ಹೋಗಬಲ್ಲದೆಂದು ಇಲ್ಲವೆ ಏರಿ ಹೋದೀತೆಂದು ನಾನು ನಂಬುವದಿಲ್ಲ. ಅದು ಅಂಥ ಕ್ರಮ ತೆಗೆದುಕೊಳ್ಳಲು ಕಾರಣವೂ ಇಲ್ಲ. ಹಾಗೆ ಮಾಡಿದರೆ ಶುದ್ಧ ಹುಚ್ಚುತನವೇ ಸರಿ.

ಯುದ್ಧದಿಂದಾದ ಧ್ವಂಸ

ಬೇರೆ ಅನೇಕ ದೇಶಗಳಂತೆ ಸೋವಿಯಟ್ ರಾಜ್ಯವೂ ಎರಡನೆ ಮಹಾಯುದ್ಧದ ಪರಿಣಾಮಗಳಿಂದ ನರಳುತಿದೆ. ಹಿಟ್ಲರನನ್ನು ಸೋಲಿಸಲು ಎಲ್ಲರಿಗೂ ಮಿಕ್ಕಿ ತ್ಯಾಗ ಮಾಡಿದ ರಶಿಯಾದ ಮೈಯಿಂದ ಸೋರಿದ ನೆತ್ತರ ಅಷ್ಟಿಷ್ಟಲ್ಲ. ಸೈನಿಕರು ನಾಗರಿಕರು ಸೇರಿ ಕನಿಷ್ಠ ೧೫೦ ಲಕ್ಷ ಸೋವಿಯಟ್ ಜನರು ೧೯೪೧ ರಿಂದ ೧೯೪೫ರ ವರೆಗೆ ಸತ್ತರೆಂದು ಅನಧಿಕೃತ ಅಂದಾಜು. ಸೋವಿಯಟ್ ರಾಜ್ಯದ ವಿಸ್ತಾರ ಪ್ರದೇಶಗಳನ್ನು ನಾಝಿಗಳು ಧ್ವಂಸ ಮಾಡಿದರು. ಅಸಂಖ್ಯ ಸೋವಿಯಟ್ ಕಾರಖಾನೆಗಳೂ ಕೃಷಿ ಕ್ಷೇತ್ರಗಳೂ ತಮ್ಮ ಸಾಧನ ಸಾಮಗ್ರಿಗಳನ್ನು ಕಳೆದುಕೊಂಡವು.

ಮೊನ್ನಿನ ಯುದ್ಧದಿಂದ ಚೇತರಿಸಿಕೊಳ್ಳಲು ರಶಿಯಾಕ್ಕೆ ಇನ್ನು ಹದಿನೈದು ವರ್ಷ ಬೇಕು. ಇಂಥ ಸ್ಥಿತಿಯಲ್ಲಿ ವಿದೇಶಗಳ ಮೇಲೆ ಏರಿ ಹೋಗುವ ಸಾಹಸ ಮಾಡುವಷ್ಟು ಕ್ರೆಮ್ಲಿನ್ ನಾಯಕರು ಮೂಢರಲ್ಲ.

ಹಿಂದುಸ್ತಾನದ ಮೇಲೆ ದಂಡೆತ್ತಿ ಬರುವದು ರಶಿಯಾಕ್ಕೆ ಸಾಮಾನ್ಯವಾದ ಕೆಲಸವಲ್ಲ. ರಶಿಯಾದಿಂದ ಹಿಂದುಸ್ತಾನದ ಮೇಲೆ ಅನೇಕ ದಾಳಿಗಳಾಗಿವೆಯೆಂಬದು ನಿಜ. ಪೋರ್ತುಗೀಸ, ಫ್ರೆಂಚ ಮತ್ತು ಬ್ರಿಟಿಶ ದಾಳಿಗಳನ್ನು ಬಿಟ್ಟರೆ ಹಿಂದುಸ್ತಾನದ ಮೇಲೆ ಇತಿಹಾಸದಲ್ಲಾದ ೨೬ ಊ ದಾಳಿಗಳು ಈಗ ರಶಿಯಾಕ್ಕೆ ಸೇರಿರುವ ಪ್ರದೇಶಗಳಿಂದಲೇ ಆದವು.

ಅನಾದಿ ದಾಳಿಗಳು

ಕ್ರಿಸ್ತಪೂರ್ವ ೨೨ ನೇ ಶತಮಾನದಲ್ಲಿ ಅಸೀರಿಯಾದ ರಾಣಿ ಸೆಮಿರಾಮಿಸಳು ಹಿಂದುಸ್ತಾನದ ಮೇಲೊಂದು ಸೈನ್ಯ ಕಳಿಸಿದಳು. ಕ್ರಿ. ಪೂ. ೫೩೦ ರಲ್ಲಿ ಪರ್ಶಿಯಾದ ಸೈರಸನೂ ಹಾಗೆಯೆ ಮಾಡಿದನು. ಕ್ರಿ. ಪೂ. ೩೨೭ ರಲ್ಲಿ ಸಿಕಂದರನು ಗ್ರೀಸಿನಿಂದ ಪರ್ಶಿಯಾಕ್ಕೂ ಅಲ್ಲಿಂದ ಅಫಗಾಣಿಸ್ತಾನಕ್ಕೂ ಪ್ರಚಂಡ ಪಡೆಯೊಂದರೊಡನೆ ಬಂದನು. ಆದರೆ ಹಿಂದುಸ್ತಾನದಮೇಲೇರಿಬರುವ ಧೈರ್ಯ ಮಾಡುವ ಮೊದಲು ಅವನು ಅಕ್ಸಸ್ ಮತ್ತು ಸಮರಖಂಡಕ್ಕೆ ತಿರುಗಿ ಆ ಮೇಲೆಯೆ ಸಿಂಧು ನದಿಯನ್ನು ದಾಟಿ ಲಾಹೋರಿಗೆ ಬಂದನು.

ಚೆಂಗಿಝ ಖಾನ ಮತ್ತು ತೈಮೂರಲೇನರಾದರೂ ತುರ್ಕಸ್ತಾನದಿಂದಲೇ ಹಿಂದುಸ್ತಾನಕ್ಕೆ ನುಗ್ಗಿದರು. ಈ ಪ್ರಕಾರ ನೆಲದಿಂದ ಈ ದೇಶದ ಮೇಲೆ ದಾಳಿ ಮಾಡಿದವರೆಲ್ಲರೂ ತುರ್ಕಸ್ತಾನದಿಂದ ಹಿಂದುಕುಶ ಪರ್ವತಗಳನ್ನು ಸಮೀಪಿಸಿ ೧೨—೧೬ ಸಾವಿರ ಅಡಿ ಎತ್ತರದ ಕಣಿವೆಗಳ ಮೂಲಕ ಬಂದು ಇಕ್ಕಟ್ಟಾದ ಖೈಬರ ಕಣಿವೆಯಿಂದ ಸುಲೇಮಾನ ಪರ್ವತ ಶ್ರೇಣಿಗೂ ಅಲ್ಲಿಂದ ಸಿಂಧು ನದಿಗೂ ಮುಟ್ಟಿದರು.

ಹಿಂದುಸ್ತಾನಕ್ಕೆ ರಶಿಯಾದ ಭಯವಿರುವದು ಬ್ರಿಟಿಶರಿಗೆ ಯಾವಾಗಲೂ ಚುಚ್ಚುತ್ತಲೇ ಇತ್ತು. ವಿಶೇಷವಾಗಿ ಲಾರ್ಡ ಕರ್ಝನ್ನರಿಗೆ "ಮನುಷ್ಯರೂಪಿ ಕರಡಿ" ಯ ಹೆದರಿಕೆ ಬಹಳವಾಗಿತ್ತು. "ಹಿಂದುಸ್ತಾನವಿಲ್ಲದೆ ಬ್ರಿಟಿಶ ಸಾಮ್ರಾಜ್ಯ ಉಳಿಯಲಾರದು" ಎಂದು ಬರೆದ ಅವರು ಪ್ರಸಿದ್ಧ ರಶಿಯನ್ ಸೇನಾಪತಿಯಾದ ಜನರಲ್ ಸ್ಕೋಬಲೇವನ "ಮಧ್ಯ ಏಶಿಯಾದಲ್ಲಿ ರಶಿಯಾದ ಬಲ ಬೆಳೆದಷ್ಟು ಹಿಂದುಸ್ತಾನದಲ್ಲಿ ಬ್ರಿಟಿಶರೆದು ಕುಗ್ಗುವದು. ಆಗ ಅವರು ಯುರೋಪಿನಲ್ಲಿ ಹೆಚ್ಚು ಮೆತ್ತಗೆ ನಡೆದುಕೊಳ್ಳುವರು" ಎಂಬ ವಾಕ್ಯಗಳಿಂದ ಯಾವಾಗಲೂ ಚಿಂತಾಕ್ರಾಂತರಾಗಿರುತಿದ್ದರು.

ಝಾರರ ಗತ್ತುಗಾರಿಕೆ

ಝಾರರ ಕಾಲದಲ್ಲಿ ರಶಿಯನ್ ಸರಕಾರ ಯುರೋಪಿನಲ್ಲಿನ ತನ್ನ ಗತ್ತುಗಾರಿಕೆಗೂ ಹಿಂದುಸ್ತಾನಕ್ಕೂ ತಳಕು ಹಾಕುತಿದ್ದದುಂಟು. ಫ್ರಾನ್ಸ-ಇಂಗ್ಲಂಡುಗಳ ನಡುವೆ ಜೀವನ-ಮರಣ ಹೋರಾಟ ನಡೆದಿದ್ದಾಗ ೧೭೮೬ರಲ್ಲಿ ಫ್ರೆಂಚ ಕ್ರಾಂತಿಕಾರನಾದ ಮೀರಾಬ್ಯೂ ಅವನು ಹಿಂದುಸ್ತಾನದ ಮೇಲೆ ದಾಳಿ ಮಾಡಬೇಕೆಂದು ರಶಿಯಾಕ್ಕೆ ಬಿನ್ನವಿಸಿಕೊಂಡಿದ್ದನು.

ನೆಪೋಲಿಯನ್ನನು ಇಜಿಪ್ತದ ಮೇಲೆ ಮಾಡಿದ ಅಭಿಯೋಗ ಹಿಂದುಸ್ತಾನದ ಆಕ್ರಮಣಕ್ಕೆ ಸನ್ನಾಹರೂಪವಾಗಿತ್ತು. ನೀಲ ನದಿಯ ದಂಡೆಯಲ್ಲಿ ಅವನ ಸಾಹಸ ವಿಫಲವಾದ ಬಳಿಕ ಅವನು ಸೆಂಟ ಪೀಟರ್ಸಬರ್ಗಿನಲ್ಲಿದ್ದ ಝಾರ ಪಾಲನಿಗೆ ಪತ್ರ ಬರೆದು ಹಿಂದುಸ್ತಾನದ ಮೇಲೆ ರಶಿಯನ್ನರು ದಾಳಿ ಮಾಡಬೇಕೆಂದೂ ತಾನು ಧನ ಜನ ಸಹಾಯ ಮಾಡುವೆನೆಂದೂ ಕೇಳಿಕೊಂಡನು. ಪಾಲನು ಅದಕ್ಕೊಪ್ಪಿ ಕಾಸಕ ಸೇನೆಯ ಜನರಲ್ ಅರ್ಲಾವನಿಗೆ ೨೨೫೦೦ ಸವಾರರೊಂದಿಗೆ ಹಿಂದುಸ್ತಾನದತ್ತ ಸಾಗಲು ಅಜ್ಞಾಪಿಸಿದನು.

"ಈ ಅಭಿಯೋಗಕ್ಕೆ ಪ್ರತಿಫಲವಾಗಿ ಹಿಂದುಸ್ತಾನದ ಸಮಸ್ತ ಸಂಪತ್ತಿಯು ನಿನ್ನದಾಗುವದು" ಎಂದು ಅವನು ಬರೆದಿದ್ದನು. ಬಾಲ್ಶೆವಿಕರು ಜೋಪಾನವಾಗಿಟ್ಟಿರುವ ಝಾರನ ಕಾಲದ ಆಲೇಖಗಳಲ್ಲಿ ಈ ಪತ್ರವೂ ಒಂದಾಗಿದ್ದು ಅದನ್ನು ಪ್ರತಿ ಮಾಡಿಕೊಳ್ಳುವ ಸುಯೋಗ ನನಗೆ ದೊರೆತಿತ್ತು. ಇದರಿಂದ ರಶಿಯಾಕ್ಕೆ "ಬೆಲೆ ಬಾಳುವ ವಸ್ತುಗಳ ವ್ಯಾಪಾರವೂ ದೊರಕುವದು ಮಾತ್ರವಲ್ಲದೆ ಶತ್ರುವಿನ ಹೃದಯವನ್ನೆ ಭೇದಿಸಿದಂತಾಗುವದು." ಆ ಶತ್ರುವೆಂದರೆ ಇಂಗ್ಲಂಡಲ್ಲದೆ ಬೇರಾರಲ್ಲ. "ನಾನು ನನ್ನಲ್ಲಿರುವ ಎಲ್ಲ ನಕಾಶೆಗಳನ್ನು ಕಳಿಸಿದ್ದೇನೆ. ಆದರೆ ಅವು ಖಿವಾ ಮತ್ತು ಅಕ್ಸಸ್ ವರೆಗೆ ಮಾತ್ರವೇ ಇವೆ," ಎಂದು ಪಾಲನು ಬರೆದಿದ್ದನು.

ಮುಂದೆ ಪಾಲನು ಒಂದು ನಕಾಶೆಯನ್ನು ದೊರಕಿಸಿಕೊಂಡು ಅದನ್ನು ಡಾನ ನದಿಯ ದಂಡೆಯಲ್ಲಿ ಬೀಡು ಬಿಟ್ಟಿದ್ದ ಜನರಲ್ ಅರ್ಲಾವನಿಗೆ ವಿಶೇಷ ದೂತನ ಮೂಲಕ ಕಳಿಸಿದನೆಂದು ದಾಖಲೆಗಳಿಂದ ಗೊತ್ತಾಗುತ್ತದೆ. ಆದರೆ ಕಾಸಕರಿಗೆ ಯುರೋಪಿಯನ್ ರಶಿಯಾ ದಾಟಿ ಹೋಗುವದು ಸಾಧ್ಯವಾಗಲಿಲ್ಲ. ಪಾಲನ ಮರಣಾನಂತರ ಪಟ್ಟಕ್ಕೆ ಬಂದ ಮೊದಲನೆ ಅಲೆಂಗ್ಝಾಂಡರನು ಇದಿ ಯೋಜನೆಯನ್ನೆ ಬಿಟ್ಟುಕೊಟ್ಟನು.

ನೆಪೋಲಿಯನ್ನನ ಯೋಜನೆ

ನೆಪೋಲಿಯನ್ನನು ಅಲೆಗ್ಝಾಂಡರನನ್ನು ಟಿಲ್ಸಿಟ ನದೀ ತೀರದಲ್ಲಿ ಕಂಡನು. ಅವರಿಬ್ಬರೂ ಸೇರಿ ಹಿಂದುಸ್ತಾನದ ಮೇಲೇರಿ ಹೋಗಲು ಒಂದು ಯೋಜನೆಯನ್ನು ಸಿದ್ಧಪಡಿಸಿದರು. ರಶಿಯನ್ ಪ್ರಾಚ್ಯವಸ್ತುಕೋಶದಲ್ಲಿ ನೆಪೋಲಿಯನ್ನನು ೧೮೦೮ ಫೆಬ್ರುವರಿ ೨ ರಲ್ಲಿ ಅಲೆಗ್ಝಾಂಡರನಿಗೆ ಬರೆದ ಪತ್ರವೊಂದು ದೊರಕುತ್ತದೆ. ಅದರಲ್ಲಿ ೫೦೦೦೦ ಜನರ ಫ್ರೆಂಚ ರಶಿಯನ್ ಸೈನ್ಯವೊಂದನ್ನು ಸಂಘಟಿಸುವ ಹಂಚಿಕೆ ವಿವರಿಸಲ್ಪಟ್ಟಿದೆ. ಹಾಗೆ ಮಾಡಿದರೆ "ಇಂಗ್ಲಂಡು ಬಾದಾಕ್ರಾಂತವಾಗುವದು" ಎಂದು ನೆಪೋಲಿಯನ್ನನು ಭರಿಸ್ಯ ನುಡಿದಿದ್ದನು. ಇಂಗ್ಲಂಡಿನ ವಿರುದ್ಧ ಏಶಿಯಾದಲ್ಲಿ ಮಾಡುವ ಸಾಹಸಗಳಿಗೆ ಪ್ರತಿಫಲವಾಗಿ ರಶಿಯಾಕ್ಕೆ ಯುರೋಪಿನಲ್ಲಿ ಸ್ಥಾನಮಾನ್ನು ಅವನು ವಾಗ್ದಾನಮಾಡಿದ್ದನು.

ಎರಡನೆ ಅಲೆಗ್ಝಾಂಡರನು "ಹಿಂದುಸ್ತಾನವನ್ನು ಸಾವಕಾಶವಾಗಿ ಸಮೀಪಿಸಿ, ಬೇಕಾದಾಗ ರಶಿಯಾದ ಜನ್ಮವೈರಿಯ ಮೇಲೆ ಪ್ರಾಣಹಾರಕ ಆಘಾತವನ್ನು ಬೀಸಲು ಸಿದ್ಧವಾಗಿರುವಂತೆ ಸೂಕ್ಷ್ಮ ಯೋಜನೆಯೊಂದನ್ನು" ಸಿದ್ಧಗೊಳಿಸಿದ್ದನೆಂದು ದಾಖಲೆಗಳು ಹೇಳುತ್ತವೆ.

ಆದರೆ ಝಾರರ ಕಾಲದ ರಶಿಯನ್ ಸಾಮ್ರಾಜ್ಯವಾದಿಗಳು ಹಿಂದುಸ್ತಾನವನ್ನು ಆಕ್ರಮಿಸುವ ಇಂಥ ಕಲ್ಪನಾರಾಜ್ಯದ ಕನಸುಗಳಲ್ಲಿ ತಲ್ಲೀನರಾಗುತಿದ್ದರೂ ನಿಜವಾಗಿ ಆ ಭಾಗದಲ್ಲಿ ಬಹಳ ಕೆಲಸವನ್ನು ಮಾಡಲೇ ಇಲ್ಲವೆಂದು ಸ್ಪಷ್ಟವಾಗಿದೆ. ಐತಿಹಾಸಿಕ ದಾಖಲೆಗಳನ್ನು ನೋಡಿದರೆ, ರಶಿಯನ್ನರು ಹಿಂದುಸ್ತಾನದಲ್ಲಿ ಹೇಳಿಕೊಳ್ಳುವಷ್ಟು ಭಾಗವನ್ನು ಆಕ್ರಮಿಸುವದಾಗಲಿ ಆಕ್ರಮಿಸಿದ ಭಾಗವನ್ನು ಆಳುವದಾಗಲಿ, ತಮಗೆ ಸಾಧ್ಯವಾದೀತೆಂದು ಬಗೆದಂತೆ ತೋರುವದಿಲ್ಲ.

ಹಿಂದುಸ್ತಾನಕ್ಕೆ ರಶಿಯಾದ ಭಯವೆಂಬದು ಅರ್ಧಮರ್ಧ ಬ್ರಿಟಿಶ ಸಾಮ್ರಾಜ್ಯವಾದಿ ಮನೋವೃತ್ತಿಯ ಸಂಶಯದಿಂದ ಉದ್ಭವಿಸಿದ್ದರೆ ಉಳಿದ ಅರ್ಧ ರಶಿಯನ್ನರು ಬೇಕೆಂದೇ ಬ್ರಿಟಿಶರಿಂದ ಸವಲತ್ತುಗಳನ್ನು ಕಸಿದುಕೊಳ್ಳಲು ಹೂಡಿದ ಸುಳ್ಳು ಬೆದರಿಕೆಯಾಗಿತ್ತು. ಹಿಂದುಸ್ತಾನದತ್ತ ನುಗ್ಗುವದನ್ನು ಬಿಟ್ಟುಬಿಡುವದಕ್ಕೆ ಪ್ರತಿಫಲವೆಂದು ರಶಿಯನ್ನರ ಬೇರೆ ಕೆಲವು ಬೇಡಿಕೆಗಳಿಗೆ ಬ್ರಿಟಿಶರ ಸಮ್ಮತಿಯನ್ನು ದೊರಕಿಸಿಕೊಳ್ಳಬಹುದೆಂದು ಝಾರರ ಆಸೆ. ೧೯೦೭ ರಲ್ಲಿ ಇದು ನಿಜವಾಗಿಯೂ ಆಯಿತು. ಇರಾಣವನ್ನು ರಶಿಯಾ ಮತ್ತು ಬ್ರಿಟಿಶ ಪ್ರಭಾವದ ವಿಭಾಗಗಳೆಂದು ಪಾಲು ಮಾಡಿಕೊಳ್ಳುವ ಒಂದು ಒಡಂಬಡಿಕೆಯಾದುದರಿಂದ ಆ ಮೂಲಕ ಅಫಗಾಣಿಸ್ತಾನದಲ್ಲಿ ಬ್ರಿಟಿಶರ ವಿಶೇಷ ಹಕ್ಕನ್ನು ರಶಿಯನ್ನರು ಮನ್ನಿಸಿದಂತೆ ಮತ್ತು ಪರ್ಯಾಯದಿಂದ ಹಿಂದುಸ್ತಾನದ ಮೇಲಿನ ಆಸೆಯನ್ನು ಝಾರನು ತ್ಯಜಿಸಿದಂತೆ ಆಯಿತು. ಈ ಒಡಂಬಡಿಕೆಯ ಫಲವಾಗಿ ಜರ್ಮನಿಯ ವಿರುದ್ಧ ರಶಿಯಾ ಮತ್ತು ಇಂಗ್ಲಂಡು ಮೊದಲನೆ ಮಹಾಯುದ್ಧದಲ್ಲಿ ಸಹಕರಿಸಿದವು. ಆಗ ತುರ್ಕಿಯ ಡಾರ್ಡನೆಲ್ಸ ಜಲಸಂಧಿಯ ಮೇಲೂ ಕಾನ್ಸ್‌ಟಾಂಟಿನೋಪಲ ನಗರದ ಮೇಲೂ ರಶಿಯಾ ಕೈಯೊಡ್ಡಿದ್ದಕ್ಕೆ ಇಂಗ್ಲಂಡು ಒಪ್ಪಿಗೆ ಕೊಟ್ಟಿತು.

ಗಾಬರಿಬಡಕರ ಕಲ್ಪನೆ

ಇಂದಂತೂ ಜಗತ್ತಿನ ಚಿತ್ರವೇ ಬದಲಾಗಿದೆ. ಇಂಗ್ಲಂಡಿನಲ್ಲಿಯೂ ಹಿಂದುಸ್ತಾನದಲ್ಲಿಯೂ ಬೇರೆ ಕಡೆಗಳಲ್ಲಿಯೂ ಉದ್ಭವವಾಗಿರುವ ಆರ್ಥಿಕ ಸ್ಥಿತಿಗತಿಗಳೂ ರಾಜಕೀಯ ಒತ್ತಾಯವೂ ಸೇರಿ ಬ್ರಿಟಿಶರನ್ನು ಹಿಂದುಸ್ತಾನದಿಂದ ಕಾಲು ಕಿತ್ತುವಂತೆ ಮಾಡಿವೆ. ಈ ಕಾರಣದಿಂದಲೆ ಈ ಸಂಧಿಯನ್ನು ಸಾಧಿಸಿ ರಶಿಯನ್ನರು ತಮ್ಮ ಹಲಗಾಲದ ಹಂಬಲದಂತೆ ಹಿಂದುಸ್ತಾನವನ್ನು ತಮ್ಮ ವಶಾಹತಾಗಿ ಮಾಡಿಕೊಳ್ಳಲು ಯತ್ನಿಸಬಹುದೆಂಬ ಸೂಚನೆಗಳು ಬಂದಿವೆ.

ಗಾಬರಿಬಡಕರು ಕಾಣುವ ದೃಶ್ಯವಿದು: ಹತ್ತು ಲಕ್ಷ ಕೆಂಪು ಸೈನಿಕರು ಹತ್ತಾರು ಸಾವಿರ ಟ್ಯಾಂಕುಗಳು, ತೋಫುಗಳು, ತೋಫುವಾಹನಗಳು, ಲಾರಿಗಳು, ಟ್ರಕ್ಕುಗಳು ಮೊದಲಾದವುಗಳನ್ನೊಡಗೊಂಡು ಯುರೋಪಿಯನ್ ರಶಿಯಾದಿಂದ ಪೂರ್ವಾಭಿಮುಖವಾಗಿ ಓಡುತ್ತ, ಉರಲ ಪರ್ವತಗಳನ್ನು ದಾಟಿ, ನಿರ್ಜನ ಕಳೆಗಿರುವ ಹುಲ್ಲುಗಾವಲುಗಳನ್ನು ದಾಟಿ, ಅಫಗಾಣಿಸ್ತಾನವನ್ನು ನುಗ್ಗಿ, ಹಿಂದುಕುಶ ಪರ್ವತಶ್ರೇಣಿಯ ಭಯಂಕರ ಮಂಜಿನ ರಾಶಿಯನ್ನು ಅಂಕರಿಸಿ ಅಲ್ಲಿಂದ ಕೆಳಗೆ ಶಾಂತವಾದ ಹಿಂದೀ ಬಯಲುಗಳಲ್ಲಿ ಹೊಕ್ಕಬಹುದು— ಎಂದು.

ಇದಕ್ಕಾಗಿ ಪ್ರಚಂಡ ರಶಿಯನ್ ಸೇನೆಯೊಂದು ಹಿಂದುಸ್ತಾನದ ಮೂಲೆಮೂಲೆಯನ್ನು

—೧೩ ನೇ ಪುಟಕ್ಕೆ

ಉತ್ತರ ಕನ್ನಡದ ಔದ್ಯೋಗಿಕ ಯೋಜನೆಗಳು

ಬರೆದವರು ಶ್ರೀ ಕೆ. ಎನ್. ರಾವ್, ಸಿರ್ಸಿ

ಸನ್ ೧೯೩೮ರಲ್ಲಿ ಸಿರ್ಸಿಗೆ ಬಂದ ಮುಂಬಯಿ ಇಲಾಖೆಯ ಆರೋಗ್ಯ ಮಂತ್ರಿಗಳಾದ ಮಾನ್ಯ ಶ್ರೀ ಗಿಲ್ಡರರು ಹುಲೇಕಲ್ಲ ಸೋದೆಗಳನ್ನು ಕಂಡು ಬಂದು "I Find many pregnant males here" ಎಂದಿದ್ದರು. ಅಂದರೆ ಜ್ವರ ಗಡ್ಡೆ ಬೆಳೆದು ಗಂಡಸರೂ ದೊಡ್ಡ ಹೊಟ್ಟೆಯವರಾಗಿದ್ದರು. ಹೀಗಾಗಿ ಇಂಥದ ಕಾಡು ಪ್ರದೇಶಕ್ಕೆ ಯಾರೂ ಬರುತ್ತಿರಲಿಲ್ಲ. ಎಷ್ಟೆಯಾದರೂ ಬಂದರೆ ಆ ಜಿಲ್ಲೆಯು ಪ್ರಗತಿಯೋಗ್ಯ ಸ್ಥಳವೆಂದು ಶಿಫಾರಸು ಮಾಡಿ ಯಾವ ಅಧಿಕಾರಿಗಳೂ ಸರಕಾರಕ್ಕೆ ಮನವಿ ಮಾಡಿಕೊಂಡ ಪುರಾವೆ ಇಲ್ಲವೆಂದು ಶ್ರೀ ಸಂ. ಶಿ. ಗಾಂವಕರರು ಹೇಳುತ್ತಿದ್ದರು. ಅಲ್ಲದೆ ಅಲ್ಲಿಯ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣ ಹೊಂದಬೇಕಾದರೆ ಧಾರವಾಡ, ಬೆಳಗಾಂವ, ಅಥವಾ ಇನ್ನಾವುದೋ ಊರಿಗೆ ಹೋಗಿ ಶಾಲೇಜು ಸೇರಬೇಕು. ಇಷ್ಟೆಲ್ಲ ಕಾರಣಗಳಿಂದ ನಮ್ಮ ಜಿಲ್ಲೆಯು ಪ್ರಗತಿಯು ಕನಸು ಕಾಣದಂತಾಗಿದೆ.

ಆದರೆ ವ್ಯಾಪಾರೋದ್ಯಮಗಳಲ್ಲಿ ಜಿಲ್ಲೆಯು ಕಡಿಮೆಯಿಲ್ಲ. ರಾಜಕೀಯದಲ್ಲಿ ಶಿರಸಿ, ಸಿದ್ದಾಪುರ, ಅಂಕೋಲೆಗಳನ್ನು ನೆನಸಿಕೊಂಡರೆ ಮೈ ನವಿರೇಳುತ್ತದೆ. ಈ ರಾಜಕೀಯ ಚಳವಳಿಯು ಬಡವ ಮತ್ತು ಮಧ್ಯಮ ಜನರಿಂದೇ ಸಾಗಿತ್ತು ವಿನಾಹ ಶ್ರೀಮಂತರಿಂದಲ್ಲ. ಅಲ್ಲಿಯ ಬಿದಿರು ಕಟ್ಟಿಗೆಗಳಿಂದ ನೆರೆಹೊರೆಯ ನಾಲ್ಕು ಜಿಲ್ಲೆಗಳಲ್ಲಿಯೂ ಮನೆ ಮತ್ತು ಅಡಿಗೆಗಳಾಗುತ್ತಿವೆ. ಮುಂಬಯಿ ನಗರದಲ್ಲಿ ಗಂಧದಪರಿಮಳ ಮತ್ತು ಫಾರ್ಸಿ ಜನರು ಗಂಧದ ವ್ಯಾಪಾರದಿಂದ ಕಟ್ಟಿಸಿದ ಅಗ್ಯಾರಂತಸ್ತಿನ ಮನೆಗಳೆಲ್ಲ ಉತ್ತರ ಕನ್ನಡ ಜಿಲ್ಲೆಯ ಉತ್ಪತ್ತಿಯಿಂದಲೇ ಇರುತ್ತವೆ. ಅಡಿಕೆ, ಯಾಲಕ್ಕಿ, ಮೆಣಸು, ಪಿಹಿಸು, ತೆಂಗುಗಳು ನಮ್ಮ ಜಿಲ್ಲೆಯ ಗರ್ಭದಿಂದ ಹೊರಟಂತಹವು. ಇದನ್ನೆಲ್ಲ ತಿಳಿದು ಮುಂಬಯಿ ಸರಕಾರದವರು ಕೆಲವು ಔದ್ಯೋಗಿಕ ಕಾರ್ಯಕ್ರಮಗಳನ್ನು ಕೈಕೊಳ್ಳಲಾರಂಭಿಸಿದ್ದಾರೆ. ಅವಕ್ಕೆ "ಕ್ಯಾಸರಾವರ್ಕಿಂಗ್ ಪ್ಲಾನ್ಸ್" ಎಂದು ಹೆಸರಿಟ್ಟು ಕಾರ್ಯಾರಂಭ ಮಾಡಿದ್ದಾರೆ. ಅವುಗಳಲ್ಲಿ ಕಾಳೀನದೀ ವಿದ್ಯುದ್ಯೋಜನೆ ಮತ್ತು ಅರಣ್ಯ ಯೋಜನೆಗಳು ಮುಖ್ಯವಾದುವು. ಇಂದಲ್ಲ ಇನ್ನು ಹತ್ತು ವರ್ಷಗಳಲ್ಲಿ ನಮ್ಮ ಜಿಲ್ಲೆಯು ಮರದ ಹುಡಿ ಮತ್ತು ಕಾಗದ ಕಾರ್ಖಾನೆಗಳ ಕೇಂದ್ರವಾಗುವದರಲ್ಲಿ ಸಂದೇಹವಿಲ್ಲ.

ಮರಗಳಿಗೆ ಕನ್ನಡ ಹೆಸರುಗಳಿಲ್ಲ

ಈಗ ಹುಟ್ಟಿದ ಯೋಜನೆಗಳಲ್ಲಿ ಕಾಳೀ ನದೀ ವಿದ್ಯುದ್ಯೋಜನೆಯ ಶಾಖೆ ಮತ್ತು ಮರಗಳನ್ನು ಎಣಿಸುವ ಶಾಖೆಗಳಲ್ಲಿ ಕೆಲಸ ಮಾಡುತ್ತಿರುವವರಲ್ಲಿ ೧೦೦ಕ್ಕೆ ೭೫ ಜನರು ಧಾರವಾಡ, ಬೆಳಗಾಂವ ಜಿಲ್ಲೆಯವರಿರುತ್ತಾರೆ. ಹಲಕೆಲವು ಕಾರವಾರ ಕೂಲಿಗಳಿರುತ್ತಾರೆ. ಕಾಡಿನ ಅನುಭವ ಬಯಲು ಸೀಮೆಯವರಿಗೆ ಕಡಿಮೆ ಅದಕ್ಕೆ ಕಾಡಿನಲ್ಲಿ ನುರಿತವರೇ ಕಾಡಿನಲ್ಲಿರಬೇಕು. ಕಾಡಿನಲ್ಲಿರುವುದು ಒಂದು ಜಾತಿಯ ಮರವಲ್ಲ. ಲಕ್ಷಾಂತರ ಜಾತಿಗಳಿವೆ, ಅವೆಲ್ಲಕ್ಕೂ ಬೇರೆ ಬೇರೆ ಹೆಸರುಗಳಿವೆ. ಒಂದೊಂದು ಹೆಸರಿಗೂ ಅದರ ಮೂಲ ಕಾರಣವಿದೆ. ಇದನ್ನೇ ಇಂಗ್ಲೀಷರು ತಮ್ಮ ಭಾಷೆಯಿಂದ BotaniCal Nameo ಎನ್ನುವುದು. ಸರಕಾರೀ ಲೆಕ್ಕಕ್ಕೆ ಇವುಗಳನ್ನು ಶಾಸ್ತ್ರೀಯಮತ್ತು ಸಾಮಾನ್ಯ ಎಂದು ಎರಡು ಹೆಸರುಗಳಿಂದ ಕಾಗದ ಪತ್ರಗಳನ್ನು ಬರೆಯಬೇಕಾಗಿದೆ. ಕೂಲಿಯವರು ಕೊಂಕಣಿಯವರಿರುವುದರಿಂದಲೂ ಕೆಲವರು ಮರಾಠಿಯವರಿರುವುದರಿಂದಲೂ ಗಾಂವಟಿ ಹೆಸರುಗಳನ್ನು ತಮ್ಮ ಭಾಷೆಯಿಂದಲೇ ಹೇಳುತ್ತಾರೆ. ವಿನಾ ಕನ್ನಡದಲ್ಲಿಲ್ಲ. ಉದಾಹರಣೆಗಾಗಿ ಕೌಲು (ಕವಲು) ಮರ. ಅದನ್ನು ಅವರು "ಕುಂಭ್ಯಾ" ಅನ್ನುತ್ತಾರೆ. ಮತ್ತೆ "ಹುಣಾಲ" ಮರ ಇದನ್ನು "ಕಿಂದಳ" ಅನ್ನುತ್ತಾರೆ. "ಕೇದ" ಮರವನ್ನು "ಬಿದ್ಯಾ" ಅನ್ನುತ್ತಾರೆ. "ಬೂರಲ" ಮರ" ವನ್ನು "ಸಾವ್ರಿ" ಅಂತ ಕರೆಯುತ್ತಾರೆ. ಹೀಗಾಗಿ ಕನ್ನಡದ ಮರಗಳಿಗೂ ಬೇರೆ ಹೆಸರುಗಳನ್ನು ಕೊಡುತ್ತ ಬಂದು, ಕೊನೆಗೂ ನಮ್ಮ ಕನ್ನಡ ಸಂಸ್ಕೃತಿಯೇ ಕಾಡುಪಾಲಾಗಬಹುದು.

ಕೆಲಸಗಾರರು

ಈ ಖಾತೆಯಲ್ಲಿ ಕೂಲಿಗಳಂತೂ ಬೇಕೆ ಬೇಕು. ಕೂಲಿಗಳಲ್ಲಿ ಎರಡು ವಿಧಾನದವರಿದ್ದಾರೆ. ಖಿರಕ್ಷ್ಸರರು ಸಾಕ್ಷರರು ಇಂದಿನ ವಾತಾವರಣದಲ್ಲಿ ಖಿರಕ್ಷರ ಕೂಲಿಗಳು ಸಿಗುವುದು ಸ್ವಲ್ಪ ಕಷ್ಟ. ಆದರೆ ಸಾಕ್ಷರರಿಗಾಗಿ "ಬೇಕಾಗಿದ್ದಾರೆ" ಎಂದು ಜಾಹೀರಾತನ್ನು ಕೊಟ್ಟರೆ, ಬೇಕಾದ್ದಕ್ಕಿಂತ ಹತ್ತುಪಟ್ಟು ಹೆಚ್ಚು ಜನರು ಸಿಗುತ್ತಾರೆ ಆ ಮೇಲೆ ಕೆಲಸವಿಲ್ಲವೆಂದು ಪ್ರಚಾರಮಾಡಬೇಕಾಗುತ್ತದೆ. ಖಿರಕ್ಷರ ಕೂಲಿಗಳಿಗೆ ರೂ೧—೯—೦ದಿನಗೂಲಿ ಮಾತ್ರ. ಆದರೆ ಸಾಕ್ಷರರಿಗೆ ತಿಂಗಳಿಗೆ ರೂ. ೫೫ ಮಾತ್ರ. ಆದರೆ ಕಾಡಿನಲ್ಲಿದ್ದರೆ ಮಲೆನಾಡ ಭತ್ತೆ ಮತ್ತು ದಿನ ಭತ್ತೆಗಳು ಸಿಗುತ್ತವೆ. ಆದರೆ ಈ ಕೆಲಸ ನವಂಬರದಿಂದ ಮೇ ತಿಂಗಳವರೆಗೆ ಮಾತ್ರ ಮೇ ತಿಂಗಳ ನಂತರ ಬೇಕಷ್ಟು ಜನರನ್ನು ಇಟ್ಟುಕೊಂಡು ಉಳಿದವರನ್ನು ಮನೆಗೆ ಕಳುಹಿಸುತ್ತಾರೆ. ಈ ಕೆಲಸ ಮೇ ತಿಂಗಳಲ್ಲಿ ನಿಂತು ಹೋದುದರಿಂದ ಖಿರಕ್ಷರ ಕೂಲಿಗಳಿಗೇನೂ ತೊಂದರೆಯಿಲ್ಲ. ಏಕೆಂದರೆ ಅವರ ಮಳೆಗಾಲದ ಸಾಗುವಳಿಕೆಲಸ ಆರಂಭವಾಗುತ್ತದೆ. ಸಾಕ್ಷರರಿಗೆ ಮಾತ್ರ ತ್ರಿಶಂಕು ಸ್ವರ್ಗ. ಮರಳಿ ಅವರು ಬೆಳಗಾಂವಿಗೆ ಬಂದರೆ ಅವರ ಪುರದೃಷ್ಟಕ್ಕೆ ರೂ. ೫೫ ಮಾತ್ರ!!

ಅಲ್ಲದೆ ಕಾಡುಗುಡ್ಡಗಳಲ್ಲಿ ಅಲೆದಾಡಿ ಸಿಕ್ಕ ನೀರು ಕುಡಿದು, ಸಿಕ್ಕಾಗ ಊಟಮಾಡಿ, ಸಂಪಾದಿಸಿದ "ಮಲೆದೇವಿ"ಯು ಬೆಳಗಾಂವಿಗೆ ಬಂದ ಕೂಡಲೆ ತನ್ನ ಶಕ್ತಿ ತೆರೆಸಿಕೊಂಡು ತನ್ನ ಭಕ್ತನನ್ನು ೧೦೫ ಡಿಗ್ರಿ ಜ್ವರದಿಂದ ಮಲಗಿಸಿ ಬಿಡುತ್ತದೆ. ಮುಂದೆ ಅವನಿಗೆ ಡಾಕ್ಟರರೇ ಗತಿ. ಅದೂ ಕೈಯಲ್ಲಿ ಹಣವದ್ದರೆ ಮಾತ್ರ. ಹಾಗಾದರೆ ಇದಕ್ಕೆ ಸುಲಭೋಪಾಯ ಯಾವುದೆಂದರೆ "ಕೆನರಾ ವರ್ಕಿಂಗ್ ಪ್ಲಾನ್"ನ ಹೆಡ್ ಕ್ವಾರ್ಟರ್ಸನ್ನು "ಕೆನರಾದಲ್ಲಿ" ಯೇ ಇಡುವುದು. ಅಲ್ಲದೆ ಜಿಲ್ಲೆಯ, ಹವೆಯ, ಕಾಡಿನ ಅನುಭವವುಳ್ಳವರನ್ನೇ ತಂದು ಅವರನ್ನು ಉದ್ಯೋಗದಲ್ಲಿ ಉಪಯೋಗಿಸಿಕೊಂಡು ಅದರಿಂದ ಸರಕಾರೀ ಪಂಚವಾರ್ಷಿಕ ಯೋಜನೆಯನ್ನು ಸಾಧಿಸುವುದು ಸುಲಭೋಪಾಯವೆಂದು ನನಗನಿಸುತ್ತದೆ.

ಅರಣ್ಯ ಯೋಜನೆಯಲ್ಲಿ ಕೆಲಸದ ಬಗೆ

ಒಂದೊಂದು ಯೋಜನೆಗೆ ಇದರಲ್ಲಿ ಒಬ್ಬೊಬ್ಬ ಪ್ರಾದೇಶಿಕ ಅರಣ್ಯಾಧಿಕಾರಿ ಇರುತ್ತಾನೆ ಅಲ್ಲಿ ಮಾಡಲ್ಪಡುವ ಕೆಲಸಕ್ಕೆ ಅನುಗುಣವಾಗಿ ಉಪಾಧಿಕಾರಿಗಳೂ ಅವರ ಕೆಳಗಿನವರೂ ಇರುತ್ತಾರೆ. ಅಲ್ಲದೆ ಕೆಲವು ವನಪಾಲಕರು. ಸರ್ವೆಯವರು, ಮರಗಳನ್ನು ಎಣಿಸುವವರು, ಉಗ್ರಾಣದವರು, ಮತ್ತು ಕಾರ್ಯಾಲಯದ ಗುಮಾಸ್ತರು ಇರುತ್ತಾರೆ. ಚಿತ್ರ ತಿಳಿದವರು ನಕಾಶೆಗಳನ್ನು ಬಿಡಿಸುತ್ತಾರೆ ಅಂಕೆ ತಿಳಿದವರು ಎಣಿಕೆಯ ಕೆಲಸ ಮಾಡುತ್ತಾರೆ.

ಈ ರೀತಿ ವಿಭಾಗಗಳಾದ ಮೇಲೆ ಆಯಾ ಜಾಗದ ನಕಾಶೆ ತೆಗೆದುಕೊಂಡು ಸರ್ವೇಯರು ಗೆರೆಗಳನ್ನು ಹಾಕುತ್ತ ಹೋಗುತ್ತಾರೆ. ಮರಗಳನ್ನು ಎಣಿಸುವವರು, ಯಾವ ಜಾತಿಯ, ಎಷ್ಟು ಮರಗಳಿರುತ್ತವೆಂದು ಕೂಲಿಗಳ ಸಹಾಯದಿಂದ ಎಣಿಸಿ ಯೋಜನೆಯನ್ವಯ ನೂರಕ್ಕೆ ಸರಾಸರಿ ತೆಗೆಯುತ್ತಾರೆ.

ಈ ರೀತಿ ಈಗ ತಾತ್ಪೂರ್ತಿಕವಾಗಿ ಸ್ಥಾಪಿಸಿದ ಈ ಎರಡು ವಿಭಾಗಗಳಲ್ಲಿ ಒಂದು ದಾಂಡೇಲಿಯಿಂದ, ಕಾರವಾರ, ಅಂಕೋಲೆಯವರೆಗೂ ಇನ್ನೊಂದು ವಿಭಾಗ ಯಲ್ಲಾಪುರದಿಂದ ಸಿದ್ದಾಪುರದ ವರೆಗೂ ಕರಾವಳಿಯಲ್ಲಿ ಅಂಕೋಲೆಯಿಂದ ಹೊನ್ನಾವರದ ವರೆಗೂ ಸರ್ವೆ ಮಾಡುತ್ತಾರೆ.

ಈ ಎರಡನೇ ವಿಭಾಗದ ಕೆಲಸ ಈಗ ಶಿರ್ಸಿ ತಾಲೂಕು ಗಡಿಯ ವರೆಗೆ ಮುಗಿದಿದೆ. ಮುಂದಿನ ವರ್ಷ ಇದೇ ಕೆಲಸ ಮುಂದರಿಯಲಿದೆಯೆಂದು ತಿಳಿದುಬರುತ್ತದೆ. ಅಗಲಾದರೂ ಉತ್ತರ ಕನ್ನಡ ಜಿಲ್ಲೆಯ ಜನರು ಎಚ್ಚತ್ತು ಸರಕಾರವು ಕೈಕೊಂಡಿರುವ ಜಿಲ್ಲೆಯ ಉನ್ನತಿಯ ಕಾರ್ಯಕ್ಕೆ ನೆರವಾಗಿ ನಮ್ಮ ಜಿಲ್ಲೆಯ ಏಳ್ಗೆಗೆ ಪ್ರಯತ್ನ ಪಡಬೇಕು. ಅಲ್ಲದೆ ಬೇರೆ ಜಿಲ್ಲೆಯ ಜನರು ಬರಬಾರದೆಂದಲ್ಲ. ಬಾರದಿದ್ದರೆ ನಮ್ಮ ಕೆಲಸವಾಗುವಂತೆಯೂ ಇಲ್ಲ. ಆದರೆ ಹವೆಯ ಬಳಕೆಯುಳ್ಳವರೂ ಕಾಡಿನ ಅನುಭವ ಇದ್ದವರೂ ಬಂದು ಸೇರಿ ಸರಕಾರೀ ಯೋಜನೆಯನ್ನು ಸಾರ್ಥಕಗೊಳಿಸಬೇಕು.

ಅರಣ್ಯ ಖಾತೆಯ ಅಂಗಳ ಮೂಲಕ ಕೂಲಿಗಳಿಗೂ ನೌಕರರಿಗೂ ಇರುವುದಕ್ಕೆ ಗುಡಿಸಲುಗಳನ್ನು ಕಟ್ಟಿಕೊಳ್ಳಲು ತಾಡಪತ್ರಿಗಳನ್ನು ಮತ್ತು ತಂಬೂಗಳನ್ನು ಸಾಕಷ್ಟು ಪೂರೈಸುತ್ತಾರೆ. ಪ್ರತಿಯೊಬ್ಬ ಮನುಷ್ಯನಿಗೆ, ೧೫ ದಿನಕ್ಕೆ ಸಾಲುವಷ್ಟು ಕಾಳುಕಡಿ, ಹಿಟ್ಟು, ಅಕ್ಕಿ, ಬೆಲ್ಲ, ಸಕ್ಕರೆ, ಸಾಬೂನು, ಮುಂತಾದುವುಗಳನ್ನು ಸೀದಾ ರೀತಿಯಿಂದ ನಿಯಂತ್ರಿತ ಧಾರಣೆಯಿಂದ ಪೂರೈಸುತ್ತಾರೆ. ಪ್ರತಿ ೧೫ ದಿನಗಳಿಗೆ ಲಾರಿ ಮುಖಾಂತರ ಪೂರೈಸುತ್ತಾರೆ. ಬರುವ ವರ್ಷ ಬಟ್ಟೆಯ ವ್ಯವಸ್ಥೆಯನ್ನು ಮಾಡುತ್ತಾರೆಂದು ಸುದ್ದಿ ಇದೆ. ಅಲ್ಲದೆ ಬರುವ ನವಂಬರ ತಿಂಗಳಲ್ಲಿ ಕಾಡಿಗೆ ಹೋಗುವಾಗ ಔಷಧೋಪಚಾರದ ವ್ಯವಸ್ಥೆಗಾಗಿ ಅರಣ್ಯಾಧಿಕಾರಿಗಳು ಮೇಲಾಧಿಕಾರಿಗಳೊಡನೆ ಮನವಿಮಾಡಿಕೊಂಡಿದ್ದಾರಂತೆ.

ಜೋಗದ ವಿದ್ಯುಚ್ಛಕ್ತಿ


ನಮ್ಮ ಜಿಲ್ಲೆಯ ಶ್ರೀಮಂತರಿನ್ನೂ ಮೈಗಳ್ಳತನಬಿಟ್ಟಿಲ್ಲ. ಇದಕ್ಕೆ 'ಮುಂಬೈ ಇಲೆಕ್ಟ್ರಿಕ್ ಗ್ರಿಡ್'ದ ಚೀಫ್ ಎಂಜಿನಿಯರರು ಧಾರವಾಡ, ಕೆನರಾದ ಪ್ರವಾಸ ಕೈಕೊಂಡು ಜೋಗ್ ವಿದ್ಯುಚ್ಛಕ್ತಿಯಿಂದ ಮುಂಬಯಿಯ ಪಾಲಿಗೆ ಬರುವಷ್ಟು ಶಕ್ತಿಯ ವಿನಿಯೋಗದ ವಿನಿಮಯಕ್ಕೆಂದು ಬಂದುದನ್ನು ಉದಾಹರಿಸಬಹುದು. ಅದಕ್ಕೆ ಮೂರು ಮಾರ್ಗಗಳ ಸಲಹೆಯಿತ್ತು.

೧. ಜೋಗಿನಿಂದ ಕಾರವಾರಕ್ಕೆ.

೨. ಜೋಗಿನಿಂದ ರಾಣೆಬೆನ್ನೂರು ಮಾರ್ಗವಾಗಿ ಬೆಳಗಾಂವಿಗೆ.

೩. ಜೋಗ್, ಸಿದ್ದಾಪುರ, ಸಿರ್ಸಿಯಿಂದ ಹುಬ್ಬಳ್ಳಿಗೆ.

ಮೂರನೇ ಮಾರ್ಗವು ತಜ್ಞರ ಒಪ್ಪಿಗೆಗೆ ಪಾತ್ರವಾಗಬಹುದೆಂದು ವಿಶ್ವಸನೀಯವಾಗಿ ತಿಳಿದು ಬರುತ್ತದೆ.



ಅಡ್ಡಾ ದಿಡ್ಡಿ

ಬರೆದವರು ಶ್ರೀ ನಾಡಿಗೇರ ಕೃಷ್ಣರಾಯರು: ಪ್ರಕಾಶಿಸಿದವರು ಎಸ್. ಎಸ್. ಎನ್. ಬುಕ್ ಡಿಪೋ ಬೆಂಗಳೂರು ನಗರ ಅವರು. ಪುಟ ಸಂಖ್ಯೆ ೯೯, ಬೆಲೆ ೧ ರೂ.

'ಅಡ್ಡಾ ದಿಡ್ಡಿ'ಯೆಂದು ೧೮ ಹರಟೆಗಳ ಸಂಗ್ರಹ. 'ಜಾಹೀರಾತಿನ ಜಗತ್ತು' 'ಮತದಾನ' ಮೊದಲಾದುವುಗಳಲ್ಲಿ ಹಾಸ್ಯದ ಮಿನುಗಿನೊಡನೆ ಪ್ರಪಂಚದ ಡಾಂಭಿಕತೆಯ ಲೇವಡಿಯೂ ಸಾಗಿದೆ. ಹರಟೆಗಳಾವುವೂ ಸೂತ್ರಬದ್ಧವಲ್ಲದಿಲ್ಲ. ವಿನೋದ ಮತ್ತು ವಿಚಾರಗಳು ಒಂದಕ್ಕೊಂದು ಹೊಂದಿಕೊಂಡು ಹೋಗಿವೆ. 'ಲಘು ಸಾಹಿತ್ಯ' ಬೇಕು ಎಂದು ಹೇಳುವವರು ಈ ಪುಸ್ತಕವನ್ನು ಓದಬೇಕು.

ಕಸದ ಬುಟ್ಟಿ

ಬರೆದವರು ಶ್ರೀ ನಾಡಿಗೇರ ಕೃಷ್ಣರಾಯರು; ಪ್ರಕಾಶಿಸಿದವರು ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು ನಗರ ಅವರು. ಪುಟ ಸಂಖ್ಯೆ ೯೫, ಬೆಲೆ ೧ ರೂ.

'ಕಸದ ಬುಟ್ಟಿ'ಯ ಹರಟೆಗಳು 'ಅಡ್ಡಾ ದಿಡ್ಡಿ'ಯಲ್ಲಿ ಯವುಗಳಷ್ಟು ಸೂತ್ರಬದ್ಧವಾಗಿಲ್ಲ. ಇದರಲ್ಲಿ ಕೇವಲ ವಿನೋದಕ್ಕಾಗಿ ಆಡುವ ಹುಡುಗಾಟಿಕೆಯ ಮಾತುಗಳು ಬಹಳ ಬರುತ್ತವೆ. 'ಅಡ್ಡಾ ದಿಡ್ಡಿ'ಗೆ ದೊರೆತ ಪ್ರೋತ್ಸಾಹ ಶ್ರೀ ನಾಡಿಗೇರರನ್ನು ಹೀಗೆ ಬರೆಯ ತೊಡಗಿಸಿತೇನೋ!.

ಸೋವಿಯೆಟ್ ಭೂಮಿ

ಬರೆದವರು: ಶ್ರೀ ಸದಾಶಿವರವರು; ಪ್ರಕಾಶಕರು ಶ್ರೀ ಕುಳಕುಂದ ಶಿವರಾಯರು ಜನತಾ ಸಾಹಿತ್ಯ, ಹುಬ್ಬಳ್ಳಿ. ಪುಟ ಸಂಖ್ಯೆ ೯೭, ಬೆಲೆ ೧| ರೂಪಾಯಿ.

ಇಂದು ಇಡಿಯ ಜಗತ್ತೇ 'ಬಾಕಿಸ್ತಾನ' ಬುದ್ಧಿಯದಾಗಿದೆ. ಅಂಗ್ಲೋ-ಅಮೇರಿಕನ್ ಮೊದಲಾದವರದು ಪಶ್ಚಿಮ ಪ್ರಜಾಸತ್ತೆಯೆಂದೂ ರಶಿಯ ಮೊದಲಾದವರದು ಪೂರ್ವ ಪ್ರಜಾಸತ್ತೆಯೆಂದೂ ಹೇಳಲಾಗುತ್ತದೆ. ಪಶ್ಚಿಮ ಪ್ರಜಾಸತ್ತೆಯನ್ನು ಬಂಡವಾಲಶಾಹಿಯೆಂದೂ ಪೂರ್ವದ್ದನ್ನು ಸಾಮ್ಯವಾದವೆಂದೂ ಹೇಳುವುದುಂಟು. ಯಾವ ಪದ್ಧತಿಯನ್ನು ತೆಗೆದುಕೊಂಡರೂ ಅದು ನಿರ್ದುಷ್ಟವೆನ್ನಲಾಗುವುದಿಲ್ಲ. ನಮ್ಮಲ್ಲಿ ಕೆಲವರು ರಶಿಯದ ಜೀವನವೆಂದರೆ "ಪ್ರತಿಯೋರ್ವನೂ ಶಾಂತಿಯಿಲ್ಲದೆ, ವಿರಾಮವಿಲ್ಲದೆ ಯಂತ್ರದಂತೆ ದುಡಿಯಬೇಕು; ಸಮಾಜಸತ್ತಾವಾದ ಎಂದರೆ ಯಾಂತ್ರಿಕ ಪದ್ಧತಿ; ಸಾರ್ವತ್ರಿಕ ಪೋಲಿಸ್‌ಪಡೆ" ಎಂದು ತಿಳಿದುಕೊಂಡವರಿದ್ದಾರೆ. ತದ್ವಿರುದ್ಧವಾಗಿ ರಶಿಯವೆಂದು ಸ್ವರ್ಗ ಎಂದು ಕಲ್ಪಿಸಿಕೊಂಡವರೂ ಇದ್ದಾರೆ. ಈ ಎರಡು ವರ್ಗದವರ ಕಣ್ಣು ತೆರೆಯಿಸಿ ರಶಿಯದ ಆಡಳಿತ, ಜೀವನ ಕ್ರಮ ಇತ್ಯಾದಿಗಳ ಮೇಲೆ ಸಂಕ್ಷೇಪವಾಗಿ ಬೆಳಕು ಬೀರುವ ಕೆಲಸವನ್ನು ಈ ಗ್ರಂಥ ಮಾಡಿದೆ. ಆದುದರಿಂದ ಶ್ರೀ ಸದಾಶಿವರ ಪ್ರಯತ್ನ ಸ್ತುತ್ಯವೆಂದು ಹೇಳಬಹುದು.

ರಕ್ತಸರೋವರ

ಬರೆದವರು: ಶ್ರೀ ಕುಳಕುಂದ ಶಿವರಾಯರು; ಪ್ರಕಟಿಸಿದವರು ಗೋಕರ್ಣ ಕರ್ನಾಟಕ ಸಂಘದವರು; ಪುಟಗಳು ೯೫ ಬೆಲೆ ೧| ರೂಪಾಯಿ.

ತರುಣ ಲೇಖಕರಾದ ಶ್ರೀ ಕುಳಕುಂದ ಶಿವರಾಯರು ಕನ್ನಡ ವಾಚಕರಿಗೆ ಸುಪರಿಚಿತರು. ಅವರು ಸಂಧಿಕಾಲ, ಸಮತಾವಾದ ಮೊದಲಾದ ಇನ್ನೂ ಹಲವು ಗ್ರಂಥಗಳನ್ನು ಬರೆದಿದ್ದಾರೆ. 'ರಕ್ತಸರೋವರ' ವೆಂಬ ಕಥಾಸಂಗ್ರಹದಲ್ಲಿ ೮ ಸಣ್ಣ ಸಣ್ಣ ಕಥೆಗಳಿವೆ. ಜಗತ್ತಿನಲ್ಲಿ ಬಡಜನರು ಬಹುಸಂಖ್ಯಾಕರೆಂಬುದು ನಿರ್ವಿವಾದವಾದುದು. ಈ ಎಂಟೂ ಕಥೆಗಳು ಬಡವರ ಬಾಳಿನ ವಿವಿಧ 'ಮುಖ'ಗಳನ್ನು ಚಿತ್ರಿಸತಕ್ಕವು. 'ಅವನ ಆಸೆ', 'ಆ ಜೀವನ' ಎಂಬೆರಡು ಕಥೆಗಳು ಸೊಗಸಾಗಿವೆ. ಅವನ 'ಆಸೆ' ಯು ಶತಮಾನಗಳಿಂದ ತುಳಿಯಲ್ಪಟ್ಟ ದೀನರ ಉಗ್ರ ಪ್ರತೀಕಾರ ಭಾವದಿಂದ ಕೂಡಿದೆ; ಆ ಆಸೆ ರಸಸ್ಥಾನಕ್ಕೆ ಮುಟ್ಟಿದೆ. 'ಆ ಜೀವನ' ದಲ್ಲೂ ಹಾಗೇ: ಪತಿತಳು ಪತಿತಪಾವನನನ್ನು ಹಡೆದು ಸಮಾಜವಂಚಕ ಸನಾತನಿಗಳ ಮೂಲೋತ್ಪಾಟನವಾದೀತೆಂಬ ನಂಬಿಗೆಯಿಂದ ತನ್ನ ಜೀವನಯಾತ್ರೆಯನ್ನು ಕೊನೆಗಾಣಿಸುತ್ತಾಳೆ.

'ಮರಳಿ ಮನೆಗೆ' ಎಂಬುದು ಪ್ರಚಾರಾತ್ಮಕ ಉದ್ದೇಶದಿಂದ ಬರೆಯಲಾದುದೆಂಬ ಗುಟ್ಟನ್ನು ತಾನೇ ಬಯಲಿಗೆಳೆಯುತ್ತದೆ. 'ರಕ್ತಸರೋವರ'ವು ಕೇವಲ ಆ ವೇಶದ ಒಂದು ಹುಚ್ಚು ಹೊನಲು; ಅದರ ಗೊತ್ತುಗುರಿಗಳು ಅಸಮಗ್ರ ಕಾರಣ ಸಾಮಗ್ರಿಗಳ ಮೇಲೆ ನಿಂತಿವೆ. ಬೆಳಕಾದರೂ ಇಂದಿನ ನೈತಿಕ ದೃಷ್ಟಿಯನ್ನು ತಿದ್ದುವ ಇಚ್ಛದಿಂದ ಬರೆಯಲಾಗಿದೆಯಲ್ಲದೆ ಕಥೆಯಾಗಿ ಕಾಣಬೇಕೆಂದು ರಚಿತವಾಗಿಲ್ಲವೆಂಬಂತಿದೆ. ಬಾಕಿ ಕಥೆಗಳು ಚೆನ್ನಾಗಿವೆ. ಒಟ್ಟಿನ ಮೇಲೆ ಬಡಹೃದಯಗಳ ಬಡಲುರಿಯನ್ನು ಬೆಳಕಿಗೆ ತರುವ ಯತ್ನರೂಪವಾದ ಈ ಕೃತಿ ಸ್ವಾಗತಾರ್ಹವೆಂದು ನಿರಾತಂಕವಾಗಿ ಹೇಳಬಹುದು.

ಗರ್ಜನೆ (ಹೊಸ ಮಾಸಪತ್ರಿಕೆ)

ಸಂಪಾದಕರು ಶ್ರೀ ಪಿ. ಎಲ್. ಬಂಕಾಪೂರ ಅವರು! ಪ್ರಕಾಶಕರು ಎಚ್. ಎಲ್. ದಂಡಿ ಅವರು, ಗದಗ, ಬೆಟಗೇರಿ ಪುಟ ಸಂಖ್ಯೆ ೪೬, ಬೆಲೆ ೦-೪-೦.

'ಗರ್ಜನೆ'ಯ ಮೊದಲ ಸಂಚಿಕೆಯಿದು. ಕನ್ನಡ ಯುವವಾಣಿ ನಾನೆಂದು ಹೇಳಿಕೊಂಡಿದೆ, ಬೇರೆ ಬೇರೆ ಲೇಖಕರ ಲೇಖನ ಕವನಗಳಿವೆ. ನೆಹರೂರ ಚಿತ್ರ ಮುಖಪುಟದ ಮೇಲಿದೆ; ಪುಸ್ತಕ ರೂಪದಲ್ಲಿ ಅಚ್ಚುಕಟ್ಟಾಗಿ ಹೊರಬಿದ್ದಿದೆ. ಈ ನವೋದ್ಯಮವು ವಿಜಯಶಾಲಿಯಾಗಬೇಕೆಂದು ಹಾರೈಕೆ.

ಉಷಾ (೧೯೪೭ರ ವಾರ್ಷಿಕ ಸಂಚಿಕೆ)

ಸಂಪಾದಕರು ಮತ್ತು ಸಂಚಾಲಕರು ಶ್ರೀ ಎಸ್ ನಂಜಪ್ಪನವರು. ಪುಟ ಸಂಖ್ಯೆ ೧೫೩, ಬೆಲೆ ೧ ರೂ.

ಮೇ ೧೪ರಲ್ಲೇ ಹೊರಬರಬೇಕಾಗಿದ್ದ "ಉಷೆ" ಈಗ ಮುಖ ತೋರಿಸಿದ್ದಾಳೆ. ತಡಮಾಡಿ ಏಳುವುದು ಈಗಿನ ಕಾಲದವರ ಪರಿಪಾಠ. ಆಗಲಿ, ತಡವಾಗಿ ಹೊರಬಿದ್ದರೂ ಅಂದವಾಗಿ ಹೊರಬಿದ್ದಿದೆ; ಪತ್ರಿಕೆಯ ಮುಖಪತ್ರ ಸೊಗಸಾಗಿದೆ; ಒಳಗಿನ ವರ್ಣಚಿತ್ರಗಳೂ ಹಾಗೇ.

ಕನ್ನಡನಾಡಿನ ಒಳ್ಳೆಯ ಬರಹಗಾರರ ಬರಹಗಳಿವೆ ಪತ್ರಿಕೆಯಲ್ಲಿ. ಭಾವಪೂರ್ಣವಾದ "ಕಾಳಿದಾಸ" ಕವಿತಾರತ್ನವಾಗಿಯೂ 'ಗುರುದಕ್ಷಿಣೆ' "ಸ್ವಾಮಿಗಳೊಡನೆ" ಮತ್ತು "ಹಿಂಸೆ ಮತ್ತು ಅಹಿಂಸೆ" ಇವು ವಿಚಾರಪೂರ್ಣ ಬರಹಗಳಾಗಿಯೂ "ವರುಷದ ಮೊದಲನೇ ದಿನ"ದಂತಹ

—೧೫ನೇ ಪುಟಕ್ಕೆ

ಮುತ್ಸದ್ದಿತನದ ಮುನ್ನಡೆ

ಇದೇ ೧೪—೧೫ ತಾರೀಕುಗಳಲ್ಲಿ ದಿಲ್ಲಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸಭೆ ಸೇರಿ ಜೂನ ೩ ರ ಬ್ರಿಟಿಶ್ ಸರಕಾರದ ಪ್ರಕಟನೆಗೆ ಒಪ್ಪಿಗೆಯನ್ನು ಕೊಡಲಾಯಿತು. ಈ ಪ್ರಶ್ನೆ ಅತ್ಯಂತ ಮಹತ್ವದ್ದಾಗಿದ್ದರಿಂದ ಸದಸ್ಯರಲ್ಲದೆ ಮಹಾತ್ಮಾ ಗಾಂಧಿಯವರೂ ಉಪಸ್ಥಿತರಾಗಿದ್ದರು. ಯೋಜನೆಯ ಬಗ್ಗೆ ಸಾಧಕಬಾಧಕ ವಿಚಾರ ಮಾಡಿ, ಪರಿಸ್ಥಿತಿಯನ್ನು ಕೂಲಂಕಷವಾಗಿ ವಿಮರ್ಶಿಸಿ ಕಾಂಗ್ರೆಸ್ಸು ಈ ಮುತ್ಸದ್ದಿತನದ ನಿರ್ಣಯವನ್ನು ಕೈಕೊಂಡಿದೆ. ದೇಶದ ಅಖಂಡತ್ವವನ್ನು ಪ್ರತಿಪಾದಿಸುವ ಕಾಂಗ್ರೆಸ್ಸು ಈ ರೀತಿ ದೇಶವನ್ನು ತುಂಡರಿಸುವ ಈ ಯೋಜನೆಗೆ ಒಪ್ಪಿಗೆ ಕೊಡುವದು ಅತ್ಯಂತ ಹಾನಿಕರವೆಂಬುದಾಗಿ ವಿರೋಧಕರೆಲ್ಲ ವಾದಿಸಿದರು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಯೋಜನೆಯನ್ನು ಸ್ವೀಕರಿಸದೆ ಗತ್ಯಂತರವಿಲ್ಲೆಂದು ಕಾಂಗ್ರೆಸ್ ಧುರೀಣರಿಗೆ ಮನವರಿಕೆಯಾದ್ದರಿಂದ ಅವರು ತಮ್ಮ ಒಪ್ಪಿಗೆಯನ್ನು ಕೊಟ್ಟರು. ಬ್ರಿಟಿಶರ ಆಡಳಿತ ಇಲ್ಲಿರುವ ವರೆಗೆ, ಅಧಿಕಾರ ಸಂಪೂರ್ಣವಾಗಿ ಕೈಯಲ್ಲಿ ಬರುವ ವರೆಗೆ ಈಗಿನ ಅಶಾಂತ ಪರಿಸ್ಥಿತಿಯನ್ನು ಹೋಗಲಾಡಿಸುವದು ಶಕ್ಯವಿಲ್ಲೆಂದೂ ಅವರಿಗೆನಿಸಿತು. ಅಂತೆಯೇ ದೇಶವನ್ನೊಡೆಯುವ ಈ ಯೋಜನೆಗೆ ಒಪ್ಪಿಕೊಂಡರು ಕಾಂಗ್ರೆಸ್ ಧುರೀಣರು. ಆದರೆ ತುಂಡರಿಸಲ್ಪಟ್ಟ ದೇಶವನ್ನು ಬೇಗ ಒಂದುಗೂಡಿಸುವ ಪ್ರಬಲ ಆಸೆಯನ್ನು ಮಾತ್ರ ಕಾಂಗ್ರೆಸ ಧುರೀಣರು ಇಟ್ಟುಕೊಂಡಿರುವರು. ಸ್ವಾತಂತ್ರ್ಯ, ಅಖಂಡತ್ವ ಎಂದೆನ್ನುತ್ತ ಸದ್ಯದ ಅಶಾಂತ ಮತ್ತು ಅಸಮರ್ಥ ಆಡಳಿತವನ್ನು ಹೀಗೆಯೇ ಸಾಗಿಸಬೇಕೋ ಇಲ್ಲವೆ ಪಾಸಾಹತು ಸ್ವರಾಜ್ಯ ಮತ್ತು ದೇಶ ವಿಭಜನೆಗೊಪ್ಪಿಕೊಂಡು ಶಾಂತತೆಯನ್ನು ಪ್ರಸ್ಥಾಪಿಸಲು ಮತ್ತು ಭಾರತೀಯರ ಕಷ್ಟನಷ್ಟಗಳನ್ನು ಹೋಗಲಾಡಿಸಲು ಹೆಚ್ಚು ಸಮರ್ಥತೆಯಿಂದ ಪ್ರಯತ್ನಿಸಬೇಕೋ ಎಂಬ ಪ್ರಶ್ನೆ ಕಾಂಗ್ರೆಸ್ಸಿಗರಮುಂದಿದ್ದಿತು. ಅವರು ಈ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸಿ ರಾಷ್ಟ್ರಕ್ಕೆ ಯೋಗ್ಯ ಮಾರ್ಗದರ್ಶನ ಮಾಡಿಕೊಟ್ಟಿರುವರು. ಕಾಂಗ್ರೆಸ್ಸಿನ ಈ ಧ್ಯೇಯ ಸಾಧನೆಯಲ್ಲಿ ಎಲ್ಲರೂ ಸಹಕರಿಸಲೆಂದು ಹಾರಯಿಸುವಾ.

ಸಂಸ್ಥಾನಿಕರ ಕರ್ತವ್ಯ

ಅಖಿಲ ಭಾರತ ಕಾಂಗ್ರೆಸ ಸಮಿತಿಯು ಈ ಅಧಿವೇಶನದಲ್ಲಿ ಸ್ವೀಕರಿಸಿದ ಇನ್ನೊಂದು ಗೊತ್ತುವಳಿಯೂ ಅತ್ಯಂತ ಮಹತ್ವದ್ದಾಗಿದೆ. ಅದು ಸಂಸ್ಥಾನಗಳಿಗೆ ಸಂಬಂಧಿಸಿದ್ದಾಗಿದೆ. ಬ್ರಿಟಿಶರ ವರಿಷ್ಠಾಧಿಕಾರ ನಾಶವಾದ್ದರಿಂದ ಸಂಸ್ಥಾನಗಳ ಮೇಲಿನ ಅವರ ಸಾರ್ವಭೌಮತ್ವವೂ ನಾಶವಾದಂತಾಯಿತು. ಅದು ಮರಳಿ ಸಂಸ್ಥಾನಿಕರಲ್ಲಿಯೆ ಸಮಾವಿಷ್ಟವಾಯಿತೆಂದು ತಿಳಿದುಕೊಂಡು ಹಲ ಸಂಸ್ಥಾನಿಕರು ತಮ್ಮ ಈ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯವನ್ನು ಪ್ರತಿಪಾದಿಸಿ ಘೋಷಣೆಯನ್ನು ಮಾಡುತ್ತಿರುವರು. ಹೈದರಾಬಾದ ಮತ್ತು ತಿರುವಾಂಕೂರು ಈ ರೀತಿ ಘೋಷಣೆ ಹೊರಡಿಸುವಲ್ಲಿ ಹಿರಿತನವನ್ನು ಪಡೆದಿರುವವು. ಈ ಹಿರಿಯಳ್ಳನ ಚಾಳಿಯನ್ನು ಬೇರೆ ಸಂಸ್ಥಾನಗಳು ಕಲಿಯಬಾರದೆಂದು ಭಾವಿಸಿ ಕಾಂಗ್ರೆಸ್ಸು ಸಕಾಲದಲ್ಲಿಯೆ ಸಂಸ್ಥಾನಗಳಿಗೆ ಸಲಹೆಯನ್ನು, ಎಚ್ಚರಿಕೆಯನ್ನು ಕೊಟ್ಟಿದೆ ಯಲ್ಲದೆ ಕರ್ತವ್ಯದ ಅರಿವನ್ನೂ ಮಾಡಿಕೊಟ್ಟಿದೆ. ಬ್ರಿಟಿಶರು ಭಾರತೀಯರಿಗೆ ಅಧಿಕಾರ ಪ್ರದಾನ ಮಾಡಿದ ಕೂಡಲೆ ಆ ವರಿಷ್ಠಾಧಿಕಾರ ಸಂಸ್ಥಾನಗಳಲ್ಲಿಯ ಪ್ರಜೆಗಳಿಗೆ ಹೋಗುವುದಲ್ಲದೆ ನರೇಂದ್ರರಿಗಲ್ಲ. ಪ್ರಜೆಗಳ ಒಪ್ಪಿಗೆಯಿಂದ ನರೇಂದ್ರರು ಈ ಅಧಿಕಾರದ ಉಪಯೋಗವನ್ನು ಪ್ರಜಾರಂಜನಕ್ಕಾಗಿ ಮಾಡಬಲ್ಲರು. ಹಿಂದುಸ್ಥಾನದ ಇತಿಹಾಸ, ಪರಂಪರೆ ಇದನ್ನೆ ಸಾರುತ್ತದೆ. ಪ್ರಜಾದ್ರೋಹಿಯಾದ ಅವಿನಯ ರಾಜನನ್ನು ತಳ್ಳಿಹಾಕಬೇಕೆಂದು ಹಿಂದೀ ರಾಜ್ಯಶಾಸ್ತ್ರ ಗ್ರಂಥಗಳು ಸ್ಪಷ್ಟವಾಗಿ ಪ್ರತಿಪಾದಿಸುತ್ತಿವೆ. ಹೀಗಿರುವಾಗ ಸಂಸ್ಥಾನಿಕರು ಪ್ರಜೆಗಳ ಮತವನ್ನು ಕೇಳಿಕೊಳ್ಳದೆ ಸಾರ್ವಭೌಮತ್ವವನ್ನು ಸಾರುವುದು ನ್ಯಾಯ್ಯವಾಗಲಾರದು ಹಿತಕರವೂ ಆಗಲಾರದು. ಸಂಸ್ಥಾನಿಕರ ಈ ಸಾರ್ವಭೌಮತ್ವವನ್ನು ಸ್ವತಂತ್ರ ಹಿಂದುಸ್ಥಾನ ಸರಕಾರ ಒಪ್ಪಲಾರದೆಂದೂ ಅದಕ್ಕೆ ಮನ್ನಣೆ ಕೊಡುವ ಯಾವದೇ ಪರಕೀಯ ರಾಷ್ಟ್ರ ಹಿಂದುಸ್ಥಾನದ ಶತ್ರು ರಾಷ್ಟ್ರವೆಂದು ಪರಿಗಣಿಸಲಾಗುವದೆಂದೂ ಕಾಂಗ್ರೆಸ್ಸು ಸಮಯೋಚಿತ ಎಚ್ಚರಿಕೆ ಕೊಟ್ಟಿದೆ. ಈ ಪರಿಸ್ಥಿತಿಯಲ್ಲಿ ಸಂಸ್ಥಾನಿಕರು ಹಿಂದುಸ್ಥಾನದ ಹಿತಶತ್ರುಗಳ ಮೋಹಕ ಮಾತುಗಳಿಗೆ ಬಲಿಬೀಳದೆ ಸ್ವಾರ್ಥ, ನಿರಂಕುಶಾಧಿಕಾರಕ್ಕೆ ಮರುಳಾಗದೆ ಹಿಂದೀ ಒಕ್ಕೂಟದಲ್ಲಿ ಸೇರುವ ಧೋರಣವನ್ನಿಟ್ಟುಕೊಂಡು ತಮ್ಮ ಮತ್ತು ದೇಶದ ಹಿತವನ್ನು ಸಾಧಿಸಬೇಕು.

ಸಂಪಾದಕೀಯ ಟೀಕೆಟಿಪ್ಪಣಿಗಳು

ಸ್ವತಂತ್ರ ಸರಕಾರದ ಸಿದ್ಧತೆ

ಅಗಸ್ಟ ೧೫ ಕ್ಕೆ ಬ್ರಿಟಿಶರು ಭಾರತೀಯರಿಗೆ ಅಧಿಕಾರವನ್ನೊಪ್ಪಿಸಿ ಸ್ವದೇಶಕ್ಕೆ ಮರಳುವರಷ್ಟೆ. ಭಾರತೀಯರು ಆ ಸುದಿನವನ್ನು ಅತ್ಯಂತ ಉತ್ಸಾಹದಿಂದ ಪಾಲಿಸುವರೆಂದು ನಂಬಲಾಗಿದೆ. ಭಾರತವನ್ನು ವಿಚ್ಛೇದಿಸಿ ಬ್ರಿಟಿಶರು ಇಲ್ಲಿಂದ ಕಾಲ್ತೆಗೆಯುತ್ತಿದ್ದರೂ ಸ್ವಾತಂತ್ರ್ಯವನ್ನು ಸಂಪಾದಿಸಿದ ಭಾರತೀಯರು ಮುಂದಾದರೂ ಹಿಂದುಸ್ಥಾನ ಅಖಂಡವಾಗುವುದೆಂಬ ಹಿರಿಯಾಸೆಯಿಂದ ಈ ದಿನವನ್ನು ಪಾಲಿಸುವರು. ಕಾಂಗ್ರೆಸ ಧುರೀಣರು ಈಗಾಗಲೆ ಈ ಬಗ್ಗೆ ಸಿದ್ಧತೆಯನ್ನು ನಡೆಸಿರುವರೆಂದು ತಿಳಿಯುತ್ತದೆ. ಅಂದು ಅಗಸ್ಟ ೧೫ ಕ್ಕೆ ಸರಕಾರಿ ಮತ್ತು ಸಾರ್ವಜನಿಕ ಕಟ್ಟಡಗಳ ಮೇಲೆ ರಾಷ್ಟ್ರದ ಪ್ರತೀಕವಾದ ತ್ರಿವರ್ಣದ ರಾಷ್ಟ್ರಧ್ವಜವನ್ನು ಹಾರಿಸಿ ಧ್ವಜವಂದನ ಕಾರ್ಯಕ್ರಮವನ್ನು ಎಲ್ಲೆಡೆ ನಡೆಸಬೇಕೆಂದೂ ಯೋಜಿಸಲಾಗಿದೆ. ೬೦ ವರುಷಗಳ ಸತತ ಪ್ರಯತ್ನ, ಅಪರಿಮಿತ ಸ್ವಾರ್ಥತ್ಯಾಗ, ಬಗೆಬಗೆಯ ಕಷ್ಟನಷ್ಟಗಳಿಂದ ಸಂಪಾದಿಸಿದ ಸ್ವಾತಂತ್ರ್ಯವನ್ನು ಉಚಿತವಾದ ರೀತಿಯಲ್ಲಿ ಸ್ವಾಗತಿಸುವುದು ಕ್ರಮಪ್ರಾಪ್ತವಾಗಿದೆ. ಈ ಸ್ವಾತಂತ್ರ್ಯದ ಪ್ರತೀಕವಾಗುವಂತೆ ಧ್ವಜದಲ್ಲಿ ಅವಶ್ಯಕ ಬದಲಾವಣೆ ಮಾಡುವದರ ಸಂಬಂಧದಲ್ಲಿಯೂ ಕಾಂಗ್ರೆಸ್ ಧುರೀಣರು ವಿಚಾರ ನಡೆಸಿರುವರು ಸ್ವತಂತ್ರ ಹಿಂದುಸ್ಥಾನ ಸರಕಾರದ ಧ್ಯೇಯ ಧೋರಣಗಳನ್ನು ಅಂದು ಸಾರಲಾಗುವದೆಂದೂ ತಿಳಿಯುತ್ತದೆ. ಈ ಬಗೆಯ ಘೋಷಣೆಯನ್ನು ಮಾಡುವದು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ. ನಾಗರಿಕರ ಮೂಲಭೂತ ಹಕ್ಕುಗಳನ್ನು ಅಶ್ವಾಸಿಸಿ, ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲರಿಗೂ ಆಡಳಿತದಲ್ಲಿ ಸಮಾನ ಅಧಿಕಾರ, ಅರ್ಹತೆ ಮೊದಲಾದ್ದನ್ನು ದಯಪಾಲಿಸಲಾಗುವದೆಂದೂ ಈ ಸ್ವತಂತ್ರ ಸರಕಾರ ಘೋಷಿಸಬಹುದು. ಅದೇ ರೀತಿಯಾಗಿ ಸಂಸ್ಥಾನಗಳ ಗೂಡ ಇಡಬೇಕಾದ ಸಂಬಂಧ ಮತ್ತು ಪರರಾಷ್ಟ್ರಗಳ ಸಂಬಂಧದ ಬಗ್ಗೆಯೂ ಘೋಷಣೆ ಮಾಡಬಹುದು. ನೂರೈವತ್ತು ವರುಷಗಳ ದಾಸ್ಯದಿಂದ ಬಂಧಮುಕ್ತವಾದ ಭಾರತ ಈ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುವದು ಉಚಿತವೆ ಆಗಿದೆ.

ಹೈದರಾಬಾದ ಕಾಂಗ್ರೆಸ್ಸಿನ ನಿರ್ಣಯ

ಹೈದರಾಬಾದ ಕಾಂಗ್ರೆಸ್ಸಿನ ಪ್ರಥಮಾಧಿವೇಶನದಲ್ಲಿ ಹೈದರಾಬಾದ ನವಾಬರು ಸಾರಿದ ಸಾರ್ವಭೌಮತ್ವದ ಸಂಬಂಧದಲ್ಲಿ ಕೂಲಂಕಷ ವಿಚಾರ ಮಾಡಿ ಅದಕ್ಕೆ ಅಸಮ್ಮತಿಯನ್ನು ವ್ಯಕ್ತಪಡಿಸಲಾಯಿತು. ೬೦ ಸಾವಿರಕ್ಕಿಂತ ಹೆಚ್ಚು ಜನ ಈ ಕಾಂಗ್ರೆಸ್ ಅಧಿವೇಶನದಲ್ಲಿ ಉಪಸ್ಥಿತರಾಗಿದ್ದರು. ಹೈದ್ರಾಬಾದ ಸಂಸ್ಥಾನವು ಹಿಂದೀ ಒಕ್ಕೂಟವನ್ನು ಸೇರಬೇಕು, ಹಿಂದುಸ್ಥಾನದಿಂದ ಸಿಡಿದು ನಿಂತು ನಿರಂಕುಶಾಧಿಕಾರ ಸ್ಥಾಪಿಸುವ ಪ್ರಯತ್ನ ನಡೆಸಿದರೆ ಅದನ್ನು ಪ್ರತಿಭಟಿಸಲಾಗುವುದು ಎಂಬದಾಗಿ ಸ್ಪಷ್ಟವಾಗಿ ಸಾರಲಾಯಿತು. ಸಂಸ್ಥಾನದಲ್ಲಿ ಹೊಣೆಗಾರ ರಾಜ್ಯವನ್ನು ಪ್ರಸ್ಥಾಪಿಸುವದಕ್ಕೆ ಅವಶ್ಯಕ ಉಪಾಯಗಳನ್ನು ಕೈಕೊಳ್ಳುವುದಕ್ಕೆ ಕಾಂಗ್ರೆಸ್ ಕಾರ್ಯಸಮಿತಿಗೆ ಅಧಿಕಾರ ಕೊಡಲಾಯಿತು. ಸಂಸ್ಥಾನಗಳು ಹೀಗೆ ಸ್ವಾತಂತ್ರ್ಯವನ್ನು ಸಾರಲಾರವು, ಆ ಬಗೆಯ ಅಧಿಕಾರ ಅವಕ್ಕಿಲ್ಲ ಎಂದು ಸ್ವಾರ್ಥರಹಿತ ಹಿಂದುಸ್ಥಾನದಲ್ಲಿಯ ಕಾಯದೆ ಮತ್ತು ಘಟನಾ ಪಂಡಿತರೆಲ್ಲ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುವರು. ಪ್ರಜೆಗಳ ಬೆಂಬಲವಿಲ್ಲದ ಆಡಳಿತವೆಂದಿಗೂ ಯಶಸ್ವಿಯಾಗದು. ಇದನ್ನರಿತು ನವಾಬಸಾಹೇಬರು ಪ್ರಜೆಗಳ ಬೆಂಬಲವನ್ನು ಕೋರಿ ಹೊಣೆಗಾರ ರಾಜ್ಯಪದ್ಧತಿಯನ್ನು ಬೇಗ ಜಾರಿಯಲ್ಲಿ ತರಬೇಕು. ಹೈದರಾಬಾದ ಪ್ರಜೆಗಳ ಈ ಹೋರಾಟದಲ್ಲಿ ಇಡೀ ಹಿಂದುಸ್ಥಾನದ ಬೆಂಬಲ ಸಿಕ್ಕುವದೆಂದು ಬೇರೆ ಹೇಳಬೇಕಿಲ್ಲ. ಈ ಬಗೆಯ ಹೋರಾಟವನ್ನು ಬರಮಾಡಿಕೊಂಡು ಹಿಂದುಸ್ಥಾನದಿಂದ ಸಿಡಿದುನಿಲ್ಲಬೇಕೋ ಇಲ್ಲವೆ ಹಿಂದೀ ಒಕ್ಕೂಟದಲ್ಲಿಯೇ ಇದ್ದುಕೊಂಡು ತಮ್ಮ ಮತ್ತು ಪ್ರಜರ ಹಿತವನ್ನು ಸಾಧಿಸಬೇಕೋ ಎಂಬದನ್ನು ನವಾಬ ಸಾಹೇಬರು ನಿರ್ವಿಕಾರ ಮನಸ್ಸಿನಿಂದ ಈಗಲೂ ವಿಚಾರಮಾಡಬೇಕು. ಬಹುಸಂಖ್ಯೆ ಹಿಂದುಗಳಿರುವ ಹೈದ್ರಾಬಾದ ಸಂಸ್ಥಾನ ಜಿನ್ನಾರವರು ಪ್ರತಿಪಾದಿಸುವ ಬಹುಸಂಖ್ಯಾಕರ ತತ್ವದಂತೆಯೂ ಪಾಕಿಸ್ಥಾನವನ್ನು ಸೇರಲಾರದು. ಅದು ಹಿಂದೀ ಒಕ್ಕೂಟದಲ್ಲಿ ಸೇರುವದೆ ಸೂಕ್ತವಾದುದು. ನವಾಬ ಸಾಹೇಬರು ಅವಸರದಿಂದ ಮಾಡಿದ ಘೋಷಣೆಯನ್ನು ಹಿಂತೆಗೆದುಕೊಂಡು ಹಿಂದೀ ಒಕ್ಕೂಟದಲ್ಲಿ ಸೇರುವ ನಿರ್ಧಾರವನ್ನು ಬೇಗ ಮಾಡಿ ಬಹುಸಂಖ್ಯೆ ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಹೋರಾಟವನ್ನು ತಪ್ಪಿಸುವರೆಂದು ನಂಬಿದ್ದೇವೆ.

ಮೈಸೂರಿನ ಮಾರ್ಗದರ್ಶನ

ಹೈದರಾಬಾದ ತ್ರಾವಣಕೋರ ಸಂಸ್ಥಾನಗಳು ಈ ರೀತಿ ಸ್ವಾತಂತ್ರ್ಯವನ್ನು ಸಾರಿ ಪ್ರಜೆಗಳ ಅಭಿಪ್ರಾಯವನ್ನು ಹತ್ತಿಕ್ಕುತ್ತಿರುವಾಗಲೆ ಮೈಸೂರು ಸರಕಾರದವರು ಘಟನಾಸಮಿತಿಯಲ್ಲಿ ಸೇರುವ ನಿರ್ಧಾರ ಮಾಡಿ ಉಳಿದ ಸಂಸ್ಥಾನಗಳಿಗೆ ಮಾರ್ಗದರ್ಶನ ಮಾಡಿಕೊಟ್ಟದ್ದು ಸಂತೋಷದ ಸಂಗತಿ. ನಿಜವಾಗಿ ವಿಚಾರ ಮಾಡಿದರೆ ಪ್ರಗತಿಪರವಾದ ಮೈಸೂರು ಬಡೋದೆ ಬಿಕಾನೇರ ಮೊದಲಾದ ಸಣ್ಣ ಸಣ್ಣ ಸಂಸ್ಥಾನಗಳು ಘಟನಾ ಸಮಿತಿಯಲ್ಲಿ ಸೇರಿದ ಸಮಯದಲ್ಲಿಯೆ ಈ ಬಗೆಯ ನಿರ್ಧಾರವನ್ನು ಮಾಡಬೇಕಾಗಿತ್ತು. ತಡಮಾಡಿಯಾದರೂ ಚಿಂತೆಯಿಲ್ಲ ಮೈಸೂರು ಸರಕಾರದವರು ಈ ಸಮಂಜಸ ಧೋರಣವನ್ನು ಸ್ವೀಕರಿಸಿದ್ದು ಅಭಿನಂದನೀಯವಾಗಿದೆ ಕನ್ನಡಿಗರಿಗೆಲ್ಲ ಇದೊಂದು ಹೆಮ್ಮೆಯ ಮಾತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಮೈಸೂರು ಸರಕಾರದವರು ಸಂಸ್ಥಾನದಲ್ಲಿ ಹೊಣೆಗಾರ ರಾಜ್ಯ ಪ್ರಸ್ಥಾಪಿಸಿ ಸಾಂಕುಶ ಪ್ರಭುಗಳಾದರೆ ಅದನ್ನೊಳಗೊಂಡ ಅಖಂಡ ಕರ್ನಾಟಕ ಪ್ರಾಂತದ ರಚನೆಯಾಗುವುದಕ್ಕೆ ಕಾಲ ಹತ್ತಲಾರದು. ಕರ್ನಾಟಕ ಸ್ವತಂತ್ರ ಪ್ರಾಂತವಾಗುವ ಈ ಸಂಧಿ ಕಾಲದಲ್ಲಿ ಮೈಸೂರಿನ ಮಹಾರಾಜರು ಅದಕ್ಕನುಕೂಲವಾಗುವ ಧೋರಣವನ್ನು ವಹಿಸಿದ್ದು ಮತ್ತಷ್ಟು ಸಂತೋಷದ ಸಂಗತಿ. ಮೈಸೂರಿನ ಮತ್ತು ಕರ್ನಾಟಕದ ಉಳಿದ ಜನರು ತಮ್ಮ ಧ್ಯೇಯವಾದ ಏಕೀಕೃತ ಕರ್ನಾಟಕದ ಗುರಿಯನ್ನು ಸ್ಥಾಪಿಸುವ ವರೆಗೆ ತಮ್ಮ ಪ್ರಯತ್ನವನ್ನು ಸಾಗಿಸತಕ್ಕದ್ದೆಂದು ಆಗ್ರಹಪಡಿಸುತ್ತೇವೆ. ಘಟನಾಸಮಿತಿಯಲ್ಲಿ ಸೇರಲು ನಿರ್ಧರಿಸಿದ ಮೈಸೂರು ಸರಕಾರ ಹಿಂದೀ ಒಕ್ಕೂಟ ಸರಕಾರದಲ್ಲಿಯೂ ಸೇರಿ ತಮ್ಮ ಸಂಸ್ಥಾನ ಪ್ರಜರ ಹಿತವನ್ನು ಸಾಧಿಸುವದಲ್ಲದೆ ಇಡೀ ಹಿಂದುಸ್ಥಾನದ ಹಿತವನ್ನೂ ಸಾಧಿಸುವರೆಂದು ಬಲವಾಗಿ ನಂಬಿದ್ದೇವೆ.

ಸುಗಮವಾಗಿ ಸಾಗಲಿ

ಈ ರೀತಿಯಾಗಿ ಕಾಂಗ್ರೆಸ್ಸು ಬ್ರಿಟಿಶ್ ಯೋಜನೆಗೆ ಒಪ್ಪಿಗೆ ಕೊಟ್ಟು ಅದರಂತೆ ಕಾರ್ಯ ಮಾಡಲು ಸಿದ್ಧವಾಗಿದೆ. ಮುಸ್ಲಿಂಲೀಗ ಸಂಸ್ಥೆಯೂ ಈ ಮೊದಲು ಯೋಜನೆಗೆ ತನ್ನ ಒಪ್ಪಿಗೆಯನ್ನು ಕೊಟ್ಟಿದೆ. ಶೀಖರೂ ಒಪ್ಪಿಗೆಯನ್ನಿತ್ತಿದ್ದಾರೆ. ಹೀಗೆ ಹಿಂದುಸ್ಥಾನದಲ್ಲಿಯ ಪ್ರಮುಖ ಪಕ್ಷಗಳೆಲ್ಲ ಯೋಜನೆಗೆ ಒಪ್ಪಿಗೆಕೊಟ್ಟದ್ದರಿಂದ ಇನ್ನು ಮುಂದಿನ ಕಾರ್ಯ ಸರಳವಾಗಿ ಸಾಗುವುದೆಂದು ಆಶಿಸಬಹುದಾಗಿದೆ. ಯಾವದೇ ಮಾತಿನ ಬಗ್ಗೆ ತಿಕ್ಕಾಟವೆದ್ದು ಹಿಂದುಸ್ಥಾನಕ್ಕೆ ಅಧಿಕಾರವನ್ನೊಪ್ಪಿಸಿ ಕೊಡುವ ದಿನ ಮುಂದೆ ಹೋಗದಂತೆ ನೋಡಿಕೊಳ್ಳುವುದು ಅತ್ಯವಶ್ಯವಾಗಿದೆ. ಪಂಜಾಬ ಬಂಗಾಲಗಳಲ್ಲಿ ಗಡಿ ನಿರ್ಣಯದ ಸಂಬಂಧದಲ್ಲಿ ಮತಭೇದವಾಗುವದು ಸ್ವಾಭಾವಿಕ. ಆದರೆ ಅದನ್ನು ಸರಿಪಡಿಸಿಕೊಂಡು ಮುಂದೆ ಸಾಗುವುದು ಇಷ್ಟವಾಗಿದೆ. ಈ ಗಡಿ ನಿರ್ಣಯದ ಸಂಬಂಧದಲ್ಲಿ ಹಿಂದೀ ಧುರೀಣರಲ್ಲಿ ಒಡಂಬಡಿಕೆಯಾಗಲಿಲ್ಲೆಂದು ಈಗಾಗಲೆ ಸುದ್ದಿ ಎದ್ದಿದೆ. ಗಡಿ ನಿರ್ಣಯದಗೂಡ ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ವಿಷಯಗಳು ನಿರ್ಣಯಿಸಲ್ಪಡಲಿರುವದರಿಂದ ತಮಗೆ ಹೆಚ್ಚು ಹಾನಿಯಾಗಬಹುದೆಂಬ ಭೀತಿ ಲೀಗಿನ ಮುಂದಾಳುಗಳಿಗೆ ಇದೆಯಂತೆ. ಏನೇ ಇದ್ದರೂ ಪ್ರಾತಿನಿಧಿಕವಾದ ಗಡಿ ನಿರ್ಣಯ ಸಮಿತಿಯವರ ನಿರ್ಣಯಕ್ಕೆ ಒಪ್ಪುವದು ಅವಶ್ಯವಾಗಿದೆ. ಆ ಸಮಿತಿಯ ಮುಂದೆ ತಮ್ಮ ಹೇಳಿಕೆಯನ್ನು ಸಬಲವಾಗಿ ಮಂಡಿಸುವದು ಮತ್ತು ಅದಕ್ಕೆ ಜನಮತವಿದೆಯೆಂದು ಸಿದ್ಧ ಮಾಡಿಕೊಡುವುದು ಆಯಾ ಪಕ್ಷ ಪ್ರಮುಖರ ಕರ್ತವ್ಯವಾಗಿದೆ. ಹೀಗೆ ಸಬಲ ಮಂಡನದ ನಂತರ ಯಾವ ಸಮಿತಿಯೂ ಅನ್ಯಾಯವನ್ನು ಮಾಡಲಾರದು. ಅದುದರಿಂದ ಯಾವದೇ ಪಕ್ಷದವರು ಪೂರ್ವಗ್ರಹ ದೂಷಿತರಾಗಿ ಪ್ರಾರಂಭದಲ್ಲಿಯೆ ವ್ಯತ್ಯಯವನ್ನುಂಟು ಮಾಡದೆ ಯೋಜನೆಯಂತೆ ಸರಾಗವಾಗಿ ಸಾಗುವಂತೆ ನೋಡಿಕೊಳ್ಳಬೇಕೆಂದು ಸೂಚಿಸುತ್ತೇವೆ.

ವಸತಿ ಸೌಕರ್ಯ

ಮುಂಬಯಿ ಪ್ರಾಂತದಲ್ಲಿಯ ನಗರಗಳಲ್ಲಿ ವಿಶೇಷತಃ ಔದ್ಯೋಗಿಕ ನಗರಗಳಲ್ಲಿ ವಸತಿಗಳ ಬಗ್ಗೆ ಎಷ್ಟೊಂದು ತೊಂದರೆಯಾಗುತ್ತಿರುವದೆಂಬುದು ಆಯಾ ನಗರವಾಸಿಗಳ ಅನುಭವಕ್ಕೆ ಬಂದ ಮಾತಾಗಿದೆ. ಮನೆಗಳಿಲ್ಲದೆ ಅನೇಕರು ಚಪ್ಪರಗಳಲ್ಲಿ ಅಂಗಡಿಗಳ ಮಾಳಿಗೆಗಳಲ್ಲಿ ಕಾಲದಾರಿಯ ಮೇಲೆ ಮಲಗುವುದುಂಟು. ಇದನ್ನೆಲ್ಲ ಹೋಗಲಾಡಿಸುವದಕ್ಕಾಗಿ ಮುಂಬಯಿ ಸರಕಾರದ ಕಾಮಗಾರ ಮಂತ್ರಿಗಳಾದ ಶ್ರೀ ನಂದಾ ಇವರ ಅಧ್ಯಕ್ಷತೆಯಲ್ಲಿ ಮುಂಬಯಿ ಪ್ರಾಂತಿಕ ವಸತಿ ಸಲಹೆ ಸಮಿತಿಯೊಂದು ನೇಮಕವಾಗಿದೆಯಷ್ಟೇ. ಆ ಸಮಿತಿಯವರು ಸಭೆ ಸೇರಿ ಐದು ವರುಷಗಳಲ್ಲಿ ೧೫೦೦೦೦ ಬಿಡಾರಗಳನ್ನು ಪೂರೈಸ ಮಾಡಬೇಕೆಂದು ಯೋಜಿಸಿದ್ದಾರೆ. ಸರಕಾರದಿಂದ, ಸರಕಾರದ ಸಹಾಯದಿಂದ ಮತ್ತು ಖಾಸಗಿ ಸಂಸ್ಥೆಗಳಿಂದ ಕಟ್ಟಲ್ಪಡುವ ಬಿಡಾರಗಳು ಇವೆಲ್ಲ ಕೂಡಿ ಇಷ್ಟು ಬಿಡಾರಗಳು ಐದು ವರುಷಗಳಲ್ಲಿ ಕಟ್ಟಲ್ಪಡುವವೆಂದು ಗೊತ್ತಾಗಿದೆ. ೧೫೦೦೦ ಬಿಡಾರಗಳನ್ನು ಮುಂಬಯಿ ಸರಕಾರದವರು ಹಿಂದುಸ್ಥಾನ ಸರಕಾರದ ಮತ್ತು ಕಾರಖಾನೆದಾರರ ಸಹಾಯದಿಂದ ಕಟ್ಟಬೇಕೆಂದು ಗೊತ್ತುಪಡಿಸಿದ್ದಾರೆ. ಇದಕ್ಕಾಗಿ ೭೫ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದಾಗಿದೆ. ಈ ನಿಧಿಯನ್ನು ಹೇಗೆ ಎತ್ತಬೇಕು, ಮುಂತಾದ್ದನ್ನೂ ಕಮೀಟಿಯವರು ನಿರ್ಧರಿಸಲಿರುವರು. ಸಹಕಾರ ಪದ್ಧತಿಯಿಂದ ಸಾಕಷ್ಟು ಸಹಾಯ ಸಲ್ಲಿಸಬೇಕೆಂದೂ ಸಮಿತಿಯವರು ನಿರ್ಧರಿಸಿದ್ದಾರೆ. ಸಮಿತಿಯವರ ಯೋಜನೆಗಳನ್ನೆಲ್ಲ ಮುಂಬಯಿ ಸರಕಾರದವರು ಪೂರ್ಣವಾಗಿ ವಿಚಾರಿಸಿದನಂತರ ಕೊನೆಯ ನಿರ್ಣಯವನ್ನು ಕೈಕೊಳ್ಳಲಾಗುವದು. ಮುಂಬಯಿ ಸರಕಾರದವರು ನಡೆಸಿದ ಈ ಪ್ರಯತ್ನ ಸ್ತುತ್ಯವಾಗಿದೆಂದು ಬೇರೆ ಹೇಳಬೇಕಿಲ್ಲ. ಸರಕಾರದ ಈ ಔದ್ಯೋಗಿಕರಣದಲ್ಲಿ ಹುಬ್ಬಳ್ಳಿಯೂ ಸೇರುವುದೆಂದೂ ಇಲ್ಲಿಯೂ ಹೊಸ ಬಿಡಾರಗಳು ಕಟ್ಟಲ್ಪಟ್ಟು ವಸತಿಯ ಅನಾನುಕೂಲತೆಗಳು ಬಹಳ ಮಟ್ಟಿಗೆ ಕಡಮೆಯಾಗುವವೆಂದೂ ಅಪೇಕ್ಷರು ನಿರೀಕ್ಷಿಸಬಹುದಾಗಿದೆ. ಹುಬ್ಬಳ್ಳಿ ನಗರದಲ್ಲಿ ಈಗ ಮನೆಗಳಿಗಾಗಿ ಜನರು ಎಷ್ಟೊಂದು ತೊಂದರೆಗಳನ್ನು ಅನುಭವಿಸುತ್ತಿರುವರೆಂಬುದು ಗೊತ್ತಿದ್ದ ವಿಷಯ. ಅದಷ್ಟು ಬೇಗ ಈ ತೊಂದರೆಗಳು ನಿವಾರಣೆಯಾಗುವವೆಂದು ಆಶಿಸುತ್ತೇವೆ.

ಸಿಂಧ ವಿಶ್ವವಿದ್ಯಾಲಯ

ಸಿಂಧ ವಿಶ್ವವಿದ್ಯಾಲಯ ಸ್ಥಾಪನೆಯ ಸಂಬಂಧದಲ್ಲಿ ಸಿಂಧ ಸರಕಾರದವರು ಸ್ವೀಕರಿಸಿದ ಪ್ರತಿಗಾಮೀ ಧೋರಣದಿಂದ ಪ್ರಾಂತದ ಮುಸಲ್ಮಾನೇತರರಲ್ಲಿ ಎಷ್ಟೊಂದು ಕ್ಷೋಭೆಯುಂಟಾಗಿದೆಂಬುದು ಅಲ್ಲಿಂದ ಬರುವ ಸುದ್ದಿಗಳಿಂದ ಗೊತ್ತಾಗುವದು. ಸಿಂಧ ಶಾಸನ ಸಭೆಯ ಹಿಂದೂ ಸದಸ್ಯರು ಮಂಡಿಸಿದ ಯಾವ ಉಪಸೂಚನೆಗಳನ್ನೂ ಸರಕಾರದವರು ಒಪ್ಪದೆ ತಮ್ಮ ಶಾಸನೀ ಬಹುಮತದ ಬೆಂಬಲದಿಂದ ವಿಶ್ವವಿದ್ಯಾಲಯ ಮಸೂದೆಯನ್ನು ಪಾಸು ಮಾಡಿಕೊಂಡು ಬಿಟ್ಟರು. ಅಲ್ಪಸಂಖ್ಯಾಕರ 'ಹಕ್ಕುಬಾಧ್ಯತೆಗಳನ್ನು ರಕ್ಷಿಸುವುದಾಗಿ ಮುಸ್ಲಿಂಲೀಗಿನ ಅಧ್ಯಕ್ಷರಾದ ಬ್ಯಾ. ಜಿನ್ನಾರು ಪ್ರಕಟನೆಯ ಮೇಲೆ ಪ್ರಕಟನೆ ಹೊರಡಿಸುತ್ತಿದ್ದರೂ ಅವರ ಅನುಯಾಯಿಗಳು ಅತ್ತ ಗಮನಿಸದಿರುವದು ಶೋಚನೀಯವಾಗಿದೆ. ಮುಂಬಯಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ನ್ಯಾ. ಜಗಲಾರವರು ಸಿನೇಟ ಸಭೆಯಲ್ಲಿ ಮಾತಾಡುತ್ತ ಸಿಂಧದಲ್ಲಿಯ ಕಾಲೇಜುಗಳು ಇನ್ನು ಮುಂದೆಯೂ ಮುಂಬಯಿ ವಿಶ್ವವಿದ್ಯಾಲಯಕ್ಕೆ ಸೇರಬಹುದೆಂದು ಅಭಿಪ್ರಾಯ ಪಟ್ಟರು. ಸಿಂಧ ವಿಶ್ವವಿದ್ಯಾಲಯ ಕಾಯದೆಯಲ್ಲಿ ಮಸ್ತಿಜೆಯ ಸಂಬಂಧದಲ್ಲಿಯ ಕಲಮುಗಳು ಅಸ್ಪಷ್ಟ ಮತ್ತು ಪರಸ್ಪರ ವಿರೋಧಕವಾಗಿವೆ. ಇದರಿಂದ ಸಿಂಧದಲ್ಲಿಯ ಕಾಲೇಜುಗಳು ಈಗಿನಂತೆ ಮುಂಬೈ ವಿಶ್ವವಿದ್ಯಾಲಯದಲ್ಲಿಯೆ ಉಳಿಯಲವಕಾಶವುಂಟಾಗಿದೆ. ಇದರಿಂದ ಹೆಚ್ಚಿನ ತೊಡಕುಗಳು ಉದ್ಭವಿಸುವ ಸಂಭವವುಂಟು. ಈಗಿನಂತೆ ಕಾಲೇಜುಗಳೆಲ್ಲ ಮುಂಬಯಿ ವಿಶ್ವವಿದ್ಯಾಲಯದಲ್ಲಿಯೆ ಉಳಿದರೆ ಸಿಂಧ ಸರಕಾರದವರು ರೇಗಿಸಿಗೆದ್ದು ಅವುಗಳ ಗ್ರಾಂಟನ್ನು ನಿಲ್ಲಿಸಬಹುದು. ಮುಂಬಯಿ ಪದವೀಧರರನ್ನು ರಜಿಸ್ಟರ ಮಾಡಿಕೊಳ್ಳಲಿಕ್ಕಿಲ್ಲ. ಹೀಗೆಲ್ಲ ಮಾಡಹತ್ತಿದರೆ ಸಿಂಧದಲ್ಲಿಯ ಹಿಂದೂ ಮುಸಲ್ಮಾನರಲ್ಲಿ ಹೆಚ್ಚಿನ ಮನಸ್ತಾಪಕ್ಕೆ ಅವಕಾಶವುಂಟಾಗುವದು. ಇದರಿಂದ ಶಿಕ್ಷಣ ಪ್ರಗತಿಗೂ ಅಡ್ಡಿಯಾಗಬಹುದು. ಆದುದರಿಂದ ಸಿಂಧ ಸರಕಾರದವರು ಈಗಲಾದರೂ ಸಮಂಜಸ ಧೋರಣವನ್ನು ಸ್ವೀಕರಿಸಿ ಅಲ್ಲಿನ ಹಿಂದುಗಳ ಹಕ್ಕುಬಾಧ್ಯತೆಗಳನ್ನು ರಕ್ಷಿಸಬೇಕೆಂದು ಸೂಚಿಸಬಯಸುತ್ತೇವೆ.

ಬ್ರಿಟಿಶ ಯೋಜನೆಗೆ ಅ. ಭಾ. ಕಾಂಗ್ರೆಸ್ಸಿನ ಒಪ್ಪಿಗೆ

ಸಂಸ್ಥಾನಗಳ ಸ್ವಾತಂತ್ರ್ಯವನ್ನು ಕಾಂಗ್ರೆಸ್ಸು ಮನ್ನಿಸುವದಿಲ್ಲ ಹಿಂದೀ ಸಮಸ್ಯೆಗೆ ಅಮೆರಿಯವರ ಸೂಚನೆ — ಗಡಿನಾಡಿನಲ್ಲಿ ಮತಗಣನೆಗೆ ಕಾಂಗ್ರೆಸ್ಸಿನ ವಿರೋಧ

ದಿಲ್ಲಿಯಲ್ಲಿ ತಾ. ೧೪—೧೫ ಕ್ಕೆ ಕೂಡಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಜೂನ್ ೩ ರ ಬ್ರಿಟಿಶ ಯೋಜನೆಗೆ ಕಾರ್ಯ ಸಮಿತಿಯಿತ್ತ ಒಪ್ಪಿಗೆಗೆ ಸಮ್ಮತಿಯಿತ್ತಿತು. ಕೆಲ ವಾಚಾಲರು ಈ ಯೋಜನೆಯನ್ನು ನಿರಾಕರಿಸಬೇಕೆಂದು ಪ್ರಚಾರ ನಡೆಸಿದ್ದರೂ ಕಾರ್ಯ ಸಮಿತಿಯು ನಿರ್ಣಯವನ್ನು ಅದು ತಿರಸ್ಕರಿಸುವದು ದೂರದ ಮಾತೆಂದು ಎಲ್ಲರಿಗೂ ಗೊತ್ತೇ ಇತ್ತು. ಕಾರ್ಯ ಸಮಿತಿಯವರ ಸ್ಥಿತಿಗತಿಯು ಬಲದಿಂದಲೂ ತಮ್ಮ ಮತ್ತು ಗಾಂಧೀಜಿಯ ವ್ಯಕ್ತಿತ್ವದ ಆಕರ್ಷಣೆಯಿಂದಲೂ ವಿರೋಧಿಗಳ ಸಂಖ್ಯೆ ತೀರ ಅತ್ಯಲ್ಪವಾಗಿತ್ತು. ಸಾಮ್ಯವಾದಿಗಳ ವಿರೋಧ ಸಾಂಕೇತಿಕಕ್ಕಿಂತ ಹೆಚ್ಚಾಗಿರಲಿಲ್ಲ. ಯೋಜನೆಯನ್ನು ಅಂಗೀಕರಿಸುವ ಗೊತ್ತುವಳಿಗೆ ೧೩ ತಿದ್ದುಪಡಿಗಳು ಬಂದಿದ್ದವು. ಅವುಗಳಲ್ಲಿ ಎಂಟು ಸೂಚನೆಗಳ ಮೂಲ ಗೊತ್ತುವಳಿಗೆ ಎದುರು ಗೊತ್ತುವಳಿಗಳಂತಿದ್ದುದರಿಂದ ಅವನ್ನು ಅಧ್ಯಕ್ಷ ಕೃಪಲಾನಿಯವರು ತಿರಸ್ಕರಿಸಿದರು. ಉಳಿದವು ಸುಲಭವಾಗಿ ಹಾರಿದವು. “ಬ್ರಿಟಿಶ ಯೋಜನೆಯ ಬಗೆಗೆ ನನ್ನ ಅಭಿಪ್ರಾಯವೀಗ ಜಗಜ್ಜನಿತವಾಗಿದೆ. ಆದರೆ ಉಳಿದ ಎಲ್ಲ ಪಕ್ಷಗಳು ಒಪ್ಪಿಕೊಂಡಿರುವಾಗ ಕಾಂಗ್ರೆಸ್ಸು ನಿರಾಕರಿಸುವದು ಸರಿಯಲ್ಲ. ಇದರಿಂದ ದೇಶಕ್ಕೆ ಶಾಶ್ವತವಾಗಿ ಅಪಾಯವಾಗುವದೆಂದು ಈ ಸಭೆಗೆ ನಂಬಿಕೆಯಿದ್ದರೆ ಗೊತ್ತುವಳಿಯನ್ನು ತಿರಸ್ಕರಿಸಬಹುದು. ಆಗ ನೀವು ಹೊಸ ಮುಂದಾಳುಗಳನ್ನಾರಿಸಿಕೊಂಡು ಕಾರ್ಯ ಸಮಿತಿಯನ್ನೂ ಸರಕಾರವನ್ನೂ ಕಟ್ಟಿಕೊಳ್ಳಬೇಕಾಗುವದು. ಇಂಥ ಮುಂದಾಳುಗಳು ದೊರೆಯಬಹುದೆಂದು ವಿರೋಧಕರಿಗೆ ಅನಿಸಿದರೆ ಅವರು ಗೊತ್ತುವಳಿಯನ್ನು ನಿರಾಕರಿಸಲಿ... ಈ ಗೊತ್ತುವಳಿಯನ್ನು ತಿರಸ್ಕರಿಸಿದರೆ ದೇಶದಲ್ಲಿ ಅರಾಜಕತೆ ಉಂಟಾಗುವದಿಲ್ಲೆಂದು ತೋರಿದರೆ ಹಾಗೆ ಮಾಡಬಹುದು...” ಎಂದು ಗಾಂಧೀಜಿ ಹೇಳಿದರು. ಇದೊಂದು ಬಗೆಯ ಕೊನೆಯೆಚ್ಚರಿಕೆಯೇ ಆಗಿತ್ತೆನ್ನಬಹುದು. ಸುಭಾಷ ಬಾಬುಗಳ ಅಯ್ಕೆಯ ನಂತರದ ಕಪಡಿದ ವಾತಾವರಣದಲ್ಲಿ ಕಾರ್ಯಸಮಿತಿ ಕೈಕೊಂಡ ಉಗ್ರೋಪಾಯಗಳೇ ಈಗಲೂ ಬರುವಂತೆ ಕಂಡವು. “ಗಂಡಾಂತರಕ್ಕೆ ಗುರಿಯಾಗಿರುವ (ಹಿಂದೀ ಐಕ್ಯದ) ತಕ್ತದ ಮುಂದೆ ಕಾರ್ಯಸಮಿತಿಯೆಂಬದು ಕೀ ಪದಾರ್ಥ” ಎಂದು ಅಗ್ನಿಭಕ್ಷಕ ಪುರುಷೋತ್ತಮದಾಸ ಟಂಡನ್ನರು ಹೇಳಿದರೂ ಈ ಅಭೂತಪೂರ್ವ ಇಕ್ಕಟ್ಟಿನ ಕಾಲದಲ್ಲಿ ಹೊಸ ಮುಂದಾಳುಗಳನ್ನು ಸಂಪಾದಿಸುವ ಧೈರ್ಯ ಬಹುಜನ ಅ. ಭಾ. ಕಾಂಗ್ರೆಸ್ ಸದಸ್ಯರಿಗೆ ಇದ್ದಿಲ್ಲ. ಕಾರ್ಯಸಮಿತಿಯ ಸದಸ್ಯರು ತಮ್ಮ ನಿರ್ಣಯವನ್ನು ಮುಖ್ಯವಾಗಿ ಒಂದು ಯುಕ್ತಿಯಿಂದ ಸಮರ್ಥಿಸಿಕೊಂಡರು. ಅದೆಂದರೆ ದೇಶದಲ್ಲಿ ಹಬ್ಬಿದ ಅರಾಜಕತೆ. ಅದನ್ನಡಗಿಸಲು ಬಲಿಷ್ಠ ಕೇಂದ್ರ ಸರಕಾರ ಅವಶ್ಯವಾಗಿದೆ. ಸದ್ಯದ ಸರಕಾರಕ್ಕೆ ಅಂಥ ಅಧಿಕಾರವಿಲ್ಲ. ಅದರಿಂದ ಹಿಂದುಸ್ತಾನದ ಐಕ್ಯವನ್ನು ಬಲಿಗೊಟ್ಟಾದರೂ ದೇಶದಲ್ಲಿ ನೆಮ್ಮದಿಯನ್ನು ಸ್ಥಾಪಿಸುವದು ಅವಶ್ಯವೆನಿಸಿತೆಂದು ಸರದಾರ ಪಟೇಲರು ಮಾರ್ಮಿಕವಾಗಿ ಹೇಳಿದರು. ಇಂದಿನ ಈ ವಿಭಜನೆ ಕೇವಲ ತಾತ್ಪೂರ್ತಿಕವಾಗಿದೆ. ಹಿಂದುಸ್ತಾನದ ಮೂಲ ಭೂತ ಐಕ್ಯ ಒಂದಲ್ಲ ಒಂದು ದಿನ ತಲೆಯೆತ್ತಿಯೆ ತೀರುವದೆಂದು ಅಧ್ಯಕ್ಷ ಕೃಪಲಾನಿಯವರು ಹೇಳಿದರು. ಹಿಂದುಸ್ತಾನದ ಹೃದಯವನ್ನು ಛೇದಿಸಬೇಕಾದುದಕ್ಕೆ ಜವಾಹರರು ವಿಷಾದಪಟ್ಟರು. ಆದರೆ ದೇಶದಲ್ಲಿ ಹಬ್ಬಿದ ಅಶಾಂತತೆ, ಅದನ್ನು ಹಣಿಯುವಲ್ಲಿ ಬ್ರಿಟಿಶ ಅಧಿಕಾರಿಗಳು ತೋರುತಿರುವ ಅನಾಸ್ಥೆ ಇವುಗಳಿಂದ ಬ್ರಿಟಿಶರು ಇಲ್ಲಿಂದ ಈಗಿಂದೀಗ ಹೊರಡುವಂತೆ ಮಾಡುವದು ಅಪೇಕ್ಷಣೀಯವಾಯಿತು. ಬಲಿಷ್ಠ ಕೇಂದ್ರ ಸರಕಾರವಿಲ್ಲದೆ ಹೋದರೆ ದೇಶ ಅರಾಜಕತೆಯಲ್ಲಿ ಮುಳುಗಿ ಬಾಲ್ಕನ ಭೂಮಿಯಂತೆ ತುಂಡು ತುಂಡಾಗಿ ಹೋಗಬಹುದು. ಅದುದರಿಂದ ಸಿಡಿದು ಹೋಗ ಬಯಸುವವರನ್ನು ಅವರ ಪಾಡಿಗೆ ಬಿಟ್ಟು ಈ ಯೋಜನೆಗೆ ಒಪ್ಪಬೇಕಾಯಿತೆಂದು ಅವರು ವಿವರಿಸಿದರು. ಮೇಲಾಗಿ ಕೆಲ ಪ್ರಾಂತಗಳಿಗೂ ಸಿಡಿದು ಹೋಗಲು ಅವುಗಳ ಭಾಗಗಳಿಗೂ ಒಪ್ಪಿಗೆ ಕೊಟ್ಟದ್ದು ಕಾಂಗ್ರೆಸ್ಸು ಮೊದಲಿಂದಲೂ ಪುರಸ್ಕರಿಸುತ್ತ ಬಂದಿದ್ದ ಸ್ವಯಂನಿರ್ಣಯ ತತ್ವಕ್ಕೆ ಅನುಗುಣವಾಗಿಯೆ ಇದೆಯೆಂದು ಪಂ. ಗೋವಿಂದ ವಲ್ಲಭಪಂತರು ವಾದಿಸಿದರು. ಸರದಾರ ಪಟೇಲರಂತೂ ತಮ್ಮ ೯ ತಿಂಗಳ ಮಂತ್ರಿತ್ವದ ಅನುಭವದಿಂದ ಮೇ ೧೬ ರ ಘೋಷಣೆಯ ಸದ್ಗುಣಗಳ ಬಗ್ಗೆ ತಮಗಿದ್ದ ಭ್ರಮೆ ಬಯಲಾಯಿತೆಂದರು. ಈ ಯೋಜನೆಯನ್ವಯ ಜಾತೀಯ ಮತದಾನ ಸಂಘ, ಹೆಚ್ಚಿನ ಪ್ರಾತಿನಿಧ್ಯ ಮೊದಲಾದ ಅನಿಷ್ಟ ಪದ್ಧತಿಗಳನ್ನು ಕಿತ್ತು ಹಾಕಿ ನಮಗೆ ಬೇಕಾದಂತೆ ದೊರಕಿದ ಭಾಗಗಳನ್ನು ಕಟ್ಟಬಹುದು ಎಂದರವರು. ಪರಿಸ್ಥಿತಿಯ ಯುಕ್ತಿ ಎಲ್ಲ ಯುಕ್ತಿಗಳಿಗಿಂತ ಮಿಗಿಲಾದುದಂತೆ. ಅಂತೆಯೆ ೧೫೬ ವಿರುದ್ಧ ೨೯ ಮತಗಳಿಂದ ಕಾರ್ಯಸಮಿತಿಯ ಗೊತ್ತುವಳಿಯನ್ನು ಸಭೆ ಸ್ವೀಕರಿಸಿತು. ೩೨ ಸದಸ್ಯರು ತಟಸ್ಥರಾಗಿದ್ದರು.

ಸಂಸ್ಥಾನಗಳ “ಸ್ವಾತಂತ್ರ್ಯ”

ಅ. ಭಾ. ಕಾಂಗ್ರೆಸ್ಸು ಚರ್ಚಿಸಿ ಗೊತ್ತಿಗೆ ಬಂದ ಇನ್ನೊಂದು ವಿಷಯವೆಂದರೆ ಸಂಸ್ಥಾನಗಳಲ್ಲಿ ಕೆಲವು ಸಾರಿದ “ಸ್ವಾತಂತ್ರ್ಯ”ದ ಪ್ರಶ್ನೆ. ಅ. ಭಾ. ಕಾಂಗ್ರೆಸ್ಸು ಸಮೀಪಿಸಿದಾಗ ಎರಡು ಪ್ರಮುಖ ಹಿಂದೀ ಸಂಸ್ಥಾನಗಳು (ಹೈದರಾಬಾದ ಮತ್ತು ತಿರ್ವಾಂಕೂರು) ಅಗಸ್ಟ ೧೫ಕ್ಕೆ ಬ್ರಿಟಿಶರು ಅಧಿಕಾರ ತ್ಯಾಗ ಮಾಡಿದೊಡನೆ ತಾವು ಸ್ವತಂತ್ರವಾಗುವುದಾಗಿ ಸಾರಿದ್ದರಿಂದ ಈ ಪ್ರಶ್ನೆಗೆ ವಿಶೇಷ ಮಹತ್ವ ಬಂತು. ಪೂರ್ವ ಪಂಜಾಬದ ಕೆಲ ಶೀಖ ಸಂಸ್ಥಾನಗಳೂ ಸ್ವಾತಂತ್ರ್ಯ ಘೋಷಿಸಲು ಸಿದ್ಧವಾಗಿವೆಯೆಂದು ತಿಳಿಯುತ್ತದೆ. ಹಿಂದೀ ಸಂಸ್ಥಾನಗಳ ಮೇಲಿನ ವರಿಷ್ಠಾಧಿಕಾರವನ್ನು ಈ ವರೆಗೆ ಬ್ರಿಟಿಶರು ಇಟ್ಟುಕೊಂಡಿದ್ದು ಅವರು ಅಧಿಕಾರ ತ್ಯಾಗ ಮಾಡಿದೊಡನೆ ಆ ವರಿಷ್ಠಾಧಿಕಾರ ಹೊಸ ಕೇಂದ್ರ ಸರಕಾರಕ್ಕೆ ಹೋಗದೆ ಮಾಯವಾಗಿ ಬಿಡುವದೆಂದು ಬ್ರಿಟಿಶರು ಸಾರಿ ಈ ಪ್ರಶ್ನೆಯನ್ನು ಬಿಕ್ಕಟ್ಟಿಗೆ ತರಲು ಕಾರಣರಾದರು. ಪರಕೀಯರಾದ ಬ್ರಿಟಿಶರಿಗೆ ಸಂತೋಷದಿಂದ ವರಿಷ್ಠಾಧಿಕಾರವನ್ನು ಒಪ್ಪಿಸಿ ಅವರ ನಿಯಂತ್ರಣದಲ್ಲಿ ಉಳಿಯಲು ಒಪ್ಪಿದ್ದ ನರೇಂದ್ರರಿಗೆ ಆಗ ಒಮ್ಮಿಂದೊಮ್ಮೆ ಸರ್ವತಂತ್ರ ಸ್ವತಂತ್ರ ರಾಜಾಧಿರಾಜರಾಗುವ ಮರುಳು ಹಿಡಿದು ಬಿಟ್ಟಿತು. ಹಿಂದೀ ಒಕ್ಕೂಟದಲ್ಲಿ ಗೌರವಯುತವಾಗಿ ಭಾಗವಹಿಸುವದು ಅವರಿಗೆ ಬೇಕಾಗಿತ್ತು. ಬ್ರಿಟಿಶ ಭಾರತದಲ್ಲಿ ದಿಗುಹಿಗೆ ಮುಟ್ಟಿದ ಜಾತೀಯ ರಾಜಕಾರಣದಿಂದ ಅವರು ಪ್ರಯೋಜನ ಪಡೆದು ಘಟನಾ ಸಮಿತಿಯಲ್ಲಿ ಸೇರುವದನ್ನು ವಿಲಂಬಿಸುತ್ತ ಹೋದರು. ಬಡೋದೆಯ ಮಹಾರಾಜರ ಸಕಾಲಿಕ ಧೀರ ನಿರ್ಣಯದಿಂದ ಸಂಸ್ಥಾನಿಕರ ಒಳಸಂಚು ಅರ್ಧಮರ್ಧ ಬಯಲಾದರೂ ತಕ್ಕ ಮಟ್ಟಿನ ಆರ್ಥಿಕ ಮತ್ತು ಪ್ರಾದೇಶಿಕ ಬಲವುಳ್ಳ ಸಂಸ್ಥಾನಗಳು ಸ್ವತಂತ್ರವಾಗುವ ಹಂಬಲ ಬಿಡಲಿಲ್ಲ. ನಿರಂಕುಶ ಸತ್ತೆ ಮತ್ತು ಹಿಂದುಳಿತನಕ್ಕೆ ಪ್ರಸಿದ್ಧವಾದ ಸಂಸ್ಥಾನಗಳು ಸ್ವತಂತ್ರವಾಗಿ ಮನಬಂದಂತೆ ಇರಲು ಹಾತೊರೆಯುತ್ತಿವೆ. ಇದರಿಂದ ಅಲ್ಲಿಯ ಪ್ರಜೆಗಳು ಪೀಡೆಗೊಳಗಾಗಬೇಕಾಗುವದು ಮಾತ್ರವಲ್ಲದೆ ಹಿಂದುಸ್ತಾನದ ಸಂರಕ್ಷಣೆಗೂ ಅಪಾಯವುಂಟಾದೀತು. ವರಿಷ್ಠಾಧಿಕಾರವನ್ನು ತಿರುಗಿ ಬಿಟ್ಟ ಬ್ರಿಟಿಶ ಸರಕಾರ ಸಂಸ್ಥಾನಿಕರ ಸ್ವಾತಂತ್ರ್ಯ ಪಿಪಾಸೆಗೆ ಉತ್ತೇಜನ ಕೊಡುವದಿಲ್ಲವೆಂದೂ ಅವುಗಳಿಗೆ ಪ್ರತ್ಯೇಕವಾಗಿ ಸಾಮಂತ ರಾಜ್ಯದ ಸ್ಥಾನಮಾನವನ್ನು (ಹಿಂದುಸ್ತಾನ ಪಾಕಿಸ್ತಾನಗಳಿಗೆ ಕೊಟ್ಟಂತೆ) ಕೊಡುವದಿಲ್ಲೆಂದೂ ಹೇಳಲಾಗಿದೆ. ಅವು ಸ್ವತಂತ್ರವಾಗುವದಾದರೆ ಬ್ರಿಟಿಶ ಸಾಮಂತ ರಾಜ್ಯದಿಂದ ಹೊರಗೆ ಸ್ವತಂತ್ರವಾಗಬೇಕು. ಬೇರೆ ಅಂತರ್‍ರಾಷ್ಟ್ರೀಯ ಮನ್ನಣೆಯನ್ನು ದೊರಕಿಸಬೇಕು. ಇದನ್ನು ಸಾಧಿಸುವ ಧೈರ್ಯ ಅವರಿಗೆ ಇನ್ನೂ ಇರುವಂತೆ ತೋರುತ್ತದೆ. ಅವು ಹಿಂದುಸ್ತಾನ ಇಲ್ಲವೆ ಪಾಕಿಸ್ತಾನ ಒಕ್ಕೂಟದಲ್ಲಿ ಸೇರುವಂತೆ ಪ್ರಯತ್ನಿಸುವದಾಗಿ ಬ್ರಿಟಿಶರು ಹೇಳಿದ್ದರಲ್ಲಿ ಎಷ್ಟು ಮನಃಪೂರ್ವಕವೋ ಎಷ್ಟು ಗಂಟಲಿಗಿಂತ ಮೇಲಿಯೊ ಹೇಳಲಾಗಲ್ಲ ಅದುದರಿಂದ ಬ್ರಿಟಿಶ ಹಿಂದುಸ್ತಾನದ ಜಾತೀಯ ಸಮಸ್ಯೆಯನ್ನು ವಿಚ್ಛೇದದಿಂದ ಬಿಡಿಸಿದ ಕಾಂಗ್ರೆಸ್ಸು ಸಂಸ್ಥಾನಗಳನ್ನು ಹೆಚ್ಚು ನಿಷ್ಠುರವಾಗಿ ಕಾಣುವ ಧೈರ್ಯ ಮಾಡಿದೆ. ಅ ಭಾ ಕಾಂಗ್ರೆಸಿನಲ್ಲಿ ಡಾ ಪಟ್ಟಾಭಿ ಸೀತಾರಾಮಯ್ಯನವರಿಂದ ಮಂಡಿಸಲ್ಪಟ್ಟು ಅಂಗೀಕೃತವಾದ ಗೊತ್ತುವಳಿಯಲ್ಲಿ, ಯಾವದೇ ಸಂಸ್ಥಾನಕ್ಕೆ ಸ್ವತಂತ್ರವಾಗಿ, ಉಳಿದ ಹಿಂದುಸ್ತಾನದಿಂದ ಬೇರೆ ನಿಲ್ಲಲು ಹಕ್ಕಿದೆಯೆಂಬುದನ್ನು ಈ ಸಭೆ ಒಪ್ಪುವದಿಲ್ಲ. ಅದು ಐತಿಹಾಸಿಕ ಕ್ರಮಕ್ಕೂ ಹಿಂದೀ ಜನರ ಧ್ಯೇಯಕ್ಕೂ ವಿರುದ್ಧವಾಗಿದೆ. ಅದರಿಂದ ಸಂಸ್ಥಾನಿಕರು ಇಡಿ ಹಿಂದುಸ್ತಾನದ ಹಿತದೃಷ್ಟಿಯಿಂದ ಹಿಂದೀ ಒಕ್ಕೂಟದಲ್ಲಿ ಸೇರುವರೆಂದು ಆಶಿಸಲಾಗಿದೆಯೆಂದು ಕಾಣಿಸಲಾಗಿದೆ. ಈ ಗೊತ್ತುವಳಿಗೆ ಬೆಂಬಲವಿತ್ತು ಪಂ ಜವಾಹರಲಾಲರು ಮಾಡಿದ ಭಾಷಣದಲ್ಲಂತೂ “ನಾವು ಯಾವುದೇ ಸಂಸ್ಥಾನದ ಸ್ವಾತಂತ್ರ್ಯವನ್ನು ಮಾನ್ಯಮಾಡುವದಿಲ್ಲವೆಂದೂ ಪರಕೀಯ ರಾಷ್ಟ್ರಗಳಾವುವಾದರೂ ಮಾನ್ಯಮಾಡಹೋದರೆ ಅವುಗಳನ್ನು ದ್ರೋಹಿಗಳೆಂದು ಭಾವಿಸಬೇಕಾಗುತ್ತದೆಂದೂ ತಿಳಿಸಬಯಸುತ್ತೇವೆ” ಎಂದು ನುಡಿದರು. ಈ ಗೊತ್ತುವಳಿ ಬರಿಯ ಬಾಯ್ಬಡಕತನದ್ದಲ್ಲವೆಂದು! ನಿಚ್ಚಳವಾಗಿದೆ. ತಾ ೧೩ಕ್ಕೆ ಹೊಸದಿಲ್ಲಿಯಲ್ಲಿ ಕೂಡಿದ ಅ. ಭಾ. ಸಂಸ್ಥಾನೀ ಪ್ರಜಾ ಪರಿಷತ್ತು ಮಾಡಿದ ಅನೇಕ ಗೊತ್ತುವಳಿಗಳನ್ನೂ ಯಾವನು ಸಂಸ್ಥಾನಿಕರಲ್ಲಿ ಸ್ವತಂತ್ರನಾಗಬಯಸಿದರೆ ಅವನು ಹಿಂದೀ ಒಕ್ಕೂಟಕ್ಕೂ ತನ್ನ ಪ್ರಜೆಗಳಿಗೂ ವೈರಿಯಾಗುತ್ತಾನೆ ಇಂಥ ಕೃತ್ಯವನ್ನೂ ಪ್ರತಿಭಟಿಸಬೇಕಾಗುವದೆಂದು ಕಾಣಿಸಲಾಗಿದೆ. ವರಿಷ್ಠಾಧಿಕಾರ ಕೇಂದ್ರ ಸರಕಾರಕ್ಕೇ ಸೇರಬೇಕೆಂದು ಅದು ವಾದಿಸಿದೆ ಹೈದರಾಬಾದ ಸಂಸ್ಥಾನ ಕಾಂಗ್ರೆಸ್ ಅಧಿವೇಶನದಲ್ಲಿಯೂ ಆ ಸಂಸ್ಥಾನ ಒಕ್ಕೂಟವನ್ನು ಸೇರದಿದ್ದರೆ ಪ್ರಜೆಗಳು ಪ್ರತಿಭಟಿಸುವದು ಖಂಡಿತ ಎಂದು ಎಚ್ಚರಿಕೆ ಕೊಡಲಾಗಿದೆ. ಹೈದರಾಬಾದ ಹೋರಾಟಕ್ಕೆ ಕಾಂಗ್ರೆಸ್ಸಿನ ಬೆಂಬಲವುಂಟೆಂದು ಅ. ಭಾ. ಕಾಂಗ್ರೆಸ್ ಕಾರ್ಯದರ್ಶಿ ಶಂಕರರಾವ ದೇವರು ಸಾರಿದ್ದಾರೆ. ಕೆಲ ಸಂಸ್ಥಾನಿಕರು ಪ್ರಜೆಗಳ ಚಳವಳಿಯನ್ನು ಹತ್ತಿಕ್ಕಲು ಸೈನ್ಯ ಸನ್ನಾಹ ನಡೆಸುತಿದ್ದಾರೆಂದು ಅ. ಭಾ. ಸಂಸ್ಥಾನಿ ಪ್ರಜಾಪರಿಷತ್ತು ಎಚ್ಚರಿಸಿತ್ತು. ಕೊಪ್ಪಳದಲ್ಲಿ ಜರಗಿದ ಅರಬ ಸೈನಿಕರ ಗಲಭೆಯ ಸುದ್ದಿ ನೋಡಿದರೆ ಹೈದರಾಬಾದ ಸಂಸ್ಥಾನದಲ್ಲಂತೂ ಅಂಥ ಸನ್ನಾಹದ ಸಂಶಯ ಬರುತಿದೆ. ತಿರ್ವಾಂಕೂರು ದಿವಾಣರು ತಮ್ಮ ಸಂಸ್ಥಾನ ಸ್ವತಂತ್ರವಾಗುವದಕ್ಕೆ ಪ್ರಜೆಗಳ ಬೆಂಬಲವಿದೆಯೆಂದು ವಾದಿಸುತ್ತಿದ್ದರೂ ಅಲ್ಲಿಯ ಘಟನಾ ಸಮಿತಿ ದಿನಾಚರಣೆಯ ಸಂಬಂಧದಲ್ಲಿ ಬಂಧನ ದಬ್ಬಾಳಿಕೆಗಳು ನಡೆದಿವೆ. ಇದರಲ್ಲಿ ಸಂತೋಷದ ಸಂಗತಿಯೆಂದರೆ ಸಾಮಾನ್ಯವಾಗಿ ಯಾರೂ ನರೇಂದ್ರರ ಸ್ವಾತಂತ್ರ್ಯಕ್ಕೆ ನೈತಿಕ ಬೆಂಬಲ ಕೊಟ್ಟಿಲ್ಲ. ಡಾ. ಅಂಬೇಡಕರರಂಥವರು ಕೂಡ ಅವರು ಸ್ವತಂತ್ರರಾಗಲಾರರೆಂದು ಸಾರಿದ್ದಾರೆ. ಜಿನ್ನಾರೊಬ್ಬರೇ ಅವರಿಗೆ ಬೆಂಬಲ ಕೊಟ್ಟವರು.

ವಿಭಜನೆಯ ಸಿದ್ಧತೆ

ಇತ್ತ ವಿಭಜನೆಯ ಸಿದ್ಧತೆಗಳು ನಡೆಯುತ್ತಲೆ ಇವೆ. ಈ ಸಂಚಿಕೆ ಓದುಗರ ಕೈಸೇರುವ ಮೊದಲೆ ಬಂಗಾಲದ ವಿಭಜನೆಯಾಗಬೇಕೋ ಬೇಡವೊ ಮತ್ತು ವಿಭಜನೆಯಾದರೆ ಮತ್ತು ಅಸಾಮದ ಸಿಲ್ಹಟ ಜಿಲ್ಹೆ ಪೂರ್ವ ಬಂಗಾಲದಲ್ಲಿ ಸೇರಬಯಸಿದರೆ ಅದನ್ನು ಸೇರಿಸಿಕೊಳ್ಳಬೇಕೋ ಬೇಡವೋ ಎಂಬ ನಿರ್ಣಯವನ್ನು ಬಂಗಾಲ ಶಾಸನ ಸಭೆ ಮಾಡಿಬಿಡುವದು. ಸಿಲ್ಹಟ ಜಿಲ್ಹೆ ಅಸಾಮುದಿಂದ ಬೇರಾಗುವದು ಸಂಶಯವೆಂದು ತೋರುತ್ತದೆ. ಅಲ್ಲಿಯ ಲೀಗ ಅಧ್ಯಕ್ಷರೇ ಹಾಗೆ ಅಭಿಪ್ರಾಯಪಟ್ಟಿದ್ದಾರೆ. ಪಂಜಾಬ ವಿಭಜನೆಯ ನಿರ್ಣಯ ತಾ. ೨೩ಕ್ಕೆ ಶಾಸನ ಸಭೆಯ ಗುಪ್ತಮೌನ, ಅಧಿವೇಶನದಲ್ಲಿ ಆಗಬೇಕೆಂದು ನಿರ್ಣಯಿಸಲ್ಪಟ್ಟಿದೆ. ಗಡಿನಾಡು ಪ್ರಾಂತದ ಮತಗಣನೆಯ ಪ್ರಶ್ನೆ ಮಾತ್ರ ಇನ್ನೂ ಚರ್ಚೆಯಲ್ಲಿಯೆ ಇದೆ. ಕಾಂಗ್ರೆಸ್ಸು ಮತಗಣನೆಗೇ ವಿರುದ್ಧವಿದೆ. ಪಠಾಣರ ಮುಂದೆ ಸ್ವಾತಂತ್ರ್ಯ ಮತ್ತು ಪಾಕಿಸ್ತಾನದಲ್ಲಿ ಸಮಾವೇಶ ಇವುಗಳಲ್ಲೊಂದನ್ನು ಆರಿಸುವ ಕೆಲಸವಿರದೆ ಪಾಕಿಸ್ತಾನ ಹಿಂದುಸ್ತಾನಗಳಲ್ಲೊಂದನ್ನು ಸೇರುವ ಪ್ರಶ್ನೆಯಿದೆ. ಇದು ಯೋಗ್ಯವಲ್ಲೆಂದು ಕಾಂಗ್ರೆಸ್ಸಿಗರ ಮತ ಸ್ವತಂತ್ರ ಪಠಾಣಿಸ್ತಾನವಾಗಬೇಕೆಂಬ ಬಾದಶಾ ಖಾನರ ಸೂಚನೆಗೆ ವಾಯಿಸರಾಯರೂ ಜಿನ್ನಾರೂ ಒಪ್ಪಿಲ್ಲವಂತೆ. ಮತಗಣನೆಯಿಂದ ಅನವಶ್ಯಕ ರಕ್ತಪಾತವಾಗುವ ಸಂಭವವುಂಟು. ಅದರಿಂದ ಅದಿಲ್ಲದೆ ಸಮಸ್ಯೆಯನ್ನು ಬಗೆಹರಿಸುವದು ಸಾಧ್ಯವಾಗುವದೇ ನೋಡಬೇಕೆಂದು ಗಡಿನಾಡ ಗಾಂಧಿಯವರು ಜಿನ್ನಾ ಸಾಹೇಬರೊಡನೆ ಚರ್ಚೆ ಆರಂಭಿಸಿದ್ದಾರೆ. ಆದರೆ ಮತಗಣನೆ ಜುಲೈ ೨೦ ರೊಳಗೆ ಮುಗಿಯುವಂತೆ ವ್ಯವಸ್ಥೆಯಾಗುತಿದೆ. ತಮ್ಮ ಮೇಲೆ ಪಕ್ಷಪಾತದ ಆರೋಪವಿರುವದರಿಂದ ಆ ಪ್ರಾಂತದ ಗವರ್ನರರಾದ ಆಲಿಫ ಕ್ಯಾರೋ ಅವರು ಎರಡು ತಿಂಗಳ ರಜೆ ತೆಗೆದುಕೊಂಡಿದ್ದು ಅವರ ಸ್ಥಾನಕ್ಕೆ ಸರ್ ರಾಬ ಲಾಕಹಾರ್ಟರು ನೇಮಿಸಲ್ಪಟ್ಟಿದ್ದಾರೆ. ಪಾಕಿಸ್ತಾನಕ್ಕೆ ಪಠಾಣರನ್ನು ಒಲಿಸಿಕೊಳ್ಳಲು ಜಿನ್ನಾ ಸಾಹೇಬರು ಗಡಿನಾಡಿನಲ್ಲಿ ಸಂಚರಿಸಲಿರುವರು. ಆದರೆ ಶೀಯಾ ಮುಸ್ಲಿಮರಾದ ಅವರು ಗುಡ್ಡಗಾಡಿನ ಹತ್ತರ ಸುಳಿದರೆ ಅವರ ಜೀವಕ್ಕೆ ಅಪಾಯ ಬಂದೀತೆಂದು ಗುಡ್ಡಗಾಡಿನ ಜನರ ಮುಂದಾಳುಗಳು ಎಚ್ಚರಿಕೆ ಕೊಟ್ಟಿದ್ದಾರೆ. ಹಿಂದೀ ಸೈನ್ಯದ ವಿಭಜನೆಯ ಮಾತುಕತೆಗಳೂ ಮುಂದುವರಿದಿದ್ದು ಸೈನಿಕರ ಇಚ್ಛೆಯ ಮೇಲೆ ಅವರನ್ನು ಹಿಂದುಸ್ತಾನ ಅಥವಾ ಪಾಕಿಸ್ತಾನ ಸೈನ್ಯದಲ್ಲಿ ಇರಗೊಡಿಸಲಾಗುವದಂತೆ.

ಘಟನಾ ಸಮಿತಿಗಳು

ಈ ನಡುವೆ ಹಿಂದುಸ್ತಾನ ಪಾಕಿಸ್ತಾನಗಳ ರಾಜ್ಯರಚನೆಯ ಸನ್ನಾಹ ಭರದಿಂದ ಸಾಗಿದೆ. ಹಿಂದುಸ್ತಾನದ ಘಟನೆ ಈ ವರ್ಷಾಂತ್ಯದೊಳಗೆ ಸಿದ್ಧವಾಗುವದೆಂದು ಬಾಬು ರಾಜೇಂದ್ರ ಪ್ರಸಾದರು ಹೇಳಿದ್ದಾರೆ. ಪಾಕಿಸ್ತಾನ ಘಟನಾ ಸಮಿತಿಯನ್ನು ಕರಾಚಿಯಲ್ಲಿ ಕೂಡಿಸುವ ಎತ್ತುಗಡೆ ನಡೆದಿದೆ; ಪಾಕಿಸ್ತಾನವೆಂಬುದು ಸ್ವಾಯತ್ತ ಘಟಕಗಳು ಸಂಯುಕ್ತರಾಜ್ಯವಾಗುವದೆಂದು ಜಿನ್ನಾ ಸಾಹೇಬರು ಹೇಳಿದರು. ಪಾಕಿಸ್ತಾನ ವಿಭಾಗದ ಘಟನಾ ಸಮಿತಿಯ ಹಿಂದೂ ಸದಸ್ಯರು ಸೇರಿ ಅಲ್ಪಸಂಖ್ಯಾಕರ ಹಿತರಕ್ಷಣೆಗೆ ಸಂಘಟಿತ ಪ್ರಯತ್ನಗಳನ್ನು ಕೈಕೊಳ್ಳುವ ವಿಚಾರವನ್ನು ನಡೆಸಿದ್ದಾರೆ. ಹಿಂದುಸ್ತಾನದಲ್ಲಂತೂ ಪ್ರತ್ಯೇಕ ಮತದಾರ ಪದ್ಧತಿ, ವಿಶೇಷಾಧಿಕಾರ, ವಿಶೇಷ ಪ್ರಾತಿನಿಧ್ಯ ಪದ್ಧತಿಗಳನ್ನು ಸಾಗಮಾಡಿ ಎಲ್ಲ ಪ್ರಜೆಗಳಿಗೂ ಜಾತಿಮತಭೇದವಿಲ್ಲದೆ ಸಮಾನ ಅವಕಾಶವನ್ನು ಕೊಡುವ ಘಟನೆಯನ್ನು ರಚಿಸಬೇಕೆಂದು ಕಾಂಗ್ರೆಸ್ಸಿಗರು ನಿರ್ಧರಿಸಿದ್ದಾರೆ. ಪಾಕಿಸ್ತಾನದಲ್ಲಾದರೂ ಪ್ರತ್ಯೇಕ ಮತದಾನ ನಾಶವಾಗುವಂತೆ ತೋರುತ್ತದೆ.

ಅಮೆರಿಯವರ ಸೂಚನೆ

ಕಾನ್ಸರ್ವೇಟಿವ ಸರಕಾರದಲ್ಲಿ ಭಾರತ ಮಂತ್ರಿಗಳಾಗಿದ್ದ ಎಲ್. ಎಸ್. ಅಮೆರಿಯವರು ಲಂಡನ್ನಿನ ರಾಯಲ ಎಂಪಾಯರ ಸಂಘದ ಸಭೆಯಲ್ಲಿ ಹಿಂದೀ ಪರಿಸ್ಥಿತಿಯನ್ನು ಕುರಿತು ಕೆಲ ಸಲಹೆಗಳನ್ನು ಕೊಟ್ಟರು. ಸ್ವತಂತ್ರವಾದ ಎರಡು ರಾಜ್ಯಗಳು ಹಿಂದುಸ್ಥಾನದಲ್ಲಿ ಸ್ಥಾಪಿತವಾಗಿ ಬ್ರಿಟಿಶ್ ಸಾಮಂತರಾಜ್ಯ ಮಂಡಲದಲ್ಲಿಯೆ ಉಳಿಯುವದರ ಪ್ರಯೋಜನವನ್ನುಲ್ಲೇಖಿಸುವ ಸಾಮಂತ ರಾಜ್ಯಗಳ ನಾಗರಿಕತ್ವ ಪರಸ್ಪರ ಬದಲಾಯಿಸಿ ಬರುವಂಥದಿರುವದರಿಂದ ಅದು ಈ ಎರಡು ಹೋಳುಗಳ ಸೌಹಾರ್ದಕ್ಕೆ ಸಾಧಕವಾಗಬಹುದೆಂದರು. ಅದಲ್ಲದಿದ್ದರೆ ಹಿಂದೀ ರಾಜ್ಯಗಳ (ಸಂಸ್ಥಾನಗಳು ಸ್ವತಂತ್ರವಾಗುವದಕ್ಕೆ ಅಮೆರಿಯವರ ಬೆಂಬಲವುಂಟು) ಕಾಮನ್‍ವೆಲ್ಥ ಅಥವಾ ರಾಜ್ಯ ಮಂಡಲವನ್ನು ಕಟ್ಟಿ ಎಲ್ಲರಿಗೂ ಸಾಮಾನ್ಯವಾದ ಸಂರಕ್ಷಣ ಮೊದಲಾದವುಗಳನ್ನು ಜತೆಯಾಗಿ ನಡೆಸಬೇಕೆಂಬ ಅವರ ಇನ್ನೊಂದು ಸೂಚನೆ ಗಮನಾರ್ಹವಾಗಿದೆ. ಭಾರತ ನಮ್ಮೊಡನೆ ಹಾಗು ಇತರ ರಾಷ್ಟ್ರಗಳೊಡನೆ ಒಡಂಬಡಿಕೆ ಮಾಡಿಕೊಂಡು ಪೂರ್ವ ಪಶ್ಚಿಮಗಳಲ್ಲಿ ಬ್ರಿಟಿಶ್ ಹಾಗು ಭಾರತೀಯ ಮುತ್ಸದ್ದಿಗಳ ಸಹಕಾರದಿಂದ ಹೊಸ ಮನ್ವಂತರ ಆರಂಭಿಸುವದೆಂದು ಆಶೆ ಪ್ರದರ್ಶಿಸಿದರು.

ಜೂನ ೧೩ ರಲ್ಲಿ ಜಿಲ್ಹಾ ಕಾಂಗ್ರೆಸ ಮಹಾಸಭೆ ಮಂಗಳೂರಲ್ಲಿ ಸೇರಿ ಸ್ಥಾನಿಕ ಸಂಸ್ಥೆಗಳ ಚುನಾವಣೆಯಲ್ಲಿ ಭಾಗವಹಿಸಬಾರದೆಂದೂ ಮಂಗಳೂರನ್ನು ಮುಖ್ಯ ಬಂದರಾಗಿ ಮಾಡಬೇಕೆಂದೂ ಗುಂಡ್ಯದ್ಯದ ಪೋಲೀಸ ಅತ್ಯಾಚಾರದ ವಿಚಾರಣೆ ಯಾಗಬೇಕೆಂದೂ ಗೊತ್ತುವಳಿಗಳನ್ನು ಸ್ವೀಕರಿಸಿತು.

ಅಂತರರಾಷ್ಟ್ರೀಯ

ಎರಡು ಬಣ

ಚರ್ಚಿಲ್ಲರ ಕನಸೊಂದು ಫಲಿಸುವ ಕಾಲ ಒದಗಿದಂತೆ ಕಾಣುತ್ತದೆ.

ಯುರೋಪಿಯನ್ ರಾಷ್ಟ್ರಗಳ ಸಂಯುಕ್ತ ರಾಜ್ಯವನ್ನು ಸ್ಥಾಪಿಸಬೇಕೆಂದು ಅವರು ಬಹಳ ದಿನಗಳಿಂದ ಚಡಪಡಿಸುತ್ತಿದ್ದರು. "ಯುರೋಪಿನ ಪರೀಕ್ಷಾ ಕಾಲ ಬಂದಿದೆ," ಎಂದವರು ಹಿಂದೊಂದು ಭಾಷಣದಲ್ಲಿ ಹೇಳಿದ್ದರು. ಆಗ ಅದಕ್ಕೆ ಯಾರೂ ಅಷ್ಟು ಗಮನಕೊಟ್ಟಂತೆ ಕಾಣಲಿಲ್ಲ. ಈಗ ಅಮೇರಿಕನ್ ವಿದೇಶ ಮಂತ್ರಿ ಜಾರ್ಜ ಮಾರ್ಶಲ್ಲರು ಅದಕ್ಕೆ ಬೆಂಬಲ ಕೊಟ್ಟಿದ್ದಾರೆ. ಅಮೇರಿಕನ್ ಶಾಸನ ಸಭೆಯಲ್ಲಿ ಸಂಯುಕ್ತ ಯುರೋಪ ಯೋಜನೆಗೆ ಬೆಂಬಲ ನೀಡುವ ಗೊತ್ತುವಳಿ ಬಂದಿತು.

ವಿಧ್ವಸ್ತ ಯುರೋಪಿಗೆ ಸಹಾಯ ಮಾಡಲು ನೂರುಗಟ್ಟಲೆ ಕೋಟಿ ಡಾಲರುಗಳನ್ನು ಸುರಿಸುವ ಯೋಜನೆಯೂ ಅಮೇರಿಕೆಯ ಪ್ರಮುಖರ ದೃಷ್ಟಿಯಲ್ಲಿದೆ.

ಅಂದರೆ ಯುರೋಪಿನ ಸಂಯುಕ್ತ ರಾಜ್ಯವನ್ನ ಸ್ಥಾಪಿಸಲು ಅಮೇರಿಕನ್ ಡಾಲರುಗಳು ಹೊಳೆಯಾಗಿ ಯುರೋಪಿಗೆ ಹರಿಯುವವೆಂದು ಅರ್ಥ.

ಈ ಯೋಜನೆಯಲ್ಲಿ ರಶಿಯಾದ ವಿರುದ್ಧ ಬಣ ಕಟ್ಟುವದು ಉದ್ದೇಶವಿಲ್ಲೆಂದು ಹೇಳಲಾಗಿದೆ. ಇದರಲ್ಲಿ ಭಾಗವಹಿಸಲು ರಶಿಯಾಕ್ಕೆ ಕೂಡ ಆಮಂತ್ರಣ ಕೊಡಲಾಗುವದಂತೆ. ಚರ್ಚಿಲ್ಲರು ಕೂಡ ತಮ್ಮದು ರಶಿಯಾ ವಿರುದ್ಧ ಹಂಚಿಕೆಯಲ್ಲೆಂದಿದ್ದರು. ಆದರೆ ಯಾರೂ ಅದನ್ನು ನಂಬುವದಿಲ್ಲ.

ಅಮೇರಿಕೆಯ ಧೋರಣವನ್ನು ಸಕ್ರಿಯವಾಗಿ ರಶಿಯಾ ವಿರೋಧಿಯಾಗಿ ಮಾಡುವದಕ್ಕೆ ಬಹಳಮಟ್ಟಿಗೆ ಕಾರಣರಾದ, ಮಾಸ್ಕೋದಲ್ಲಿ ಹಿಂದೆ ಅಮೇರಿಕನ್ ರಾಯಭಾರಿಯಾಗಿದ್ದ ಬುಲಿಟ್ಟರು ಹೆಚ್ಚು ಪ್ರಾಮಾಣಿಕತನದಿಂದ ಮಾತಾಡಿದರು. "ಯುರೋಪಿನಲ್ಲಿ ಉಳಿದುಳಿದ ಪ್ರಜಾತಂತ್ರಗಳು ಪರಸ್ಪರ ಸಂರಕ್ಷಣೆಗಾಗಿ ಒಂದಾಗದೆ ಹೋದರೆ ಕಾಲಾಂತರದಲ್ಲಿ ಸೋವಿಯಟ್ ರಾಜ್ಯ ಅವುಗಳನ್ನು ನುಂಗಿ ನೀರುಕುಡಿಯುವದು ಖಂಡಿತ." ಅಮೇರಿಕೆಯ ಭಯವೊಂದೇ ರಶಿಯಾದ ಕೈಯನ್ನು ತಡೆದಿದೆಯೆಂದು ಅವರ ಮತ. ಯುರೋಪಿಯನ್ ಸಂಯುಕ್ತ ರಾಜ್ಯವನ್ನು ಸ್ಥಾಪಿಸಬೇಕೆನ್ನುವವರ ಮನಸ್ಸಿನಲ್ಲಿರುವ ಭೀತಿ ಇದೇ.

ಹಿಂದುಸ್ತಾನಕ್ಕೆ ಅಮೇರಿಕೆಯ ರಾಯಭಾರಿಗಳಾಗಿ ನೇಮಿಸಲ್ಪಟ್ಟಿರುವ ಗ್ರೇಡಿಯವರೂ "ಯುದ್ಧವಿನ್ನೂ ನಿಂತಿಲ್ಲ, ಸೋವಿಯಟ್ ಸರಕಾರ ನಮ್ಮನ್ನು ಅಪ್ಪಳಿಸಿದೆ" ಎಂದು ಸಿಂಗಾಪುರದಲ್ಲಿ ಹೇಳಿದರು.

ಹೀಗಿರುವಾಗ ಚರ್ಚಿಲ್ಲರ ಪ್ರೀತಿಯ ಸಂಯುಕ್ತ ಯುರೋಪ ಯೋಜನೆಗೆ ಜಾರ್ಜ ಮಾರ್ಶಲ್ಲರ ಬೆಂಬಲ ದೊರಕಿದ್ದು ರಶಿಯವನ್ನು ಎದುರಿಸಲು ಯುರೋಪಿನ ರಾಷ್ಟ್ರಗಳನ್ನು ಸಂಘಟಿಸುವ ಉದ್ದೇಶದಿಂದಲೇ ಎಂಬಲ್ಲಿ ಸಂಶಯವಿಲ್ಲ. ರಶಿಯಾವಾದರೂ ಇದನ್ನು ಅದೇ ಭಾವನೆಯಿಂದ ನೋಡುವದೆಂದು ಹೇಳಲೇಬೇಕಾಗಿಲ್ಲ.

ಬ್ರಿಟನ್ ಫ್ರಾನ್ಸುಗಳ ಬೆಂಬಲ

ಯುರೋಪಿನ "ಆರ್ಥಿಕ ಪುನರುಜ್ಜೀವನ"ದ ಸೋಗಿನಲ್ಲಿ ನಡೆಯುವ ಈ ಆಟದ ವಿಷಯ ಅಮೇರಿಕೆ ಒಳ್ಳೆ ಗಂಭೀರವಾಗಿಯೇ ಕೆಲಸ ಮಾಡುತ್ತಿದೆ. ಅಧ್ಯಕ್ಷ ಟ್ರೂಮನ್ನರು ಕಳೆದ ವಾರ ತಮ್ಮ ನೆರೆನಾಡಾದ ಕೆನಡಾಕ್ಕೆ ಮೂರು ದಿನಗಳ ರಾಜ್ಯಾತಿಥಿಯಾಗಿ ಹೋದುದು ಇದೇ ಸಂಬಂಧದಲ್ಲ ಎಂದು ತಿಳಿಯಲು ಅಡ್ಡಿಯಿಲ್ಲ. ಒಟಾವಾದಲ್ಲಿ ಅವರು "ಜಗತ್ತಿನ ಆರೋಗ್ಯವನ್ನು ಪುನಃ ಸ್ಥಾಪಿಸುವ" ತಮ್ಮ ಮಹಾಯೋಜನೆಯಲ್ಲಿ ಭಾಗವಹಿಸಲು ಕೆನಡಾವನ್ನು ಕೇಳಿಕೊಂಡರು. ಉದಾತ್ತ ಶಬ್ದಗಳ ಮುಸುಕನ್ನು ಹೊದ್ದಿರುವ ಈ ಯೋಜನೆಯಲ್ಲಿ "ನೆರೆಹೊರೆಯವರೊಡನೆ ಶಾಂತಿಯಿಂದಿರುವ ಮತ್ತು ಅವರ ಮೇಲೆ ತಾವು ಬಲಾತ್ಕಾರವನ್ನು ನಡಸದೆ ಅವುಗಳ ಬಲಾತ್ಕಾರವನ್ನೂ ಸಹಿಸದೆ, ಬೆದರಿಸದೆ ಬೆದರದೆ ಇರುವ" ರಾಷ್ಟ್ರಗಳಿಗೆ ಸಹಾಯ ಮಾಡುವ ಧ್ಯೇಯ ಸೋವಿಯಟ್ ರಾಜ್ಯದ ವಿರುದ್ಧವೇ ಗುರಿ ಹಿಡಿಯಲ್ಪಟ್ಟಿದೆ.

ತಮ್ಮ ಯೋಜನ ಯುರೋಪಿನ ಒಳ ವಿಚಾರಗಳಲ್ಲಿ ಕೈಹಾಕಬಯಸುವದಿಲ್ಲವೆಂದು ಮಾರ್ಶಲ್ಲರು ಹೇಳಿದ್ದಾರೆ. ಆದರೆ ಸಹಾಯಕ್ಕೆ ಕರಾರು ಹಾಕುವ ಪದ್ಧತಿಯೇ ಒಂದು ಬಗೆಯ ಹಸ್ತಕ್ಷೇಪ.

ಆದರೆ ಒಂದು ಕಡೆ ರಶಿಯಾದ ಭಯ ಇನ್ನೊಂದೆಡೆ ಯುದ್ಧದಿಂದೊದಗಿದ ಆರ್ಥಿಕ ಬಿಕ್ಕಟ್ಟು, ಇವುಗಳಿಂದ ನರಳುತ್ತಿರುವ ಯುರೋಪಿನ ರಾಷ್ಟ್ರಗಳು ಈ ಯೋಜನೆಯನ್ನು ಸ್ವಾಗತಿಸಲು ಸಿದ್ಧವಾದರೆ ಆಶ್ಚರ್ಯವಲ್ಲ. ನಿಜವಾಗಿ ಬ್ರಿಟನ್ ಫ್ರಾನ್ಸುಗಳು ಈಗಾಗಲೆ ಅದರಲ್ಲಿ ಭಾಗವಹಿಸಲು ಒಪ್ಪಿಗೆ ಸೂಚಿಸಿವೆ. ಇಂಗ್ಲಂಡು ಈ ವಿಷಯದಲ್ಲಿ ಮುಂದಾಳ್ತನ ವಹಿಸುವ ಲಕ್ಷಣ ಕಾಣಬರುತ್ತಿದೆ. ಫ್ರೆಂಚ ವಿದೇಶ ಕಚೇರಿಯಂತೂ ಯುರೋಪಿಗೆ ಸಹಾಯ ನೀಡುವ ಯೋಜನೆ ಬೇಗನೆ ಪ್ರಾರಂಭವಾಗಬೇಕೆಂದು ಸೂಚಿಸಿದೆ.

ರಶಿಯನ್ ಪ್ರತಿಕ್ರಿಯೆ

ಈ ಎಲ್ಲ ಗತ್ತುಗಳಿಗೆ ರಶಿಯಾದ ಅಧಿಕೃತ ಪ್ರತಿಕ್ರಿಯೆ ಮಾತಿನಲ್ಲಿ ಪ್ರಕಟವಾಗುವ ಬದಲು ಕೃತಿಯಲ್ಲಿ ಪ್ರಕಟವಾಗತೊಡಗಿದೆ. ಸಂಯುಕ್ತ ಯುರೋಪಿನ ಯಾವುದೇ ಯೋಜನೆಯನ್ನು ರಶಿಯಾ ಸ್ವಾಗತಿಸುವದಿಲ್ಲವೆಂಬುದು ನಿಚ್ಚಳವಾಗಿಯೆ ಇದೆ. ಚರ್ಚಿಲ್ಲರು ಆ ಯೋಜನೆಯನ್ನು ಮುಂದೊಡ್ಡಿದಾಗ ರಶಿಯನ್ ಪತ್ರಿಕೆಗಳು ಅವರನ್ನು "ಜಗಳಗಂಟ" ಅಥವಾ "ಯುದ್ಧೋತ್ಪಾದಕ" ಎಂದು ಕರೆದಿದ್ದವು. ಯುರೋಪವನ್ನು ಅದರ ಪಾಡಿಗೆ ಬಿಟ್ಟರೆ ಬಂಡವಳಗಾರಿಕೆಯ ಅರ್ಥಸೂತ್ರ ಇಂದಿನ ಪರಿಸ್ಥಿತಿಯನ್ನೆದುರಿಸಲಾರದೆಂದೂ ಆಗ ಅದು ಅನಾಯಾಸವಾಗಿ ಕಮ್ಯುನಿಝಮನ್ನು ಅಪ್ಪಿಕೊಳ್ಳುವದೆಂದೂ ಅವರು ನಂಬಿದ್ದಾರೆ. ಬಾಲ್ಕನ ರಾಷ್ಟ್ರಗಳಲ್ಲಿ ಈಗೆರಡು ವಾರಗಳಿಂದ ನಡೆದ ಘಟನೆಗಳು ಮಾರ್ಶಲ ಯೋಜನೆಯ ಸುಳಿವು ರಶಿಯನ್ನರಿಗೆ ಹತ್ತಿದ್ದರ ಫಲವೇ ಇರಬೇಕು.

❋ ಹಂಗೇರಿಯಲ್ಲಾದ ಮಂತ್ರಿಮಂಡಲ ಬದಲಾವಣೆ ಆ ದೇಶ ಪಾಶ್ಚಿಮಾತ್ಯ ಗುಂಪನ್ನು ಸೇರದಂತೆ ವಹಿಸಿದ ಮುಂಜಾಗ್ರತೆಯೆ ಆಗಿತ್ತು. (ಕರ್ಮವೀರ ೧೬—೬—೪೭)

ಬ್ರಿಟಿಶರೂ ಅಮೇರಿಕನ್ನರೂ ಆ ಬಗ್ಗೆ ರಶಿಯಾಕ್ಕೆ ಕಳಿಸಿದ ಎಚ್ಚರಿಕೆಯೂ ತಮಗೆ ಬೆಂಬಲ ಕೊಡಬಹುದಾಗಿದ್ದ ಪಕ್ಷದ ಉಚ್ಚಾಟನೆಯಾದುದರಿಂದ ಹುಟ್ಟಿದ ಹೊಟ್ಟೆ ಉರಿಯಿಂದಲೇ ಪ್ರೇರಿತವಾಗಿತ್ತು. ಈ ಎಚ್ಚರಿಕೆ ರಾಯಸಗಳನ್ನು ರಶಿಯಾ ಸರಳವಾಗಿ ಎತ್ತಿ ಒಗೆದುಬಿಟ್ಟಿತು. "ನಾವೇನೂ ಹಂಗೇರಿಯಲ್ಲಿ ಹಸ್ತಕ್ಷೇಪ ಮಾಡಿಲ್ಲ. ಮುಖ್ಯ ಮಂತ್ರಿ ನೇಗಿ ಮತ್ತು ಅವನ ಸಂಗಡಿಗರ ವಿಚಾರಣೆ ಹಂಗೇರಿಯಲ್ಲಿ ಬಹಿರಂಗವಾಗಿ ಆಗಲಿದೆ. ಆಗ ನಿಮಗೆ ವಿವರಗಳು ತಿಳಿದೇ ತಿಳಿಯುವವು. ನೇಗಿ ಹೋದರೂ ಅವನ ಪಕ್ಷದವನೇ ಮತ್ತೆ ಮುಖ್ಯ ಮಂತ್ರಿಯಾಗಿದ್ದಾನೆ. ಆದರಿಂದ ನಾವು ಒಳಸಂಚು ಮಾಡಿದೆವೆಂಬುದು ಸುಳ್ಳು" ಎಂದಿತದು. ಹೆನ್ರಿ ವಾಲೇಸರು ಹೇಳಿದಂತೆ ಗ್ರೀಸಿನಲ್ಲಿ ಅಮೇರಿಕನ್ನರು ಮಾಡುತ್ತಿದ್ದುದನ್ನೆ ರಶಿಯನ್ನರು ಹಂಗೇರಿಯಲ್ಲಿ ಮಾಡಿದರು

❋ ಬಲ್ಗೇರಿಯಾದಲ್ಲಿ ಆದ ಕೆಲ ಮುಂದಾಳುಗಳ ಬಂಧನವಾದರೂ ಶತ್ರುಶೇಷವನ್ನೂ ಉಳಿಸಬಾರದೆಂಬ ಚಾಣಕ್ಯನೀತಿಯ ಆಚರಣೆಯೆ.

❋ ಈಗ ಹೊಸತಾಗಿ ಆಸ್ಟ್ರಿಯಾದಲ್ಲಿ ಮಂತ್ರಿಮಂಡಲ ಬದಲಾವಣೆಗಾಗಿ ಒತ್ತಾಯ ಪ್ರಾರಂಭವಾಗಿದೆ. ಈಗಿರುವ ಸರಕಾರ ಪ್ರಾತಿನಿಧಿಕವಾಗಿದೆಯೆಂದು ಪಾಶ್ಚಿಮಾತ್ಯ ಮಿತ್ರರು ವಾದಿಸುತ್ತಿದ್ದರೆ ಅದು "ಪ್ರಜಾತಂತ್ರಾತ್ಮಕ"ವಿಲ್ಲವೆಂದು ರಶಿಯಾ ಹೇಳುತ್ತಿದೆಯೆಂದೂ ಸದ್ಯದ ಸರಕಾರದೊಡನೆ ತಾನೆಂದೂ ಶಾಂತಿ ಒಪ್ಪಂದ ಮಾಡಿಕೊಳ್ಳುವಂತಿಲ್ಲವೆಂದೂ ಅದು ಹಟ ತೊಡಬಹುದೆಂದೂ ಹೇಳಲಾಗಿದೆ. ಆಸ್ಟ್ರಿಯಾದ ಮೇಲೆ ವರ್ಚಸ್ಸು ಗಳಿಸಲು ಎರಡೂ ಬಣಗಳು ಪ್ರಯತ್ನಿಸುತ್ತಿದ್ದು ಅಲ್ಲಿಯ ಕಮ್ಯುನಿಸ್ಟರು ಅಧಿಕಾರ ಸೆಳೆದುಕೊಳ್ಳಲು ಸಾಹಸ ಮಾಡುತ್ತಿದ್ದಾರೆ.

❋ ಯುಗೊಸ್ಲಾವಿಯಾದ ಮಾರ್ಶಲ್ ಟಿಟೋ ಬಾಲ್ಕನ್ ರಾಷ್ಟ್ರಗಳ ಸಂಯುಕ್ತ ರಾಜ್ಯವನ್ನು ರಶಿಯಾದ ನೇತೃತ್ವದಲ್ಲಿ ಸ್ಥಾಪಿಸಲು ಮಾತುಕತೆ ಪ್ರಾರಂಭಿಸಿದ್ದಾನಂತೆ. ಮಾರ್ಶಲ ಯೋಜನೆಯ ಫಲವಾಗಿ ಫ್ರಾನ್ಸ ಇಟಲಿಗಳಲ್ಲಿ ಕಮ್ಯುನಿಸ್ಟರು ಸರಕಾರದಿಂದ ಹೊರತಳ್ಳಲ್ಪಟ್ಟಂತೆ ಇಲ್ಲಿಯೂ ಬೇಡದವರ ಉಚ್ಚಾಟನೆ ನಡೆದಿದೆ.

ಹೀಗೆ ಎರಡು ಯುರೋಪುಗಳು ಒಂದನ್ನೊಂದು ಎದುರಿಸಲಿವೆ. ಗ್ರೀಸ್, ತುರ್ಕಿಗಳು ಮದ್ದಿನ ಮನೆಗಳಾಗಿವೆ.

ಲಾರ್ಡ್ಸರ ಉಪದ್ರವ

ಕಳೆದವಾರ ಬ್ರಿಟಿಶ ಪಾರ್ಲಮೆಂಟಿನ ಲಾರ್ಡ್ಸ ಭವನದಲ್ಲಿ ಸರಕಾರಕ್ಕೆ ಬೆನ್ನು ಬೆನ್ನಿಗೆ ಮೂರು ಸೋಲುಗಳು ಒದಗಿದವು. ಅಂತರಿಕ ವಾಹನ ಸೌಕರ್ಯಗಳನ್ನು ರಾಷ್ಟ್ರೀಕರಿಸುವ ಮಸೂದೆ ಸಭೆಯ ಮುಂದಿತ್ತು. ಮಸೂದೆ ಈಗಾಗಲೇ ಕಾಮನ್ಸ್ ಭವನದಲ್ಲಿ ತೇರ್ಗಡೆ ಹೊಂದಿತ್ತು. ಆದರೆ ಲಾರ್ಡ್ಸ ಭವನದಲ್ಲಿ ಕಾನ್ಸರವೇಟಿವ ಸದಸ್ಯರು ಅದಕ್ಕೆ ಮೂರು ತಿದ್ದುಪಡಿಗಳನ್ನು ತಂದರು. ಸರಕಾರ ಅವುಗಳನ್ನು ಸ್ವೀಕರಿಸಲೊಪ್ಪಲಿಲ್ಲ. ಪರಿಣಾಮವಾಗಿ ಕಾನ್ಸರವೇಟಿವ ಪಕ್ಷದ ಪ್ರಾಬಲ್ಯವುಳ್ಳ ಲಾರ್ಡ್ಸನಲ್ಲಿ ಸರಕಾರಕ್ಕೆ ಸೋಲಾಯಿತು.

ವಸಾಹತು ಕಾರ್ಯದರ್ಶಿ (ಸರಕಾರಿ ಪಕ್ಷ) ಲಾರ್ಡ ಎಡಿಸನ್ನರು, ಈ ಬಗೆಯಾಗಿ ಅಪ್ರಾತಿನಿಧಿಕ ಲಾರ್ಡ್ಸ ಸಭೆ (ಲಾರ್ಡ್ಸ ಸಭೆ ಚುನಾವಣೆಯಿಂದ ಆರಿಸಲ್ಪಡದೆ ಲಾರ್ಡ್ಸ ಪದವಿಯುಳ್ಳವರೆಲ್ಲರಿಂದ ಕೂಡಿರುತ್ತದೆ) ತನ್ನ "ಯಾಂತ್ರಿಕ ಬಹುಮತ"ದಿಂದ ಪ್ರಾತಿನಿಧಿಕ ಕಾಮನ್ಸ ಸಭೆಯ ನಿರ್ಣಯಗಳನ್ನು ಬದಲಿಸಲು ಹವಣಿಸುವದು ತೀರ ಅಪಾಯಕರ", ಎಂದರು. ಲಾರ್ಡ ಸಭೆ ಹೀಗೆಯೆ ಕೂಲಿಕಾರ ಸರಕಾರಕ್ಕೆ ಅಡ್ಡಗಾಲು ಹಾಕುತ್ತ ಹೋದರೆ ಅದನ್ನು "ನಿರುಪದ್ರವಿ"ಯಾಗಿ ಮಾಡಲು ಕ್ರಮ ಕೈಕೊಳ್ಳಬೇಕಾದೀತು ಎಂದು ಸರಕಾರಿ ಪಕ್ಷ ಎಚ್ಚರಿಕೆ ಕೊಟ್ಟಿದೆ.

ಲಾರ್ಡ್ಸ ಸಭೆ, ಬ್ರಿಟಿಶ ಪಾರ್ಲಮೆಂಟು ಹುಟ್ಟಿದಂದಿನಿಂದಲೂ ಇದೆ. ಆದರೆ ಕಾಲಕಾಲಕ್ಕೆ ಕಾಮನ್ಸ ಸಭೆ ತನ್ನ ಶಕ್ತಿ ತೋರಿಸಿ ಅದರ ಅನೇಕ ಅಧಿಕಾರಗಳನ್ನು ಕಸಿದುಕೊಂಡಿತ್ತು. ಈಗ ಯಾವುದೇ ಮಸೂದೆಯನ್ನು ಮೂರು ಬಾರಿ ತಿರಸ್ಕರಿಸಿ ವಿಲಂಬ ಮಾಡುವ ಸಾಮರ್ಥ್ಯ ಮಾತ್ರ ಅದಕ್ಕುಳಿದಿದೆ. ಗತಕಾಲದ ಅವಶೇಷವಾದ ಈ ಸಭೆಯನ್ನು ರದ್ದು ಮಾಡುವದು ಕೂಲಿಕಾರ ಪಕ್ಷದ ಚುನಾವಣೆ ಘೋಷಣೆಯಲ್ಲಿ ಸೇರಿಲ್ಲ. ಆದರೆ ತನ್ನ ಅಧಿಕಾರವನ್ನು ದುರುಪಯೋಗ ಮಾಡಿ, ಅವಸರದ ರಾಷ್ಟ್ರಕಾರ್ಯಕ್ಕೆ ಅಡಚಣೆ ತಂದರೆ ಜನಮತವನ್ನು ಸಂಘಟಿಸಿ ಸಭೆಯನ್ನೆ ರದ್ದುಗೊಳಿಸುವ ಕ್ರಮವನ್ನು ಕೂಲಿಕಾರ ಸರಕಾರ ಕೈಕೊಳ್ಳಬಹುದು.


ಬ್ರಿಟಿಶ—ಪೋಲೀಶ ವ್ಯಾಪಾರಿ ಒಪ್ಪಂದ

ಪ್ರಬಲ ರಾಷ್ಟ್ರಗಳ ಸಂಬಂಧದಲ್ಲಿ ಕಳೆದ ಹಲತಿಂಗಳುಗಳಿಂದ ಮುಸುಕಿದ ಕಾರ್ಮೋಡದಲ್ಲಿ ಕಳೆದ ವಾರ ಒಂದು ಬೆಳಕಿನ ಝಳಕು ಮಿಂಚಿತು. ಬ್ರಿಟನ್ನಿಗೂ ಪೋಲಂಡಿಗೂ ಒಂದು ವ್ಯಾಪಾರಿ ಒಪ್ಪಂದವಾಗಿದೆ. ಸೋವಿಯಟ್ ಪ್ರಭಾವದ ರಾಷ್ಟ್ರಗಳಲ್ಲೊಂದಾದ ಪೋಲಂಡಿನ ಸಂಗಡ ಹೀಗೆ ಒಪ್ಪಂದ ಸಾಧ್ಯವಾದುದು ಮುಂದೆ ಇಬ್ಬಣಗಳಲ್ಲಿ ಸ್ನೇಹ ಸ್ಥಾಪನೆಗೆ ಸಹಾಯಕವಾದರೂ ಆಗಬಹುದು. ಪೋಲಂಡಿನ ಎಲ್ಲ ಪಕ್ಷಗಳಿಗೆ ಸೇರಿದ ಪತ್ರಿಕೆಗಳೂ ಇದನ್ನು ಸ್ವಾಗತಿಸಿವೆ. ಪೋಲಂಡಿನಲ್ಲಾದ ಚುನಾವಣೆಗಳು ನ್ಯಾಯವೂ ಅನಿರ್ಬಂಧವೂ ಆಗಿಲ್ಲವೆಂದು ಬ್ರಿಟಿಶ ಸರಕಾರ ಸಾಧಿಸುತ್ತ ಬಂದಿತ್ತು. ಅದೇ ಪ್ರಕಾರ ಪೋಲೀಶ ಸರಕಾರವಾದರೂ ವಾರ್ಸಾದಲ್ಲಿದ್ದ ಬ್ರಿಟಿಶ ರಾಯಭಾರಿ ಪೋಲಿಶ ಸರಕಾರದ ಗೋಪ್ಯಗಳನ್ನು ತಿಳಿದುಕೊಳ್ಳಲು ನಡೆದ ಒಳಸಂಚಿನಲ್ಲಿ ಭಾಗವಹಿಸಿದ್ದನೆಂದು ಅಪ್ರತ್ಯಕ್ಷವಾಗಿ ಆರೋಪಿಸಿತ್ತು. ಅದರ ಫಲವಾಗಿ ಆ ರಾಯಭಾರಿಯನ್ನು ಬ್ರಿಟಿಶ ಸರಕಾರ ಹಿಂದೆ ಕರೆಸಿಕೊಂಡುದರಿಂದ ಉಭಯರಾಷ್ಟ್ರಗಳಲ್ಲಿ ಒಂದುಬಗೆಯ ಬಿಗುಮಾನ ಉಂಟಾಗಿತ್ತು. ಈಗ ಹೊಸ ರಾಯಭಾರಿಯ ನೇಮಕವೂ ಆಗಿದೆ.

ಮಂಗೋಲ—ಚೀನಿ ತಿಕ್ಕಾಟ ?

ಸ್ವತಂತ್ರ ಜನತಾ ರಾಜ್ಯವಾದ (ಸೋವಿಯಟ ರಶಿಯಾದಲ್ಲಿ ಸೇರದ ಕಮ್ಯುನಿಸ್ಟ ರಾಜ್ಯ) ಹೊರ ಮಂಗೋಲಿಯದ ಸೈನಿಕರು ಚೀನದ ಪಶ್ಚಿಮ ಪ್ರಾಂತವಾದ ಸಿಂಕಿಯಾಂಗಿನಲ್ಲಿ ನುಗ್ಗಿದ್ದಾರೆಂಬ ಸುದ್ದಿ ಹೊರಟು ಕಳೆದವಾರ ಅಂತರ್‌ರಾಷ್ಟ್ರೀಯರಂಗದಲ್ಲಿ ಕಲಮಲವೆಬ್ಬಿಸಿಬಿಟ್ಟಿತು. ಈ ಸೈನಿಕರಿಗೆ ರಶಿಯಾದ ಟ್ಯಾಂಕ ಮತ್ತು ವಿಮಾನ ಬಲದ ಸಹಾಯವಿತ್ತೆಂದೂ ಚೀನಿ ಸರಕಾರ ಆರೋಪಿಸಿದ್ದು ಇನ್ನಷ್ಟು ಗಾಬರಿಗೆ ಕಾರಣವಾಯಿತು. ಚೀನಿ ಸರಕಾರ ಸೋವಿಯಟ್ ಸರಕಾರಕ್ಕೆ ನಿಷೇಧ ಪತ್ರವನ್ನೂ ಕಳಿಸಿತು. ಆದರೆ ಆ ಮೇಲೆ ಮಂಗೋಲ ಸೈನಿಕರು ತಿರುಗಿ ಹೋದರೆಂದೂ ವರದಿಯಾಯಿತು. ಮಂಗೋಲ

—೧೩ನೇ ಪುಟಕ್ಕೆ



ಹೊಸ ಕಾಮನ್ಸ ಭವನ

ಯುದ್ಧಕಾಲದಲ್ಲಿ ಹಿಟ್ಲರನ ವಿಮಾನದಾಳಿಯಿಂದ ಧ್ವಂಸಗೊಂಡಿದ್ದ ಲಂಡನದಲ್ಲಿ ಬ್ರಿಟಿಶ ಕಾಮನ್ಸ ಸಭಾಭವನದ ಸ್ಥಳದಲ್ಲಿ ಹೊಸಕಟ್ಟಡ ಸಿದ್ಧವಾಗುತ್ತಿದೆ. ಅದರ ಉಕ್ಕಿನ ಅಸ್ಥಿಪಂಜರದ ನೋಟವಿದು.

ನಿಜಾಮರು ಸ್ವಾತಂತ್ರ್ಯಸಾರಿದರೆ ಆಘಾತವನ್ನೇ ಆಮಂತ್ರಿಸಿದಂತೆ

ಹೈದರಾಬಾದ ಕಾಂಗ್ರೆಸ್ಸಿನಲ್ಲಿ ಸ್ವಾಮಿ ರಮಾನಂದರ ಗರ್ಜನೆ

ಅಖಿಲಹೈದರಾಬಾದ ಕಾಂಗ್ರೆಸ ಕಮಿಟಿಯು ವಿಷಯನಿಯಾಮಕ ರೂಪದಲ್ಲಿ ಜೂನ ೧೫ ರಲ್ಲಿ ಪ್ರಾರಂಭವಾಯಿತು. ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ಜಯಕಾರದೊಡನೆ ಆಗಮಿಸಿದ ಬಳಿಕ 'ವಂದೇಮಾತರಂ' ಗೀತೆ ಹೇಳಿ ಕಾರ್ಯದರ್ಶಿಯವರ ವರದಿಯ ವಾಚನ ನಡೆಯಿತು. ವರದಿಯಲ್ಲಿ ಕಾರ್ಯದರ್ಶಿಗಳು ಆಯವ್ಯಯವನ್ನು ಓದಿ ಸಭೆಯ ಮುಂದಿಟ್ಟ ನಂತರ ಸ್ವಾಮಿಜಿಯವರು ಪೀಠಾರೋಹಣ ಮಾಡಿ ಈ ಕೆಳಗಿನಂತೆ ಭಾಷಣ ಮಾಡಿದರು.

ಅಧ್ಯಕ್ಷ ಭಾಷಣ

“ಎಂಟು ವರುಷಗಳ ಶಾಸನಬಾಹ್ಯ ಅಸ್ತಿತ್ವದ ತರುವಾಯ ನಾವು ಇಂದು ಈ ಅಧಿವೇಶನದಲ್ಲಿ ಮೊದಲಸಲ ಸೇರುತ್ತಿದ್ದೇವೆ. ಈಗ ಹೈದರಾಬಾದ ಸಂಸ್ಥಾನ ಕಾಂಗ್ರೆಸ್ಸಿಗೆ ಪದ್ಧತಿಯ ಪ್ರಕಾರ ಚುನಾಯಿತವಾದ ಪ್ರಜಾ ತಂತ್ರೀಯ ಸಂಸ್ಥೆಯ ಸ್ವರೂಪ ಬಂದಿದೆ. ೯ ವರುಷಗಳ ಹಿಂದೆ ಹಾಕಲಾಗಿದ್ದ ನಿರ್ಬಂಧಕನ್ನು ಹಿಂತೆಗೆದುಕೊಂಡುದು ಹೈದರಾಬಾದಿನಲ್ಲಿ ಸ್ವಾತಂತ್ರ್ಯದ ಆಂದೋಲನಕ್ಕಾದ ಮೊದಲನೆಯ ವಿಜಯ.”

“ದೇಶೀ ಸಂಸ್ಥಾನದ ಜನತೆಯಾದ ನಾವು ಭಾರತದ ರಾಷ್ಟ್ರೀಯ ಶಕ್ತಿಗಳಿಗೆ ಋಣಿಯಾಗಿದ್ದೇವೆ. ನಾವು ಸೆಟೆದು ನಿಂತು ಒಂದು ಪ್ರಜಾ ತಂತ್ರೀಯ ರಾಷ್ಟ್ರದ ನಾಗರಿಕರಂತೆ ಬಾಳುವ, ನಮ್ಮ ಭವಿತವ್ಯವನ್ನು ನಿರ್ಣಯಿಸುವ, ಮಹಾಧಿಕಾರವನ್ನು ಪ್ರಸ್ಥಾಪಿಸುವುದಕ್ಕೆ ಆ ಶಕ್ತಿಗಳು ಇಂದು ಪರಿಸ್ಥಿತಿಯನ್ನು ಒದಗಿಸಿಕೊಟ್ಟಿವೆ. ಭಾರತ ರಾಷ್ಟ್ರೀಯತೆಯು ನರೇಂದ್ರ ಮತ್ತು ಇತರ ಪ್ರತಿಗಾಮಿ ಶಕ್ತಿಗಳ ಸಾಮ್ರಾಜ್ಯ ಸೈನ್ಯದ ಬೆಂಬಲವಿದ್ದ ಬ್ರಿಟಿಶರ ಸಾಮ್ರಾಜ್ಯಶಾಹೀ ಕೋಟೆಯನ್ನು ನೆಲಸಮ ಮಾಡಿತು. ಸತ್ಯ ಅಹಿಂಸೆಗಳ ಪೂಜಕರಾದ ಮಹಾತ್ಮರ ಸ್ಫೂರ್ತಿಯಿಂದ, ಈ ಕಾಲದ ಮಹಾಬುದ್ಧಿಶಾಲಿಗಳ ಮಾರ್ಗದರ್ಶನದಿಂದ, ಭಾರತೀಯ ಜನತೆಯು ಜಗತ್ತಿನ ರಾಷ್ಟ್ರಗಳ ಕೂಟದಲ್ಲಿ ಭಾರತಕ್ಕೊಂದು ಗೌರವ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ಭಾರತದ ರಾಷ್ಟ್ರೀಯತೆಯು ಈ ವಿಜಯದಿಂದ ಸಂಸ್ಥಾನೀ ಜನತೆಯ ಸ್ವಾತಂತ್ರ್ಯ ಮಾರ್ಗದಲ್ಲಿ ಅಡ್ಡಗೋಡೆಯಾಗಿನಿಂತ ಸಾಮ್ರಾಜ್ಯಶಾಹಿಯು ಮಾಯವಾಗಿ ಜನತೆಯ ಅಧಿಪತ್ಯವು ಸ್ಥಾಪಿತವಾಗಿದೆ. ವಿದೇಶೀ ಬಲದ ಮೇಲೆನಿಂತ ಏಕತಂತ್ರೀಯ ಅಧಿಕಾರಿಗಳು ಇಂದು ತಮ್ಮ ಜನತೆಯ ಎದುರು ನಿಂತುದನ್ನು ಕಂಡು ಸಂಸ್ಥಾನೀ ಜನತೆಯಾದ ನಮಗೆ ಆನಂದವಾಗಿದೆ. ತಾವು ಬಾಳುವ ಮತ್ತು ತಮ್ಮ ಭವಿತವ್ಯವನ್ನು ರೂಪಗೊಳಿಸುವ ಹಕ್ಕನ್ನು ಪ್ರಸ್ಥಾಪಿಸುವದಕ್ಕೋಸುಗ ಸಂಸ್ಥಾನೀ ಜನತೆಯು ಅಖಂಡ ಹೋರಾಟವನ್ನು ಸಾಗಿಸಿದೆ. ಸಂಸ್ಥಾನೀಜನತೆಯ ಚಳವಳಿಯು ರಾಷ್ಟ್ರದ ಕಟ್ಟಡಕ್ಕೆ ಹೊಂದಿಕೆಯಾಗುವಂತೆ ಇರಬೇಕು. ಹೈದರಾಬಾದಿನಲ್ಲಿ ನಾವು ನಮ್ಮ ಚಳವಳಿಯನ್ನು ಅದಕ್ಕನುಗುಣವಾಗುವಂತೆ ರೂಪಿಸಬೇಕು.”

ಸಂಸ್ಥಾನಗಳ ಇಂದಿನ ಪರಿಸ್ಥಿತಿ

ಅನಂತರ ಸ್ವಾಮೀಜಿಯವರು ಬ್ರಿಟಿಶ ಮಂತ್ರಿಮಂಡಲದ ಯೋಜನೆ ಮತ್ತು ಅದರ ನಂತರ ಸಂಸ್ಥಾನಿಕರು ಕೈಕೊಂಡ ಕಾರ್ಯಕ್ರಮ-ಇವನ್ನು ವಿವರಿಸುತ್ತ, “ಫೆಬ್ರುವರಿ ೨೦ ನೆಯ ತಾರೀಖಿನ ದಿನ ಮುಖ್ಯ ಮಂತ್ರಿ, ಅಟ್ಲಿಯವರು ಮಾಡಿದ ಬ್ರಿಟಿಶ್ ಸತ್ತೆಯು, ಜೂನ ೪೮ ರ ತರುವಾಯ ಹಿಂದುಸ್ತಾನದಲ್ಲಿ ಉಳಿಯಲಾರದೆಂಬ ಘೋಷಣೆಯಿಂದಸಂಸ್ಥಾನಗಳಲ್ಲಿಯ ಸ್ವಾತಂತ್ರ್ಯದ ಚಳುವಳಿಗೆ ಬೆಂಬಲ ಬಂದಿದೆ. ಆದರೆ ನರೇಂದ್ರರ ನಡತೆಯು ಶೋಚನೀಯವಾಗಿದೆ. ತಿರುವಾಂಕೂರಿನ ದಿವಾನರು ಹಿಂದುಸ್ತಾನದಿಂದ ಬ್ರಿಟಿಶರು ಹೋದ ಮೇಲೆ ತಿರುವಾಂಕೂರಿನ ಸ್ವತಂತ್ರದರ್ಜೆಯ ಬಗ್ಗೆ ಒಂದು ಹೊಸ ತತ್ವವನ್ನೇ ಪ್ರತಿಪಾದಿಸ ತೊಡಗಿದ್ದಾರೆ. ಹೈದರಾಬಾದ ಸರಕಾರವಂತೂ ಇದಕ್ಕೂ ಮುಂದೆ ಹೋದಂತೆ ಕಂಡುಬರುತ್ತದೆ. ಹೈದರಾಬಾದು ಸ್ವತಂತ್ರ ಸರ್ವಾಧಿಪತ್ಯವುಳ್ಳ ರಾಜ್ಯವೆಂದು ಸಾರುವ ಸಿದ್ಧತೆ ನಡೆಯುತಿದೆಯೆಂದು ಕೇಳಲಾಗುತ್ತಿದೆ. ಕೆಲವು ನರೇಂದ್ರರು ಇನ್ನೂ ಹೊಯ್ದಾಡುತ್ತಿದ್ದಾರೆ. ಅವರಲ್ಲೂ ಎಷ್ಟೋ ನರೇಂದ್ರರು ಬೆಳಕು ಕಂಡುಕೊಂಡಿದ್ದಾರೆ. ತಿರುವಾಂಕೂರು, ಕಾಶ್ಮೀರ, ಮೈಸೂರು, ಹೈದರಾಬಾದು ಸಂಸ್ಥಾನಗಳು ಯಾವ ನಿರ್ಣಯಕ್ಕೂ ಬಂದಿಲ್ಲ. ಮುಂದಿನ ಕೆಲವು ವಾರಗಳಲ್ಲಿ ಎಲ್ಲ ಸ್ಪಷ್ಟವಾಗುತ್ತದೆ” ಎಂದರು.

“ಬ್ರಿಟಿಶ ಸತ್ತೆಯು ಭಾರತದಿಂದ ಹೊರಟು ಹೋದೊಡನೆಯೇ ಸಾರ್ವಭೌಮತ್ವವು ಇಲ್ಲದಂತಾಗುವುದೆಂದೂ, ಅದನ್ನು ಭಾವೀ ಭಾರತ ಸರಕಾರಕ್ಕೆ ಬದಲಾಯಿಸಲಾಗುವುದಿಲ್ಲನೆಂದೂ ಹೇಳಿದಾಕ್ಷಣಕ್ಕೇ ಸಂಸ್ಥಾನಗಳು ಸರ್ವಾಧಿಪತ್ಯವುಳ್ಳ ಸ್ವತಂತ್ರ ರಾಜ್ಯಗಳಾದವೆಂದು ಅರ್ಥ ಮಾಡಲಾಗುತ್ತದೆ. ಸಾರ್ವಭೌಮತ್ವ ಹಾಗು ಅಧಿಪತ್ಯ ಇವೆರಡೂ ಭಿನ್ನ ಕಲ್ಪನೆಗಳು. ಸಾರ್ವಭೌಮತ್ವವು ಒಬ್ಬರ ಮೇಲೆ ಮತ್ತೊಬ್ಬರ ಆಳಿಕೆಯನ್ನು ಸೂಚಿಸುತ್ತದೆ. ಬ್ರಿಟಿಶರ ಅಧೀನದಲ್ಲೇ ಇದ್ದ ಸಂಸ್ಥಾಗಳು ಎಂದೂ ಸರ್ವಾಧಿಪತ್ಯವುಳ್ಳ ರಾಜ್ಯಗಳಾಗಿಲ್ಲ. ಬ್ರಿಟಿಶರ ನಿರ್ಗಮನದಿಂದ ನರೇಂದ್ರರು ಸರ್ವಾಧಿಪತಿಗಳಾಗಲಾರರು; ಆಗುವದು ಸಂಸ್ಥಾನಗಳ ಹತ್ತು ಕೋಟಿ ಜನತೆಯು. ನರೇಂದ್ರರು ಬಾಳಬೇಕಾಗಿದ್ದಕೆ ವೈಧಾನಿಕ ರಾಜರಾಗಿದ್ದುಕೊಂಡೇ ಜನತೆಯ ಅಧಿಪತ್ಯವನ್ನು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಸಂಸ್ಥಾನೀ ಜನತೆಯ ಮನಸ್ಸಿನಲ್ಲಿ ಬಹುವೇಗದಿಂದ ರೂಪಗೊಳ್ಳುತ್ತಿರುವ ಪ್ರಜಾತಂತ್ರೀಯ ಇಚ್ಛೆಗಳ ಪ್ರಚಂಡತರಂಗಗಳಿಂದ ಅವರು ಕೊಚ್ಚಿ ಹೋಗಬಹುದು.

ಸಂಸ್ಥಾನಗಳು ಭಾರತೀಯ ಒಕ್ಕೂಟದಲ್ಲಿ ಸೇರಬೇಕು

“ಕೆಲವು ನರೇಂದ್ರರಿಗೆ ಅಸಂಪರ್ಕ ಸ್ವತಂತ್ರತೆಯ ದೆವ್ವದೆನ್ನು ಹತ್ತಿದೆ. ನಾವು ಭಾರತೀಯ ಸಮಗ್ರತೆಯಲ್ಲಿಯೂ ಏಕತೆಯಲ್ಲಿಯೂ ವಿಶ್ವಾಸವುಳ್ಳವರಾಗಿದ್ದೇವೆ. ಅಖಿಲ ಭಾರತ ಸಂಸ್ಥಾನೀ ಪ್ರಜಾಪರಿಷತ್ತು [ಸಂಸ್ಥಾನಗಳು ಭಾರತ ಒಕ್ಕೂಟದ ಅವಿಭಾಜ್ಯ ಅಂಗಗಳಾಗಿರಬೇಕೆಂದು ಕೇಳಿಕೊಂಡಿದೆ. ಭಾರತ ಸ್ವಾತಂತ್ರ್ಯದೊಡನೆ ನಮ್ಮ ಹಗೆತನವಿದೆಯೆಂದರೆ, ತಮ್ಮ ಜನತೆಯೊಡನೇ ತಮ್ಮ ಹಗೆತನವಿದ್ದಂತಾಯಿತೆಂದು ನರೇಂದ್ರರು ಗಮನಿಸಬೇಕು. ಜನತೆಯು ಸಂಪೂರ್ಣವಾಗಿ ಇದನ್ನು ವಿರೋಧಿಸುತ್ತವೆ. ಇಲ್ಲಿಯ ಇತ್ತಿಹಾದುಲ್ ಮುಸ್ಲಿಮಿನ್ ಸಂಸ್ಥೆಯು ಹೈದರಾಬಾದು ಸ್ವತಂತ್ರವಾಯಿತೆಂದು ಘೋಷಣೆ ಮಾಡಬೇಕೆಂಬ ಬೇಡಿಕೆಯೊಡನೆ ವರ್ಹಾಡ ಪ್ರಾಂತ, ರಾಯಚೂರು, ಮಚ್ಛಲೀಪಟ್ಟಣ ಇವುಗಳ ಮೇಲೆಯೂ ತನ್ನ ಹಕ್ಕನ್ನು ಪ್ರತಿಪಾದಿಸಿದೆ. ಹೈದರಾಬಾದಿನ ಈ ಅಸಂಪರ್ಕ ಸ್ವಾತಂತ್ರ್ಯವು ಸಾಧ್ಯವಾದರೂ ಹೇಗೆ ಎಂಬುದೇ ತಿಳಿಯದಾಗಿವೆ. ಅಸಂಪರ್ಕ ಹೈದರಾಬಾದಿನ ಸಂರಕ್ಷಣೆ ಅಸಾಧ್ಯ. ಆರ್ಥಿಕ ದೃಷ್ಟಿಯಿಂದಲೂ ಅದು ಸ್ವತಂತ್ರ ನಿಲ್ಲಲಾರದು. ಹೈದರಾಬಾದಿನಲ್ಲಿ ಮುಸಲ್ಮಾನರ ಐತಿಹಾಸಿಕ ಹಾಗು ಪರಂಪರಾಗತ ಶ್ರೇಷ್ಠತ್ವ, ಹೈದರಾಬಾದು ಮುಸ್ಲಿಂ ರಾಜ್ಯವೆಂಬ ಕೂಗು—ಇವೇ ಸಂಸ್ಥಾನದಲ್ಲಿಯ ಲೋಕಶಾಹಿ ವಿರೋಧಕ ಶಕ್ತಿಗಳ ತಳಹದಿಯಾಗಿದೆ. ಕಾಶ್ಮೀರದಲ್ಲಿ ಜವಾಬ್ದಾರೀ ಸರಕಾರದ ಬೇಡಿಕೆಗೆ ಅಡ್ಡಿಯಿಲ್ಲ. ಅದನ್ನೇ ಹೈದರಾಬಾದಿನಲ್ಲಿ ಮಾಡಿದರೆ, ರಾಜರನ್ನು ಅವರ ಸ್ಥಾನದಿಂದ ಉರುಳಿಸುವ ಪ್ರಯತ್ನವೆಂದು ಹೇಳಲಾಗುತ್ತದೆ. ಇದೊಂದು ವಿಚಿತ್ರ ವಿಚಾರಸರಣಿ! ಹೈದರಾಬಾದ ಸರಕಾರವು ಜಾತೀಯ ಲಕ್ಷಣಗಳನ್ನು ಬಿಟ್ಟುಬಿಡಬೇಕು. ಹಾಗೆಮಾಡದಿದ್ದರೆ ಪಕ್ಕದಲ್ಲಿ ಸರಕಾರವು ಜಾತೀಯವಾಗಿದೆಯೆಂದು ಜನತೆಯು ಹೇಳಿದರೆ ಅದನ್ನು ಹಳಿಯಲಾಗದು.” ಎಂದು ಬಳಿಕ ಅಧ್ಯಕ್ಷರು ಈ ಕೆಳಗಿನ ಬೇಡಿಕೆಗಳನ್ನು ಕಾಂಗ್ರೆಸ್ಸಿನ ಪರವಾಗಿ ನಿಜಾಮರ ಮುಂದಿಡುವದಾಗಿ ಹೇಳಿದರು:—

೧ ಹೈದರಾಬಾದು ಸ್ವತಂತ್ರ ಭಾರತದ ಒಕ್ಕೂಟವನ್ನು ಸೇರುವದೆಂದು ಹೈದರಾಬಾದು ಸರಕಾರವು ಕೂಡಲೇ ಘೋಷಿಸಬೇಕು.

೨ ಈಗಿನ ಘಟನಾ ಸಮಿತಿಯಲ್ಲಿ ಭಾಗವಹಿಸಲು ಪ್ರಜಾಪ್ರತಿನಿಧಿಗಳನ್ನು ಕಳುಹಿಸಿ ಕೊಡಬೇಕು.

೩ ಪ್ರೌಢ ಮತದಾನ ಪದ್ಧತಿಯ ಪ್ರಕಾರ ಚುನಾಯಿತರಾದವರದೊಂದು ಘಟನಾ ಸಮಿತಿಯನ್ನು ಇಲ್ಲಿ ನಿರ್ಮಿಸಿ ನಿಜಾಮರ ಛತ್ರಚ್ಛಾಯೆಯಲ್ಲಿ ಹೊಣೆಗಾರ ಸರಕಾರದ ಘಟನೆಯನ್ನು ರಚಿಸುವಂತೆ ಅಪ್ಪಣೆ ಮಾಡಬೇಕು.

೪ ಈ ಮಧ್ಯೆ ಒಂದು ನಡುಗಾಲ ಸರಕಾರವನ್ನು ಸ್ಥಾಪಿಸಬೇಕು.

೫ ಸಂಪೂರ್ಣ ನಾಗರಿಕ ಹಕ್ಕುಗಳನ್ನು ಕೊಡಬೇಕು.

ಅನಂತರ ಸಂಸ್ಥಾನ ಕಾಂಗ್ರೆಸ್ಸಿನ ಘಟನೆಯು ಸ್ವೀಕೃತವಾಯಿತು. ರಾತ್ರಿಯಲ್ಲಿ ವಿಷಯನಿಯಾಮಕ ಸಭೆ ಕೂಡಿ ಘಟನೆಯ ಉಳಿದ ನಿಯಮಗಳನ್ನು ಚರ್ಚಿಸಿ ಅದನ್ನು ಪೂರ್ಣವಾಗಿ ಸ್ವೀಕರಿಸಿತು. ಆದಾದ ಮೇಲೆ ಸಂಸ್ಥಾನದಲ್ಲಿ ನಡೆವ ದಬ್ಬಾಳಿಕೆಯನ್ನೆದುರಿಸಲು ಜನತೆ ಸಿದ್ಧವಾಗಬೇಕೆಂಬ ಗೊತ್ತುವಳಿ ಪಾಸಾಯಿತು.

ಮರುದಿನ ಧ್ವಜಾರೋಹಣ ನಡೆದಾಗ ಅಧ್ಯಕ್ಷರು ಧ್ವಜದ ಸಂಕೇತ, ಪಾವಿತ್ರ್ಯ ಇತ್ಯಾದಿಗಳನ್ನು ವಿವರಿಸಿ “ಈಗ ಹೈದರಾಬಾದಿನ ಪ್ರಶ್ನೆ ಭಾರತದ ಪ್ರಶ್ನೆಯಾಗಿದೆ. ನನ್ನ ಜೀವ, ದೇಹ ಈ ಧ್ವಜದ ರಕ್ಷಣೆಗಾಗಿ ಅರ್ಪಣಮಾಡುವೆ” ಎಂದಾಗಿ ಹೇಳಿದರು. ಬಳಿಕ ವಿಷಯನಿಯಾಮಕ ಸಮಿತಿ ಶ್ರೀಮತಿ ಕಮಲಾದೇವಿ ಮೊದಲಾದವರಿಂದ ಪ್ರಾರಂಭವಾಗಿ ಸಂಸ್ಥಾನದ ಫ್ಯಾಸಿಸ್ಟ ಪದ್ಧತಿಯ ವಿರುದ್ಧ ಆತ್ಮರಕ್ಷಣೆ ಮಾಡಿಕೊಳ್ಳಲು ತಾವು ಸಿದ್ಧರಾಗಿರಬೇಕೆಂಬ ಠರಾವು ಪಾಸಾಯಿತು. ಜಮೀನುದಾರಿ ವಿನಾಶವಾಗಬೇಕೆಂಬ ಠರಾವೂ ಸ್ವೀಕೃತವಾಯಿತು. ಅನಂತರ ಶ್ರೀಮತಿ ಕಮಲಾದೇವಿಯವರು ಮಾತಿಗಿಂತ ಕಾರ್ಯ ಮುಖ್ಯವೆಂದೂ ಈಗಿನ ಪರಿಸ್ಥಿತಿಗೆ ಬ್ರಿಟಿಶರು ಪರಿಸ್ಥಾಧಿಕಾರ ಹೋಗುವದೆಂದು ಹೇಳಿ ಆದರೆ ಸಾರ್ವಭೌಮತ್ವ ಜನತೆಯದೆಂದು ಹೇಳದೆ ಬಿಟ್ಟಿದ್ದೇ ಕಾರಣವೆಂದೂ ಹೈದರಾಬಾದದ ಜನತೆ ಸ್ವಾತಂತ್ರ್ಯ ಪಡೆದಾಗಲೇ ಹಿಂದುಸ್ತಾನನಿಜವಾಗಿ ಸ್ವತಂತ್ರವೆನಿಸೀತೆಂದೂ ಹೇಳಿ ಸಭೆಯನ್ನು ಮುಕ್ತಾಯಗೊಳಿಸಿದರು.

ಹಿಂದುಸ್ತಾನ ವಿಭಜನೆ

ಕೆಲವು ಮುಖ್ಯ ಅಂಕೆಸಂಖ್ಯೆಗಳು

ಹಿಂದುಸ್ತಾನ

ವಿಸ್ತಾರ (ಚ. ಮೈಲು)	೬,೪೦,೬೫೧
ಒಟ್ಟು ಜನಸಂಖ್ಯೆ	೨೨,೬೯,೮೯೭೫೪
ಮುಸಲ್ಮಾನರು	೪,೦೦,೨೫,೨೨೧
ಇತರರು	೧೯,೬೯,೬೪,೫೪೨

ಪೂರ್ವ ಬಂಗಾಲ

ವಿಸ್ತಾರ (ಚ. ಮೈಲು)	೪೫,೫೨೪
ಒಟ್ಟು ಜನಸಂಖ್ಯೆ	೪,೦೭,೧೭,೭೨೬
ಮುಸಲ್ಮಾನರು	೨,೮೮,೯೯,೧೮೯
ಇತರರು	೧,೧೮,೧೮,೫೪೭

ಪಶ್ಚಿಮ ಪಾಕಿಸ್ತಾನ

ಪಶ್ಚಿಮ ಪಂಜಾಬ ಮತ್ತು ಸಿಂಧ

ವಿಸ್ತಾರ (ಚ. ಮೈಲು)	೧,೧೧,೯೧೧
ಒಟ್ಟು ಜನಸಂಖ್ಯೆ	೨,೧೪,೦೫,೯೦೮
ಮುಸಲ್ಮಾನರು	೧,೫೫,೭೧,೯೯೪
ಇತರರು	೫೮,೩೩,೯೧೪

ಜನಮತ ತೆಗೆದುಕೊಳ್ಳುವ ಪ್ರದೇಶಗಳು

೧ ಗಡಿನಾಡು

ವಿಸ್ತಾರ (ಚ. ಮೈಲು)	೦೪,೨೬೩
ಒಟ್ಟು ಜನಸಂಖ್ಯೆ	೩೦,೩೮,೦೬೭
ಮುಸಲ್ಮಾನರು	೨೭,೮೮,೮೧೭
ಇತರರು	೨,೪೯,೨೫೦

೨ ಸಿಲ್ಹೆಟ್

ವಿಸ್ತಾರ (ಚ. ಮೈಲು)	೫,೪೭೮
ಒಟ್ಟು ಜನಸಂಖ್ಯೆ	೩,೧೧,೬೬೦೨
ಮುಸಲ್ಮಾನರು	೧೮,೯೨,೧೧೭
ಇತರರು	೧೨,೨೪,೪೮೫

೩. ಬ್ರಿ. ಬಲುಚಿಸ್ತಾನ

ವಿಸ್ತಾರ (ಚ. ಮೈಲು)	೫೪,೪೫೬
ಒಟ್ಟು ಜನಸಂಖ್ಯೆ	೫,೦೧,೬೩೧
ಮುಸ್ಲಿಮರು	೪೩೮,೯೩೦
ಇತರರು	೬೨,೭೦೧

ಮುಸಲ್ಮಾನರು ಬಹುಸಂಖ್ಯಾಕರಾಗಿರುವ ಸಂಸ್ಥಾನಗಳು

ವಿಸ್ತಾರ (ಚ. ಮೈಲು)	೧,೮೫,೯೩೨
ಒಟ್ಟು ಜನಸಂಖ್ಯೆ	೬೬,೦೩,೧೯೬
ಮುಸಲ್ಮಾನರು	೪೯,೮೬,೦೪೯
ಇತರರು	೧೬,೧೭,೧೪೭

ಇತರರು ಬಹುಸಂಖ್ಯಾಕರಾಗಿರುವ ಸಂಸ್ಥಾನಗಳು

ವಿಸ್ತಾರ (ಚ. ಮೈಲು)	೫,೦೫,೩೧೨
ಒಟ್ಟು ಜನಸಂಖ್ಯೆ	೮,೪೪,೧೩,೭೦೫
ಮುಸಲ್ಮಾನರು	೭೫,೭೧, ೬೨೭
ಇತರರು	೭,೬೮,೪೨,೦೭೮

ಸುಮಾರು ಎರಡು ಕೋಟಿ ರೂಪಾಯಿ ವೆಚ್ಚಮಾಡಿ ಭದ್ರಾವತಿಯನ್ನು ಮತ್ತು ರಾಸಾಯನಿಕ ಗೊಬ್ಬರದ ಕಾರ್ಖಾನೆಯನ್ನು ಸ್ಥಾಪಿಸಲಾಗುವದೆಂದು ಮಂತ್ರಿಮಂಡಲ ಶ್ರೀ ಎಲ್ ಸಿದ್ದಯ್ಯನವರು ಶಿವಮೊಗ್ಗ ಜಿಲ್ಲಾ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಮಾತಾಡುತ್ತ ಹೇಳಿದರು.

ಚುಟುಕಗಳು

ಒಡೆಯ—ರೈತ

ಒಡೆಯನು ಹಿಡಿಯಲು ನೇಗಿಲನು
ಲಕ್ಷ್ಮಿಯು ಕಂಡು
ಸಂತಸಗೊಂಡು
ತೆರೆದಳು ರೈತನ ಬಾಗಿಲನು

ಲೂಟಿ

ನಾಡಿನಲೆಲ್ಲಾ
ಫಿರಂಗಿ ಲೂಟಿ
ನಾಡವರಿಗೆ ಬರಿ ಲಂಗೋಟಿ
ಗುಡಿಸಲಿನಲಿ ಅಡ
ಗಿದರವರಂಜಿ
ಸಿಗದಿದೆ ಹಸಿದೊಡಲಿಗೆ ಗಂಜಿ

ಬೆಪ್ಪ

ಮಗನ ಮೀಸೆಯ
ಬಿಗಿದ ಕಾಸೆಯ
ನೋಡಿ ಮುದಿಮುದಿಯಪ್ಪನು
ಅದನೊಮ್ಮೆಲೆ ಬೆಪ್ಪನು !

— ವಿ. ಜಿ. ಭಟ

† × †

ಸೇಡು

ಕಡು ಪೈಶಾಚಿಕ ವೃತ್ತಿ
ಅಡಿಗಡಿಗೂ ತಲೆಯೆತ್ತಿ
ಹದಗೆಡಿಸಲು ಬದುಕ
ಅದ ತವಿಸಲು ಲೋಕ
ಅರೆಯಿತು ಅವಿಚಲ ಕ್ರಾಂತಿಯ ಮದ್ದು
ಒಳಿತಿನ ರಕ್ಷಣೆಗದು ಸನ್ನದ್ಧ !

(೨)

ದೌರ್ಜನ್ಯವು ಖಲಪದದಹತಿಯಿಕ್ಕಿ
ಕಂಬನಿಯಲಿ ತೋಯ್ಸಿ
ನೆತ್ತರಿನಲಿ ಮೀಯ್ಸಿ;
ಮದ್ದನು ಮಚ್ಚೊಳಗಡೆ ಹತ್ತಿಕ್ಕಿ
ವಿಜಯಕೆ ದುಂದುಭಿ ಮೊಳಗಿಪುದು
ವಿಕಟ ವಿಲಾಸದಿ ಕುಣಿಯುವುದು

(೩)

ಒಳಗೇ ಕುದಿಯುವ ಭೀಕರ ಜ್ವಾಲೆ
(ದಲಿತರ ತಳಮಳದಲೆ ಬಿಸಿಸುಯ್ಲೆ)
ನೆತ್ತರು ಕಂಬನಿಗಳ ಸೀಯ್ಸಿ
ಹಾಯ್! ಉರಿದೆದ್ದಿತೆ ಮರುಕಳಿಸಿ ?
ಸೇಡಿನ ಕಿಡಿಕಿಡಿ ಸಿಡಿಯುತಲಿಹುದೇ ?
ಒಡನೆಯೆ ಪೊಡವಿಯೆ
ಪುಡಿಪುಡಿಯಹುದೇ ?

—ಬಿ. ಆರ್. ಆಲವಳ್ಳಿ

ಕರ್ಮವೀರ
ಹರಿಜನ ಪುರವಣಿ

ಪರಮಾತ್ಮನಾರು ? ಎಲ್ಲಿರುವನು ?

ಬ್ರಹ್ಮ [ಪರಮಾತ್ಮ] ಸಾಕ್ಷಾತ್ಕಾರಕ್ಕೆ ಬ್ರಹ್ಮಚರ್ಯವೆ ಸರಿಯಾದ ಮಾರ್ಗವೆಂದು ನಾನು ವಿವರಿಸಿದ್ದೇನೆ. ಪರಮಾತ್ಮ ಎಂದರೇನು ? ಅವನಾರು ? ಎಂಬ ಪ್ರಶ್ನೆ ಕೂಡಲೆ ಉದ್ಭವಿಸುತ್ತದೆ. ಮಾನವನಿಗೆ ಈ ಪ್ರಶ್ನೆಯ ಉತ್ತರ ಗೊತ್ತಿದ್ದರೆ ಅವನ ಸಾಕ್ಷಾತ್ಕಾರಕ್ಕೆ ಅವಶ್ಯವಾದ ಮಾರ್ಗವನ್ನು ಹುಡುಕಲು ಅವನು ಸಮರ್ಥನಾಗುವನು.

ಪರಮಾತ್ಮನೆಂದರೆ ಒಂದು ವ್ಯಕ್ತಿಯಲ್ಲ. ಕಾಲಕಾಲಕ್ಕೆ ಪರಮಾತ್ಮ ಮಾನವ ರೂಪವನ್ನು ಧರಿಸಿ ಅವತರಿಸುವನೆಂದು ಹೇಳುವುದು ಕೇವಲ ಅರ್ಧ ಸತ್ಯ. ಇಂಥ ಅವತಾರೀ ಪುರುಷರು ಪರಮಾತ್ಮ ಸದೃಶನೆಂದೇ ಇದು ಬೋಧಿಸುವುದು. ಪರಮಾತ್ಮ ಸರ್ವವ್ಯಾಪಿಯಾಗಿರುವುದರಿಂದ ಮಾನವ ಹೃನ್ಮಂದಿರದಲ್ಲಿ ಅವನು ವಾಸಿಸುವನು; ಆದುದರಿಂದ ಪ್ರತಿಯೊಬ್ಬ ಮಾನವ ಜೀವಿಯು ಅವನ ಅವತಾರವೆಂದು ಹೇಳಬೇಕಾಗುವದು. ಆದರೆ ಇದರಿಂದ ಏನೂ ಗೊತ್ತಾಗುವುದಿಲ್ಲ. ರಾಮ ಕೃಷ್ಣಾದಿಗಳಲ್ಲಿ ಪರಮಾತ್ಮನ ಗುಣಗಳನ್ನು ನಾವು ಕಾಣುವುದರಿಂದ ಅವು ಅವನ ಅವತಾರಗಳೆಂದು ನಾವು ಕರೆಯುತ್ತೇವೆ. ನಿಜವಾಗಿ ಹೇಳಬೇಕಾದರೆ ಅವೆಲ್ಲ ಮಾನವನ ಕಲ್ಪನಾ ಸೃಷ್ಟಿಯೆ. ಅವರು ನಿಜವಾಗಿ ಬಾಳಿದರೊ ಇಲ್ಲವೆ ಅಸ್ತಿತ್ವದಲ್ಲಿಯೆ ಇರಲಿಲ್ಲವೊ ಎಂಬದು ಮಾನವರಲ್ಲಿ ಆ ಅವತಾರಗಳ ಬಗ್ಗೆ ಇದ್ದ ಕಲ್ಪನೆಗೆ ಬಾಧಕತರಲಾರದು. ಇತಿಹಾಸದ ರಾಮ ಕೃಷ್ಣರಿಂದ ಅನೇಕ ಸಲ ಸಂಶಯಕ್ಕವಕಾಶ ವುಂಟಾಗುವದು. ಆದರೆ ಅದನ್ನು ಎಲ್ಲ ಬಗೆಯ ತರ್ಕಸರಣಿಯಿಂದ ಹೊಡೆದು ಹಾಕಲಿಕ್ಕೆ ಬೇಕು.

ಪರಮಾತ್ಮ ಒಂದು ಶಕ್ತಿಯೆಂಬುದು ಅಬಾಧಿತ ಸತ್ಯ. ಜೀವನದ ಸಾರಸರ್ವಸ್ವನವನು. ವಿಶುದ್ಧ ನಿರ್ದುಷ್ಟ ಚೇತನನು, ಅನಾದಿಯು. ಹೀಗಿದ್ದರೂ ಎಲ್ಲರೂ ಆ ಸರ್ವವ್ಯಾಪಿ ಜೀವಂತ ಶಕ್ತಿಯ ಲಾಭ ಪಡೆಯಲು ಇಲ್ಲವೆ ಆಶ್ರಯ ಹೊಂದಲು ಸಮರ್ಥರಾಗಲಾರರು. ವಿಚಿತ್ರವಲ್ಲವೇ ಇದು ? ವಿದ್ಯುತ್ತು ಒಳ್ಳೆ ಪ್ರಚಂಡ ಶಕ್ತಿ. ಎಲ್ಲರೂ ಅದರ ಪ್ರಯೋಜನ ಪಡೆಯಲಾರರು. ಅದನ್ನು ಉತ್ಪಾದಿಸುವ ಬಗ್ಗೆ ಕೆಲವು ವಿಧಾನಗಳಿವೆ. ಅದೊಂದು ನಿರ್ಜೀವ ಶಕ್ತಿ. ಆ ವಿದ್ಯುಚ್ಛಕ್ತಿಯ ವಿಧಿವಿಧಾನಗಳು ಗೊತ್ತಾದರೆ, ಅದನ್ನು ಉಪಯೋಗಿಸಲು ಬಹಳ ಪರಿಶ್ರಮ ಪಟ್ಟರೆ ಮಾತ್ರ ಮಾನವನು ಅದರ ಪ್ರಯೋಜನ ಪಡೆಯಬಲ್ಲನು.

ಪರಮಾತ್ಮನೆಂದು ನಾವು ಕರೆಯುವ ಜೀವಂತ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಅವನ ಬಗ್ಗೆ ಜ್ಞಾನ ಮಾಡಿಕೊಂಡು ಅವನು ಹಾಕಿಕೊಟ್ಟ ಮಾರ್ಗದಂತೆ ನಡೆದರೆ ಮಾತ್ರ ಸಾಧ್ಯ. ಅವನ ಆ ವಿಧಿಗಳನ್ನು ತಿಳಿದುಕೊಳ್ಳಬೇಕಾದರೆ ಬಹಳ ಪರಿಶ್ರಮಪಡಬೇಕಾಗುವದೆಂಬುದು ಸ್ಪಷ್ಟವೆ ಇದೆ. ಬ್ರಹ್ಮಚರ್ಯವೆಂಬ ಒಂದೇ ಹೆಸರಿನಿಂದ ಅದನ್ನು ಕರೆಯಬಹುದು. ರಾಮನಾಮೋಚ್ಚಾರವೆ ಆ ಬ್ರಹ್ಮಚರ್ಯ ಪಾಲನೆಗೆ ರಾಜಮಾರ್ಗ. ಅನುಭವದಿಂದಲೆ ನಾನು ಹೀಗೆ ಹೇಳಬಲ್ಲೆ. ಭಕ್ತರು ಮತ್ತು ತುಳಸೀದಾಸರಂಥ ಸಾಧುಸತ್ಪುರುಷರು ಈ ರಾಜಮಾರ್ಗವನ್ನು ನಮಗೆ ತೋರಿಸಿಕೊಟ್ಟಿರುವರು. ನನ್ನ ಸ್ವಂತ ಅನುಭವಕ್ಕೆ ಅನವಶ್ಯಕ ಮಹತ್ವವನ್ನು ಯಾರೂ ಕೊಡುವ ಅವಶ್ಯಕತೆಯಿಲ್ಲ. ಉರುಳಿ ಕಾಂಚನದಲ್ಲಿ ಈ ರಾಮನಾಮದ ಮಹತ್ವ ನನಗೆ ಹೆಚ್ಚಾಗಿ ಹೊಳೆಯಿತೆಂದು ಹೇಳಿದರೆ ತಪ್ಪಾಗಲಾರದು. ನಮ್ಮೆಲ್ಲರ ಕಷ್ಟ ನಿವಾರಣೆಗೆ ರಾಮನಾಮವೆ ರಾಮಬಾಣ ಉಪಾಯವೆಂದು ಅಲ್ಲಿಯೆ ನನಗೆ ಮನವರಿಕೆಯಾಯಿತು. ಆ ರಾಮಬಾಣದ ಪೂರ್ಣ ಉಪಯೋಗಮಾಡುವವರಿಗೆ ಯತ್ಕಿಂಚಿತ್ ಹೊರಗಿನ ಸಹಾಯದಿಂದ ಉದ್ದಿಷ್ಟ ಸಾಧ್ಯವಾಗುವದೆಂದು ಕಂಡುಬರದಿರಲಾರದು. ರಾಮನಾಮವನ್ನು ನಮ್ಮ ಹೃನ್ಮಂದಿರದಲ್ಲಿ ಸ್ಥಾಪಿಸಿಕೊಂಡದ್ದಾದರೆ ಪರಂಪರಾಗತ ಬ್ರಹ್ಮಚರ್ಯ ಪಾಲನ ನಿಯಮವು ಅದರ ಮುಂದೆ ನಿಃಸತ್ವವೆನಿಸುವದು. ಈ ದೃಷ್ಟಿಯಿಂದ ವಿಚಾರಮಾಡುತ್ತ ಹೋದಂತೆ ನನಗೆ ಇದರ ಮನವರಿಕೆಯಾಗಹತ್ತಿದೆ. ಆ ಬಳಿಕವೆ ನಮಗೆ ಆಶಕ್ತಿಯ ಅಲೌಕಿಕ ಪ್ರಭಾವ ಮತ್ತು ಸಾಮರ್ಥ್ಯ ಗೊತ್ತಾಗುವದು. ಈ ಅನುಪಮ ಮತ್ತು ಸರ್ವತ್ರ ವಿಜಯಪ್ರದವಾದ ಅಸ್ತ್ರವನ್ನು ದಕ್ಷತೆಯಿಂದ ಪರಿಶೋಧಿಸುವಾಗ ಸಾಧ್ಯಸಾಧನಗಳಲ್ಲಿಯ ಭೇದವನ್ನು ಕಾಣುವದೆ ಕಠಿನವೆನಿಸುವದು. ಈ ರೀತಿಯಾಗಿ ಹನ್ನೊಂದು ವ್ರತಗಳು ಪರಮಾತ್ಮನ ಸಾಕ್ಷಾತ್ಕಾರಕ್ಕೆ ನಮ್ಮನ್ನು ಸಮರ್ಥರನ್ನಾಗಿಮಾಡಲು ಸಾಧನಗಳಾಗಿವೆ ಈ ಹನ್ನೊಂದು ವ್ರತಗಳಲ್ಲಿ ಸತ್ಯವೇ ಸಾಧನ. ರಾಮನೆಂದು ಕರೆಯಲ್ಪಡುವ ಪರಮಾತ್ಮನೇ ಸಾಧ್ಯ. ರಾಮನಾಮವೇ ಸಾಧನವಾಗಿದ್ದು ಸತ್ಯವೇ ಸಾಧ್ಯವೆಂದು ಹೇಳುವುದೂ ಅಷ್ಟೇ ಸತ್ಯಪೂರ್ಣವಾಗಿದೆ.

ಆದರೆ ಮೂಲ ಮಾತಿಗೆ ಹೊರಳುವಾ. ವಿಷಯವಾಸನೆಯನ್ನು ಸಂಪೂರ್ಣವಾಗಿ ನಿಯಂತ್ರಿಸುವುದೇ ಬ್ರಹ್ಮಚರ್ಯವೆಂದು ಪರಂಪರಾಗತವಾಗಿ ಭಾವಿಸುತ್ತ ಬಂದದ್ದಾಗಿದೆ. ಆ ಸಾಧ್ಯವನ್ನು ಮುಟ್ಟಬೇಕಾದರೆ ರಾಮನಾಮವೆ ಶ್ರೇಷ್ಠವಾದ ಸಾಧನ. ರಾಮನಾಮದ ಮಹತ್ವವನ್ನು ಮತ್ತು ಸಾಮರ್ಥ್ಯವನ್ನು ಸಿದ್ಧಪಡಿಸಲು ನಿಃಸಂದಿಗ್ಧ ನಿಯಮಗಳಿವೆ. ಕೆಲ ತಿಂಗಳಗಳ ಹಿಂದೆ ನಾನು ಈ ನಿಯಮಗಳನ್ನು ಕೆಲಮಟ್ಟಿಗೆ ವಿವರಿಸಿದ್ದೇನೆ. ಆದರೆ ಅವುಗಳನ್ನು ಮತ್ತೆ ವಿವರಿಸುವುದು ಅವಶ್ಯವಾಗಿದೆ.

ಹೊಸದಿಲ್ಲಿ ಮೋ. ಕ. ಗಾಂಧಿ

೧೪-೬-೧೯೪೭

(ಗುಜರಾಥಿಯಿಂದ ಅನುವಾದಿತ)

ಸಂಸ್ಥಾನಗಳು ಎತ್ತಸಾಗಿವೆ?

(ಜೂನ ೧೩ ಮತ್ತು ೧೪ ಕ್ಕೆ ಗಾಂಧೀಜಿ ಪ್ರಾರ್ಥನೋತ್ತರ ಮಾಡಿದ ಭಾಷಣಗಳ ಸಾರವನ್ನು ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಅವರು ಮಾಡಿದ ಭಾಷಣದ ಮುಖ್ಯಾಂಶವನ್ನು ಹಾಗು ಸಂಸ್ಥಾನಗಳ ಕರ್ತವ್ಯದ ಬಗ್ಗೆ ಅವರು ಪಟ್ಟ ಅಭಿಪ್ರಾಯವನ್ನು ಕೆಳಗೆ ಕೊಡಲಾಗಿದೆ.

ಸುಶಿಲಾ ನಯ್ಯರ)

ತ್ರಾವಣಕೋರ ಸಂಸ್ಥಾನ ಕಾಂಗ್ರೆಸ್ಸಿನವರು ಯಾವದೇ ಸಭೆಗಳನ್ನು ಕೂಡ್ರಿಸಬಾರದೆಂದು ಅಲ್ಲಿನ ವಿದ್ವಾಂಸರೂ ಸಮರ್ಥ ಅಡಳಿತದಾರರೂ ಲೇಖಕರೂ ಆಗಿರುವ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರು ವಿಧಿಸಿರುವರೆಂದೂ ಅಗಷ್ಟ ೧೫ ಕ್ಕೆ ಬ್ರಿಟಿಶ್‌ರು ಹಿಂದೀಯರಿಗೆ ಅಧಿಕಾರವನ್ನೊಪ್ಪಿಸಿ ಕೊಟ್ಟ ದಿನ ತ್ರಾವಣಕೋರ ಸಂಸ್ಥಾನ ಸ್ವಾತಂತ್ರ್ಯವನ್ನು ಸಾರುವದೆಂದೂ— ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಸುದ್ದಿಯನ್ನು ನಂಬುವದಾದರೆ— ಕೇಳಿದ ವಿಷಾದಮಯ ಸುದ್ದಿಯನ್ನು ಗಾಂಧೀಜಿ ೧೩ ನೇ ತಾರೀಕಿನ ದಿನ ಉಲ್ಲೇಖಿಸಿದರು. ತ್ರಾವಣಕೋರದ ನಿವಾಸಿಗಳಲ್ಲಿ ಯಾರಾದರೂ ಇದಕ್ಕೆ ಆಕ್ಷೇಪಿಸಿದ್ದಾದರೆ ಅವರು ಸಂಸ್ಥಾನವನ್ನು ಬಿಟ್ಟು ಹೋಗಬಹುದಂತೆ. ತ್ರಾವಣಕೋರದ ನಿವಾಸಿಗಳು ತಮ್ಮ ಜನ್ಮಸ್ಥಳವನ್ನು ಬಿಡಬೇಕೆಂದು ಹೇಗೆ ಕೇಳಲಾಗುತ್ತದೆಂಬುದನ್ನು ತಿಳಿದುಕೊಳ್ಳಲು ಗಾಂಧೀಜಿಯ ಆಸೆ ಬ್ರಿಟಿಶ್ ಅರಸರು ಹಿಂದುಸ್ತಾನದ ಸಮ್ರಾಟರಾಗಿರುವವರೆಗೆ ತ್ರಾವಣಕೋರ ಹಿಂದುಸ್ತಾನದಲ್ಲಿ ಉಳಿಯುವಲ್ಲಿ ಸರ್ ಸಿ. ಪಿ ಯವರು ಸಂತುಷ್ಟರಾಗಿದ್ದರು, ಆದರೆ ಆ ಅಧಿಕಾರ ಹಿಂದೀಯರ ಕೈಗೆ ಹೋದಕೂಡಲೆ ತ್ರಾವಣಕೋರ ಹಿಂದೀ ಒಕ್ಕೂಟವನ್ನು ಸೇರಬಾರದೆಂದು ಅವರ ಅಭಿಪ್ರಾಯವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದೊಳ್ಳೆ ವಿಚಿತ್ರ ಪರಿಸ್ಥಿತಿ! ಯಾವದೇ ಸಂಸ್ಥಾನಕ್ಕೆ ಅತ್ಯಂತ ಅಪಮಾನಕರವಾದುದು. ಈ ಬಗೆಯ ವರ್ತನೆಗೆ ಬ್ರಿಟಿಶರು ಪಾಲುಗಾರರಾಗುವದಾದರೆ ಅದು ಅವರಿಗೆ ಶಾಶ್ವತವಾದ ನಾಚಿಕೆಗೇಡಾದ ಮಾತು. ಅವರು ಹಾಗ ಮಾಡಲಿಕ್ಕಿಲ್ಲೆಂದು ಗಾಂಧೀಜಿ ಬಲವಾಗಿ ಆಶಿಸಿದರು. ತ್ರಾವಣಕೋರಿಗೆ ಅನ್ವಯಿಸುವ ಮಾತುಗಳೆ ಹೈದರಾಬಾದಿಗೂ ಅನ್ವಯಿಸುವವು. ನಿಜಾಮರ ಫರ್ಮಾನವು—ಪತ್ರಿಕೆಗಳನ್ನು ನಂಬುವದಾದರೆ ಮಾತ್ರ—ಸಂಪೂರ್ಣವಾಗಿ ಅನ್ಯಾಯದ್ದಾಗಿರುವದು. ಹೈದ್ರಾಬಾದದಲ್ಲಿಯ ಜನಸಂಖ್ಯೆಯಲ್ಲಿ ನೂರಕ್ಕೆ ೯೦ ರಷ್ಟು ಜನ ಮುಸಲ್ಮಾನೇತರರಿರುವರು. ಈ ಸಂಸ್ಥಾನ— ಉಳಿದ ಎಲ್ಲ ಸಂಸ್ಥಾನಗಳಂತೆ— ನಿಶ್ಚಯವಾಗಿ ಅಲ್ಲಿನ ಜನತೆಯ ಒಡೆತನಕ್ಕೆ ಸೇರಿದ್ದು. ಜನತೆಯ ಧರ್ಮದರ್ಶಿಗಳು ಮತ್ತು ಸೇವಕರಾದುದಾದರೆ ಮಾತ್ರ ಅರಸರಿಗೆ ಅಲ್ಲಿರಲು ಹಕ್ಕುಂಟು. ಕಾಲಮಾನ ಪರಿಸ್ಥಿತಿ ಈಗ ಬದಲಾಗಿದೆ, ನರೇಂದ್ರರು ಇದಕ್ಕನುಸಾರವಾಗಿ ವರ್ತಿಸದಿದ್ದರೆ ಅವರ ಅಸ್ತಿತ್ವಕ್ಕೇ ಆಳಿಗಾಲ. ಪ್ರಾರಂಭದಿಂದಲೂ ಕಾಂಗ್ರೆಸ್ಸು ಸಂಸ್ಥಾನಿಕರ ನಿಜವಾದ ಮಿತ್ರ. ಗಾಂಧೀಜಿ ಹಿಂದುಸ್ತಾನದ ಮುತ್ಸದ್ದಿ (ದಾದಾಭಾಯಿ ನವರೋಜಿ) ನ ಕಾಲದಲ್ಲಿನ ಮೈಸೂರಿನ ಉದಾಹರಣೆಯನ್ನು ಉಲ್ಲೇಖಿಸಿದರು. ಕಾಶ್ಮೀರ, ಬಡೋದೆ ಮತ್ತು ಉಳಿದ ಸಂಸ್ಥಾನಗಳಲ್ಲಿಯೂ ಕಾಂಗ್ರೆಸ್ಸು ಸೇವೆ ಸಲ್ಲಿಸಿದೆ. ಸಂಸ್ಥಾನಿಕರನ್ನು ನಿರ್ಮೂಲಗೊಳಿಸಬೇಕೆಂದು ಕಾಂಗ್ರೆಸ್ಸಿನ ಮನೀಷೆಯಿಲ್ಲ, ಆದರೆ ಸಂಸ್ಥಾನ ಪ್ರಜೆಗಳ ಪ್ರಾತಿನಿಧಿಕವಾದ ಈ ಮಹಾಸಂಸ್ಥೆ ನರೇಂದ್ರರ ಪ್ರಾತಿನಿಧ್ಯವನ್ನೂ ಪಡೆಯಬಯಸುತಿರುವಾಗ ಸಂಸ್ಥಾನಿಕರು ಅದನ್ನೆಂದಿಗೂ ಕಡೆಗಣಿಸಲಾರರು. ತಮ್ಮಮಟ್ಟಿಗೆ ಯಾವಾಗಲೂ ಸಂಸ್ಥಾನಿಕರು ಮಿತ್ರರೇ ಆಗಿರುವದಾಗಿಯೂ ಗಾಂಧೀಜಿ ಹೇಳಿದರು. ಇಷ್ಟೇ ಅಲ್ಲದೆ ಈ ಜಗತ್ತಿನಲ್ಲಿರುವವರೆಲ್ಲ ಗೆಳೆಯರೆಂದು ಹೇಳಿದರು. ನರೇಂದ್ರರ ಮಿತ್ರತ್ವದಿಂದ, ಬಡವರ ದೀನದರಿದ್ರರ ವಿಶೇಷತಃ ಭಂಗಿಗಳ- ಅಂಥವರಲ್ಲಿ ತಾವೊಬ್ಬರು—ಸಮೀಪಕ್ಕೆ ಅವರನ್ನು ತರಬೇಕೆಂಬುದು ತಮ್ಮ ಬಯಕೆ ಸಂಸ್ಥಾನಿಕರೆಲ್ಲ ಘಟನಾ ಸಮಿತಿಯಲ್ಲಿ ಸೇರಬೇಕೆಂದು ಒತ್ತಾಯಪೂರ್ವಕವಾಗಿ ಬಿನ್ನವಿಸಿಕೊಳ್ಳುವದಾಗಿ ಗಾಂಧೀಜಿ ಹೇಳಿದರು; ಯಾವ ಸಂಸ್ಥಾನವಾದರೂ ಪರಿವೆ ಇಲ್ಲ. ಹಿಂದು ಮುಸಲ್ಮಾನರ ಕಲಹದ ನಿಮಿತ್ತ ಹಿಂದುಸ್ತಾನದ ವಿಭಜನೆಯೂ ಆಗುತಿದೆ! ದುಃಖದಾಯಕ ಸಂಗತಿ !! ಸಂಸ್ಥಾನಿಕರೂ ಮತ್ತಷ್ಟು ವಿಭಾಗಗಳನ್ನು ಮಾಡಬಾರದು. ನರೇಂದ್ರರಿಗಷ್ಟೇ ಅಲ್ಲ ಲಾರ್ಡ ಮೌಂಟ ಬ್ಯಾಟನ್‌ರಿಗೂ ಪರಮಾತ್ಮ ಅವಶ್ಯಕ ಸುಬುದ್ಧಿಯನ್ನು ದಯಪಾಲಿಸುವನೆಂದು ಆಶಿಸಲಾಗಿದೆ. ಬ್ರಿಟನ್‌ದ ಕೊನೆಯ ವಾಯಿಸರಾಯರಾದ ಅವರು ಹಿಂದುಸ್ತಾನದಲ್ಲಿ ಅನವಶ್ಯಕ ತಿಕ್ಕಾಟವನ್ನುಂಟುಮಾಡಿ ಹೋಗಬಾರದು. ಹಿಂದೀ ಒಕ್ಕೂಟದ ಘಟನಾ ಸಮಿತಿಯಲ್ಲಿ ಸೇರಲು ತ್ರಾವಣಕೋರ ಸಿದ್ಧವಿದೆ. ಆದರೆ ಎರಡು ಸ್ವತಂತ್ರ ಹಿಂದುಸ್ತಾನಗಳು ಆಗುವದಾದರೆ ಹಿಂದೆಂದೂ ಪರಾಜಯ ಹೊಂದದಿದ್ದ ತ್ರಾವಣಕೋರ ಸ್ವತಂತ್ರವಾಗಿಯೇ ಉಳಿಯುವದು. ಅದೇ ಕಾಲಕ್ಕೆ ಅದು ಹಿಂದುಸ್ತಾನದ ಇತರ ಪ್ರದೇಶಗಳೊಡನೆ ನಿಕಟ ಸಹಕಾರದಿಂದ ಇರುವದು. ಎಲ್ಲರಿಗೂ ಸಾಮಾನ್ಯವಾದ ವಿಷಯಗಳಲ್ಲಿ ಅವಶ್ಯಕ ಕರಾರು ಮತ್ತು ಒಡಂಬಡಿಕೆಯನ್ನು ಮಾಡಿಕೊಳ್ಳುವದು ಎಂದು ಮುಂತಾಗಿ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರಿಂದ ೧೪ನೇ ತಾರೀಕಿಗೆ ಗಾಂಧೀಜಿಯವರಿಗೆ ತಂತಿಯೊಂದು ಬಂದಿತು. ತ್ರಾವಣಕೋರದ ಬಹುಸಂಖ್ಯಾಕ ಪ್ರಜೆಗಳು ಸ್ವತಂತ್ರ ತ್ರಾವಣಕೋರಕ್ಕೆ ಅನುಕೂಲರಿರುವರೆಂದೂ ದಿವಾಣರು ಅಭಿಪ್ರಾಯ ಪಟ್ಟಿದ್ದರು. ಈ ತಂತಿಯನ್ನುಲ್ಲೇಖಿಸುತ್ತ ಗಾಂಧೀಜಿ ವಿಷಾದವನ್ನು ಪ್ರದರ್ಶಿಸಿದರು. ಮುಖ್ಯ ವಿಷಯದಲ್ಲಿಯೆ ಅವರು ಜಾಣತನ ತೋರದಿದ್ದುದಕ್ಕಾಗಿ ಅಸಮಾಧಾನಪಟ್ಟರು. ಈ ತಂತಿಯಲ್ಲಿ ಗಂಭೀರವಾದ ಮುದ್ದೆ ಬಿಟ್ಟದ್ದನ್ನು ತೋರಿಸದೆ ಇರಲಾಗದೆಂದು ಹೇಳಿದರು. ಸಂಸ್ಥಾನ ಪ್ರಜಾ ಕಾಂಗ್ರೆಸ್ಸಿನ ಮೇಲೆ ನಿರ್ಬಂಧವಿದೆಯೇ ? ಇದ್ದರೆ ಏಕೆ ಇದೆ ?

ಹಿಂದುಸ್ತಾನದ ವಿಭಜನೆಯಾಗಿರದಿದ್ದರೆ ಹಿಂದಿ ಒಕ್ಕೂಟದಲ್ಲಿ ತ್ರಾವಣಕೋರ ಸಂಸ್ಥಾನ ಸೇರುವ

—೧೦ನೇ ಪುಟಕ್ಕೆ

ಹಿಂದೀ ಒಕ್ಕೂಟ ಎಂತು ವರ್ತಿಸತಕ್ಕದ್ದು ?

(೧೩-೬-೪೭ ನೆಯ ದಿನ ಪ್ರಾರ್ಥನೋತ್ತರ ಸಭೆಯಲ್ಲಿಯ ಗಾಂಧೀಜಿಯ ಭಾಷಣ...... ಸುಶಿಲಾ ನಯ್ಯರ)

“ಹಿಂದುಸ್ತಾನದ ನಕ್ಷೆಯಲ್ಲಿ ಅದಲು ಬದಲೆಂದರೆ ಎರಡು ರಾಷ್ಟ್ರಗಳಾದಂತಾಯಿತೆ? ವಿಭಜನೆಗೆ ಒಪ್ಪಿಗೆ ಕೊಟ್ಟದ್ದರಿಂದ ಐಕ್ಯವು ಕೆಲಮಟ್ಟಿಗೆ ಕಠಿನವಾಯಿತೆಂಬದನ್ನು ನಾನು ಒಪ್ಪುತ್ತೇನೆ. ಆದರೆ ಹಿಂದುಸ್ತಾನದಲ್ಲಿಯ ಮುಸಲ್ಮಾನರು ಉಳಿದವರಿಂದ ಭಿನ್ನ ರಾಷ್ಟ್ರದವರೆಂದು ತಿಳಿದುಕೊಳ್ಳುವರೆಂದು ಕಲ್ಪಿಸಿದರೂ ಮುಸಲ್ಮಾನೇತರರು ಅದಕ್ಕೊಪ್ಪದಿದ್ದರೆ ಅವರೆಂದಿಗೂ ಹಾಗೆ ಆಗಲಾರರು. ಮುಸಲ್ಮಾನ ಬಹುಸಂಖ್ಯಾಕ ಪ್ರದೇಶದವರು ಪಾಕಿಸ್ತಾನದವರೆಂದು ತಮ್ಮನ್ನು ಕರೆದು ಕೊಳ್ಳಬಹುದು. ಆದರೆ ಉಳಿದ ಅಂದರೆ ವಿಶಾಲತಮ ಹಿಂದುಸ್ತಾನದಲ್ಲಿಯ ಜನರು ತಾವು ಹಿಂದುಸ್ತಾನದವರೆಂದು ಕರೆದುಕೊಳ್ಳುವ ಅವಶ್ಯಕತೆಯಿಲ್ಲ. ಪಾಕಿಸ್ತಾನಕ್ಕೆ ಭಿನ್ನವಾದ ರಾಷ್ಟ್ರವೆಂದರೆ ಹಿಂದುಗಳ ವಾಸಸ್ಥಾನವೆಂದರ್ಥವಾಗುವದು. ಹಿಂದುಗಳು ಹಾಗೆ ಭಾವಿಸುವರೊ? ಪಾರ್ಸಿಗಳು ಕ್ರಿಶ್ಚನರು ಮತ್ತು ಹಿಂದುಸ್ತಾನದಲ್ಲಿ ಹುಟ್ಟಿದ ಯಹೂದ್ಯರು, ಬಿಳಿತೊಗಲು ಇಲ್ಲದ ಅಂಗ್ಲೋ ಇಂಡಿಯನ್‌ರು ಇವರೆಲ್ಲರಿಗೆ ಹಿಂದುಸ್ತಾನದ ಹೊರತು ಬೇರೆ ನಿವಾಸಸ್ಥಾನವಿದೆಯೆ? ನನ್ನದ ಮಟ್ಟಿಗೆ ನಾನು ಮುಸಲ್ಮಾನರನ್ನು ಬಿಟ್ಟುಗೊಡುವೆ. ಆದುದರಿಂದಲೆ ಪಂಡಿತಜಿಯವರು ಪಾಕಿಸ್ತಾನೇತರ ಪ್ರದೇಶವನ್ನು ಹಿಂದುಸ್ತಾನವೆಂದು ಕರೆಯಲು ಒಪ್ಪುತಿಲಿಕ್ಕಿಲ್ಲೆಂದು ನನ್ನ ತಿಳಿವಳಿಕೆ. ಕೆಲ ಮುಸಲ್ಮಾನ ಬಹುಸಂಖ್ಯಾಕ ಪ್ರದೇಶಗಳಿಂದ ಹೊರತಾದ ಹಿಂದೀ ಪ್ರಜಾರಾಜ್ಯದ ಒಕ್ಕೂಟವೆಂಬ ಗೌರವಯುಕ್ತ ಹೆಸರಿನಿಂದ ಕರೆಯುವರೆಂದು ನನ್ನ ಭಾವನೆ. ಗೌರವದ ಹೆಸರನ್ನಿಟ್ಟುಕೊಂಡಾಕ್ಷಣ ಆ ಜನರು ಶ್ರೇಷ್ಠರಾಗಲಾರರೆಂಬುದನ್ನು ಇತಿಹಾಸ ತೋರಿಸಿಕೊಟ್ಟಿದೆ. ಜನರಾಗಲಿ ಜನಸಮೂಹವಾಗಲಿ ತಾನಿಟ್ಟುಕೊಂಡ ಹೆಸರಿನಿಂದ ಪ್ರಸಿದ್ಧಿ ಹೊಂದುವದಿಲ್ಲ. ಆದರೆ ಕೆಲಸಗಳಿಂದ. ಈ ಒಕ್ಕೂಟ ಎಂತು ವರ್ತಿಸತಕ್ಕದ್ದು? ಅತ್ಯಂತ ದುರಾಗ್ರಹಿಗಳಾದ ಸವರ್ಣ ಹಿಂದುಗಳು ಈ ಮೊದಲಿನ ನನ್ನ ಭಾಷಣದಲ್ಲಿ ಹೇಳಿದಂತೆ, ತೀರ ಅಲ್ಪಸಂಖ್ಯಾಕರಾಗಿದ್ದಾರೆ. ಇವರು ಕೋಟ್ಯವಧಿ ಅಸ್ಪೃಶ್ಯರನ್ನು ನಿರ್ವೀರ್ಯರನ್ನಾಗಿ ಮಾಡುತ್ತಾರೆ, ಶೂದ್ರರನ್ನು ಮತ್ತು ಗುಡ್ಡಗಾಡು ಜನರನ್ನು ನಿಃಸತ್ವರನ್ನಾಗಿ ಮಾಡುತ್ತಾರೆಂದು ನಾನು ಇದಕ್ಕೆ ಜೋಡಿಸುತ್ತೇನೆ ಈ ಹಿಂದೀ ಒಕ್ಕೂಟದ ಬಗ್ಗೆ ಅಡಿಕೊಳ್ಳುವುದುಂಟು ಈ ಪರಿಸ್ಥಿತಿಯಲ್ಲಿ ಉಳಿದ ಸಣ್ಣಪುಟ್ಟ ಅಲ್ಪಸಂಖ್ಯಾಕರ ಪಾಡೇನು? ಸವರ್ಣ ಹಿಂದುಗಳೆಂದು ಎನಿಸಿಕೊಳ್ಳುವವರ ಸತ್ವಪರೀಕ್ಷೆಯ ಕಾಲವೀಗ ಸನ್ನಿಹಿತವಾಗಿದೆ. ಅವರು ತಮ್ಮ ಸ್ಪಷ್ಟವಾದ ಕರ್ತವ್ಯವನ್ನು ತಿಳಿದುಕೊಂಡು ಅದನ್ನು ಪಾಲಿಸುವರೆ? ತೀರ ಹಿಂದುಳಿದವರಿಗೆ ಎಲ್ಲ ಬಗೆಯ ಸೌಕರ್ಯಗಳನ್ನು ಕೊಟ್ಟು ಅತ್ಯುಚ್ಚಸ್ಥಾನವನ್ನು ಮುಟ್ಟುವಂತೆ ನೋಡಿಕೊಂಡು ಒಕ್ಕೂಟದಲ್ಲಿ ಅವರಿಗೆ ಸ್ಥಾನ ಕೊಡುವರೋ? ಮುಸಲ್ಮಾನ ಅಲ್ಪಸಂಖ್ಯಾಕರಿಗಾಗಿ ಅವರೇನು ಮಾಡುವರು? ಪರರಾಷ್ಟ್ರದವರೆಂದು ಅವರನ್ನು ಭಾವಿಸಲಾಗುವದೆ ಇಲ್ಲವೆ ತಮ್ಮ ನಾಡಿನಲ್ಲಿಯೆ ತಮ್ಮನ್ನು ಪರರಾಷ್ಟ್ರದವರಂತೆ ನಡೆಸಿಕೊಳ್ಳಲಾರರೆಂಬ ಭಾವನೆ ಅವರಲ್ಲಿ ಹುಟ್ಟುವಂತೆ ಮಾಡುವರೋ? ಅತ್ಯಂತ ಶ್ರೇಷ್ಠ ಜನರಿಗೆ ಸಿಕ್ಕುತಿರುವ ಎಲ್ಲ ಸೌಕರ್ಯಗಳು ತಮಗೆ ಸಿಕ್ಕಬಹುದೆಂಬ ಭಾವನೆ ಅವರಲ್ಲುಂಟಾಗುವಂತೆ ವರ್ತಿಸುವರೇ? ಮುಸಲ್ಮಾನರು ಮತ್ತು ಹಿಂದುಗಳು ಎರಡು ಪ್ರತ್ಯೇಕ ರಾಷ್ಟ್ರಗಳ ಪ್ರಜೆಗಳು ಎಂದು ಕಾಯದೆ ಆಜಂ ಜಿನ್ನಾ ಇವರ ಪ್ರತಿಪಾದನೆಗೆ ಅನುಕೂಲವಾಗುವ ರೀತಿಯಲ್ಲಿ ಮಾತ್ರ ಪರಮಾತ್ಮನ ದಯೆಯಿಂದ ಸವರ್ಣ ಹಿಂದುಗಳು ವರ್ತಿಸಬಾರದು. ಕಾಲಕ್ಕೆ ತಕ್ಕಂತೆ ಅವರು ತಮ್ಮ ಶೀಲ, ಶೌರ್ಯ, ನಿಷ್ಠಾಪಟ್ಯ ಮತ್ತು ಸಹಿಷ್ಣುತೆ ಮೊದಲಾದವುಗಳಿಂದ, ಒಕ್ಕೂಟದಲ್ಲಿ ಧರ್ಮ ಜಾತಿ, ವರ್ಗ ಮೊದಲಾದವುಗಳನ್ನು ಲಕ್ಷಿಸಿ ಯಾವದೇ ಬಗೆಯ ಭೇದ ಭಾವವನ್ನು ಮಾಡಲಾಗುವದಿಲ್ಲೆಂಬದಾಗಿ ಪಾಕಿಸ್ತಾನದಲ್ಲಿಯ ಮುಸಲ್ಮಾನರಿಗೆ ಸಿದ್ಧ ಮಾಡಿಕೊಡಬೇಕು. ಹಿಂದೀ ಒಕ್ಕೂಟದಲ್ಲಿ ಗುಣಕ್ಕೆ ಪ್ರಾಧಾನ್ಯವಿದ್ದು ಪರಿಶ್ರಮ ಮಾಡುತಿರುವ ಪ್ರತಿಯೊಬ್ಬ ನಾಗರಿಕನಿಗೆ ಸಂಪಾದನೆಗೆ ಬೇಕಾದಷ್ಟು ಸಂಧಿಯನ್ನು ಕಲ್ಪಿಸಿ ಕೊಡಲಾಗುತಿದೆಂಬದಾಗಿಯೂ ಸಿದ್ಧ ಮಾಡಿಕೊಡಬೇಕು.

“ಇನ್ನು ಮುಂದೆ ಹಿಂದೀ ಮತ್ತು ಉರ್ದು ಭಾಷೆಗಳ ಯೋಗ್ಯ ಸಂಮಿಶ್ರಣವಿರುವ ಹಿಂದುಸ್ತಾನಿ ಭಾಷೆಗೆ ಒಕ್ಕೂಟದಲ್ಲಿ ಅವಕಾಶವಿಲ್ಲೆಂಬ ತಪ್ಪು ನಿರ್ಧಾರಕ್ಕೆ ಬಂದ

—೯ನೇ ಪುಟಕ್ಕೆ

ವಾರದ ಪತ್ರ

ನಮ್ಮ ಸಂಪ್ರದಾಯ

ಈಚೆಗೆ ಪ್ರಾರ್ಥನಾಸಭೆಯಲ್ಲಿ ಉಪನ್ಯಸಿಸಿದರು. ತನಗೆ ಸಂಪರ್ಕ ಬಂದ ಇತರ ಧರ್ಮಗಳ ಒಳ್ಳೆ ಅಂಶಗಳನ್ನು ಅಂಗೀಕರಿಸಿ ಅರಗಿಸಿಕೊಳ್ಳುವದು ಪ್ರಾಚೀನಕಾಲದಿಂದಲೂ ಹಿಂದೂ ಧರ್ಮ ಸಂಸ್ಕೃತಿಗಳ ವೈಶಿಷ್ಟ್ಯವಾಗಿತ್ತು. ಗಾಂಧೀಜಿ ತಮ್ಮ ಭಾಷಣವೊಂದರಲ್ಲಿ "ಅಲ್ಲೋಪನಿಷತ್ತಿ"ನ ಪ್ರಸ್ತಾವನೆ ಮಾಡಿದ್ದನ್ನು ಕೇಳಿ ಯಾರೋ ಒಬ್ಬನು ಅದರ ಕೈಬರಹದ ಪ್ರತಿಯನ್ನು ಅವರಿಗೆ ಕಳಿಸಿದನು. ಅದರಲ್ಲಿ ಏಳು ವಾಕ್ಯಗಳಿವೆ. ಅದು ಅಥರ್ವ ವರ್ಗಕ್ಕೆ ಸೇರಿದ ಉಪನಿಷತ್ತು. ಆಧಾರದ ನಂತರ ಅವರಿಗೆ ಅದರ ಮುದ್ರಿತ ಪ್ರತಿಗಳೂ ಬಂದಿವೆ. ಆದರೆ ಅದು ಅಧಿಕೃತ ಸಂಗ್ರಹಗಳಲ್ಲಿ ಅಡಕವಾಗಿಲ್ಲವೆಂದು ಅದನ್ನು ಕಳಿಸಿದವರು ಎಚ್ಚರಿಸಿದ್ದಾರೆ.

ರಾಣಾ ಪ್ರತಾಪ ಮಹಾರಾಜನ ಅಜ್ಜನಾದ ರಾಣಾ ಸಂಗನ ಅಜ್ಜ ರಾಣಾ ಕುಂಭನ ವಿಷಯವಾಗಿ ಪ್ರೊ. ಜಯಚಂದ್ರ ವಿದ್ಯಾಲಂಕಾರರು ಗಾಂಧೀಜಿಗೆ ಬರೆದಿದ್ದಾರೆ. ಮುಸ್ಲಿಂ ಪ್ರಭಾವದ ವಿರುದ್ಧ ಬಂಡುಹೂಡಿದ ಮೊದಲಿಗರಲ್ಲಿ ರಾಣಾ ಕುಂಭನೊಬ್ಬ. ಅವನು ಮಾಳವ ಮತ್ತು ಗುಜರಾಥದ ಸುಲ್ತಾನರನ್ನು ಯುದ್ಧದಲ್ಲಿ ಸೋಲಿಸಿ ಚಿತ್ತೂರಿನಲ್ಲಿ ಇಂದಿಗೂ ತಲೆಯೆತ್ತಿ ನಿಂತಿರುವ ವಿಜಯಸ್ತಂಭವನ್ನು ಕಟ್ಟಿಸಿದನು. ಆ ಸ್ತಂಭದ ಮೇಲೆ ಬ್ರಹ್ಮಾ ವಿಷ್ಣು ಮಹೇಶ್ವರರ ಹೆಸರಿನ ಜತೆಗೆ ದೊಡ್ಡ ಅರಬಿ ಅಕ್ಷರಗಳಲ್ಲಿ ಅಲ್ಲಾನ ಹೆಸರೂ ಕೆತ್ತಿದೆ.

ಪ್ರೊಫೆಸರ ಮಹಾಶಯರು ಮುಂದುವರಿಯುತ್ತ, ರಾಣಾ ಕುಂಭನ ಸಮಕಾಲೀನನಾದ ಕಾಶ್ಮೀರದ ಸುಲ್ತಾನ ಜೈನಾಬುದ್ದೀನನು ತನ್ನ ಹಿಂದೂ ಪ್ರಜೆಗಳ ಸಂಗಡ ತೀರ್ಥ ಯಾತ್ರೆ ಮಾಡುತ್ತಿದ್ದುದನ್ನೂ ಉಲ್ಲೇಖಿಸಿದ್ದಾರೆ. ಅವನು ಅನೇಕಾನೇಕ ಹಿಂದೂ ಮಂದಿರಗಳ ಜೀರ್ಣೋದ್ಧಾರ ಮಾಡಿಸಿದನು. ಅವುಗಳಲ್ಲಿ ಕೆಲವು ಇಂದಿಗೂ ಉಳಿದಿವೆ. ಛತ್ರಪತಿ ಶಿವಾಜಿಯೂ ಮಹಾರಾಜಾ ರಣಜಿತ ಸಿಂಗನೂ ಮುಸ್ಲಿಂ ರಾಜರೊಡನೆ ಕಾದುತ್ತಿದ್ದರೂ ಇಸ್ಲಾಂ ಧರ್ಮವನ್ನು ಗೌರವಿಸುತ್ತಿದ್ದರು.

ಇಂದಿನ ಜಾತೀಯ ವೈಷಮ್ಯಕ್ಕೆ ಶಾಲೆಗಳಲ್ಲಿ ಇತಿಹಾಸದ ಶಿಕ್ಷಣವನ್ನು ತಪ್ಪುತಪ್ಪಾಗಿ ಕೊಡುತ್ತಿರುವದೇ ಕಾರಣವೆಂದು ಆ ಇತಿಹಾಸ ವಿದ್ವಾಂಸರ ಅಭಿಪ್ರಾಯವಾಗಿತ್ತು. ಅವರು ಈ ವಿಷಯವನ್ನು ಉಪೇಕ್ಷಿಸಿದುದಕ್ಕಾಗಿ ಗಾಂಧೀಜಿಯನ್ನು ದೂರಿದ್ದರು. ಈ ವಾದದ ಬಲವನ್ನು ಗಾಂಧೀಜಿ ಒಪ್ಪಿಕೊಂಡರು. ಸಭಿಕರೂ ಸಭೆಯಲ್ಲಿ (ಇಸ್ಲಾಂ ವಾಕ್ಯ ಪಠನೆಗೆ) ಆತಂಕ ಮಾಡುವವರೂ ಇತಿಹಾಸದ ಈ ಪಾಠವನ್ನು ಮನಗಂಡು ಹಿಂದೂ ಧರ್ಮಕ್ಕೆ ಲಾಂಛನಾಸ್ಪದವಾಗಿ ಆಚರಿಸುವದನ್ನು ಬಿಡಲೆಂದು ಅವರು ಪ್ರಾರ್ಥಿಸಿದರು.

ಸೇಡು ಶೌರ್ಯವಲ್ಲ

ಒಬ್ಬನು ಗಾಂಧೀಜಿಗೆ ಪತ್ರಬರೆದು ಹಿಂದುಸ್ತಾನದಲ್ಲಿ ದೇವಾಸುರ ಸಂಗ್ರಾಮವೊಂದು ಉಪಸ್ಥಿತವಾಗಿದೆಯೆಂದು ಹೇಳಿದ್ದಾನೆ. ಸಾತ್ವಿಕ ಪರಹಿತ ನಿಷ್ಠೆಯ ಅತಿರೇಕತ್ವಕ್ಕೆಂದು ಕಾಲವಲ್ಲ. ನಾವು "ಶಠೇ ಶಾಠ್ಯಂ ಸಮಾಚರೇತ್" ಎಂಬ ನೀತಿಯನ್ನು ಏಕೆ ಅನುಸರಿಸಬಾರದು? ಇದಿಲ್ಲವೆಂದರೆ ಆ ಗುರೂಕ್ತಿಯನ್ನು ಪಾಲಿಸಬೇಕೆನ್ನುವವರಿಗೆ ಅಡ್ಡಿ ಮಾಡದೆ ಗಾಂಧೀಜಿ ಸುಮ್ಮನಿರಬಾರದೇಕೆ? ಅಕ್ಕರದ ಬಗ್ಗೆ ಬಾಬು ಪುರುಷೋತ್ತಮದಾಸ ಟಂಡನ್ನರು ಹೇಳಿದ ಮಾತುಗಳಿಂದ ಗಾಂಧೀಜಿಗೇಕೆ ಅಷ್ಟು ಆಘಾತವಾಗಬೇಕು?

ಬಾಬು ಪುರುಷೋತ್ತಮದಾಸ ಟಂಡನ್ನರು ನಮ್ಮ ಹಳೆಯ ಗೆಳೆಯರು, ಸಹಕಾರ್ಯಕರ್ತರು, ಎಂದು ಗಾಂಧೀಜಿ ಉತ್ತರವಿತ್ತರು. ಅವರೊಡನೆ ನಮಗೆ ಮತಭೇದ ಬಂದುದರಿಂದ ಆಘಾತವಾದುದು ನಿಜ. ನಾವೊಂದು ದುರ್ಬಲ ಮಾನವ ಪ್ರಾಣಿಯೆಂದು ಇದರಿಂದ ಸಿದ್ಧವಾಗುತ್ತದೆ. ನಾವು ಸ್ಥಿತಪ್ರಜ್ಞ ದಶೆಗೇರಿದ್ದರೆ ಈ ಭೇದಸೋದಗಳಿಂದ ಮುಕ್ತರಾಗಬಹುದಿತ್ತು. ಆ ಅವಸ್ಥೆಯನ್ನು ಸಾಧಿಸಲು ನಾವು ಪ್ರಯತ್ನಿಸುತ್ತಿರುವೆವು, ಎಂದು ಅವರು ಹೇಳಿದರು.

"ಶಠೇ ಶಾಠ್ಯಂ" ಎಂಬ ಉಕ್ತಿಯ ವಿಷಯದಲ್ಲಿ ನಾನು ಈ ಮೊದಲೇ ಎಷ್ಟೋ ಹೇಳಿದ್ದೇನೆ" ಗಾಂಧೀಜಿ ಮುಂದೆ ಸಾಗಿದರು. "ಸಾಧುವೊಬ್ಬನು ತನ್ನನ್ನು ಕಡಿದ ಚೇಳನ್ನು ನೀರಿನಿಂದೆತ್ತಿ ರಕ್ಷಿಸಿದನು. ಅದಕ್ಕೆ ಆತನನ್ನು ಕೆಲವರು ಜರೆದರು. ಆಗ ಆತನಿತ್ತ ಸ್ವಲ್ಪವಾದರೂ ಪರಿಣಾಮಕಾರಿಯಾದ ಉತ್ತರವಿದು: ಚೇಳು ತನ್ನ ಸ್ವಭಾವಕ್ಕೆ ತಕ್ಕಂತೆ ವರ್ತಿಸಿತು. ಹುತ್ತ ಸಾಧುವಾದ ನಾನಾದರೂ ನನ್ನ ಸ್ವಭಾವದಂತೆ ವರ್ತಿಸಿದೆ. ಪಠಾನನು ಯತಿ ಮನುಷ್ಯತ್ವದ ಆಚರಣೆಯ ಬಗೆಗೆ ಮೌನವಾಗಿರಬೇಕೆಂದು ಸೂಚಿಸುವದು ಕಪಟಕ್ಕೆ ಕರೆಕೊಟ್ಟಂತೆ. ಹೇಡಿತನದಿಂದ ತಲೆವಾಗುವದಕ್ಕಿಂತ ಪ್ರತಿಹಿಂಸೆಯೇ ಮೇಲೆಂದು ನಾನೆಷ್ಟೋ ಬಾರಿ ಹೇಳಿದ್ದೇನೆ. ಇನ್ನೂ ಹೇಳುವೆ. ಆದರೆ ಪ್ರತಿಹಿಂಸೆ ನಿಜವಾದ ಶೌರ್ಯದ ಚಿಹ್ನವೂ ಅಲ್ಲ. ಅದು ಜ್ವಾಲಾಗ್ನಿಯನ್ನು ನಂದಿಸಲಲ್ಲದೂ ಅಲ್ಲ ಎಂದು ಹೇಳದಿರಲಾರೆ."

ಹಿಂದುಸ್ತಾನದ ವಿಚ್ಛೇದವನ್ನು ಎದರಿಸಿರಿ

"ಹಿಂದುಸ್ತಾನವನ್ನು ವಿಚ್ಛೇದಿಸುವದೆಂದರೆ ನನ್ನನ್ನು ವಿಚ್ಛೇದಿಸಿದಂತೆಯೇ" ಎಂದು ಸಾರಿದ್ದ ಗಾಂಧೀಜಿಯವರೀಗ ಹಿಂಜರಿಯುತ್ತಿದ್ದಾರೆಂದು ಆರೋಪಿಸಿ ಯಾರೋ ಒಬ್ಬ ಪತ್ರ ಬರೆದಿದ್ದ. ಆಗಬೇಕೆಂದಿರುವ ವಿಚ್ಛೇದದ ವಿರುದ್ಧ ಚಳವಳಿಯನ್ನು ನಡೆಸಬೇಕೆಂದು ಅವನು ಗಾಂಧೀಜಿಗೆ ಆಹ್ವಾನಕೊಟ್ಟಿದ್ದ. ಈ ವಕ್ರೋಕ್ತಿಯಲ್ಲಿ ಧ್ವನಿತವಾದ ಆರೋಪ ಸಾಧುವಾದುದೆಂದು ತಮಗೆನಿಸುವದಿಲ್ಲ. ಎಂದು ಗಾಂಧೀಜಿ ಹೇಳಿದರು. ನಾವು ಹೇಳಿಕೊಟ್ಟಾಗ ಸಾರ್ವಜನಿಕಾಭಿಪ್ರಾಯವನ್ನೇ ವ್ಯಕ್ತಗೊಳಿಸಿದ್ದೆವು. ಆದರೆ ಸಾರ್ವಜನಿಕಾಭಿಪ್ರಾಯ ತಮಗೆ ವಿರುದ್ಧವಾಗಿರುವಾಗ ಅದನ್ನು ಬಲವಂತಗೊಳಿಸುವ ಅಧಿಕಾರ ತಮಗುಂಟೆ? "ನೀವು ಎಷ್ಟೋ ಸಲ ಅಸತ್ಯ ಅಸತ್ಯಗಳೊಡನೆ ಎಂದೆಂದೂ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದಲ್ಲವೆಂದು ಸಾರಿದ್ದೀರಿ, ಎಂದೂ ಆ ಪತ್ರಲೇಖಕ ನನಗೆ ನೆನಪುಮಾಡಿಕೊಟ್ಟಿದ್ದಾನೆ," ಗಾಂಧೀಜಿ ಮುಂದುವರಿದರು. "ಅವನು ಹೇಳುವದು ಸರಿ ಆದರೆ ಆ ನಿಯಮದ ಪ್ರಯೋಗವೂ ಸರಿಯಾಗಿಯೇ ಇರಬೇಕು. ಆದರೆ ಮುಸ್ಲಿಮೇತರ ಹಿಂದುಸ್ತಾನವೊಂದು ಸಂಪೂರ್ಣವಾಗಿ ನನ್ನ ಬೆಂಬಲಕ್ಕಿದ್ದರೆ, ಬರಲಿರುವ ವಿಭಜನೆಯನ್ನು ತಲೆಕೆಳಗುಮಾಡುವ ಹಾದಿಯನ್ನು ತೋರಿಸುತ್ತಿದ್ದೆನೆಂದು ಎದೆತಟ್ಟಿ ಹೇಳುವೆ. ಆದರೆ ನಾನಿಂದು ಗತಕಾಲದ ಮನುಷ್ಯನಾಗಿಬಿಟ್ಟಿದ್ದೇನೆ, ಇಲ್ಲವೆ ಜನರು ಹಾಗೆ ಭಾವಿಸತೊಡಗಿದ್ದಾರೆಂದು ಒಪ್ಪಿಕೊಳ್ಳಬೇಕಾಗಿದೆ. ನಾವು ಕಳೆದ ಮೂವತ್ತು ವರ್ಷಗಳಿಂದ ಕಲಿತ ಪಾಠವನ್ನು ಮರೆತುಬಿಟ್ಟಿದ್ದೇವೆ. ಅಸತ್ಯವನ್ನು ಸತ್ಯದಿಂದಲೂ ಹಿಂಸೆಯನ್ನು ಅಹಿಂಸೆಯಿಂದಲೂ ಅಸಹನೆಯನ್ನು ಸಹನೆಯಿಂದಲೂ ಕಾವನ್ನು ತಂಪಿನಿಂದಲೂ ಗೆಲ್ಲಬೇಕೆಂಬುದನ್ನು ನಾವು ಮರೆತುಬಿಟ್ಟಿದ್ದೇವೆ. ವಿರೋಧದ ಮುಂದಾಳ್ತನ ವಹಿಸಲು ಹಲವರು ನನಗೆ ಕರೆಕೊಟ್ಟಿದ್ದಾರೆ. ಆದರೆ ಆ ವಿರೋಧವೊಂದು ಹೊರತು ನನ್ನ—ಅವರ ನಡುವೆ ಮತ್ತಾವ ಸಮಾನಧರ್ಮವೂ ಇಲ್ಲ. ನನ್ನ ವಿರೋಧದ ತಳಹದಿ ನನ್ನನ್ನು ಮುಂದಾಳ್ತನಕ್ಕೆ ಕರೆಯುವವರ ವಿರೋಧದ ತಳಹದಿಗಿಂತ ತೀರ ಭಿನ್ನವಾಗಿರುವಂತಿದೆ. ಪ್ರೇಮವೂ ದ್ವೇಷವೂ ಒಂದಾಗಬಲ್ಲವೆ?

ಸಾಮಂತ ಸ್ವರಾಜ್ಯವೇಕೆ

ನಡುಗಾಲದಲ್ಲಿ ಸಾಮಂತ ಸ್ವರಾಜ್ಯದ ಸ್ಥಾನಮಾನವನ್ನು ಸ್ವೀಕರಿಸಿದ್ದಕ್ಕೆ ಕೆಲವರು ಆಕ್ಷೇಪಿಸುತ್ತಾರೆ. ಸ್ವಾತಂತ್ರ್ಯ ನಾಟಕದ ಭರತವಾಕ್ಯವಾಗಿಬಿಟ್ಟಿತೆಂದು ಹೇಳುವಷ್ಟು ಕೂಡ ಅವರು ನಿರಾಶರಾಗಿಬಿಟ್ಟಿದ್ದಾರೆ. ಇಂದಿನ ವಾಯಸರಾಯರು ಒರೆಯಿಂದ ಸೆಳೆದ ಖಡ್ಗವನ್ನು ನಮ್ಮ ಮುಂದೆ ತಿರುವಿ ಹೆದರಿಸುತ್ತಿದ್ದ ಹಿಂದಿನ ವಾಯಸರಾಯರೆಲ್ಲರಿಗಿಂತ ಭಯಂಕರರೆಂದು ಅವರ ಹೇಳಿಕೆ. ಅವರು ತಮ್ಮ ಮನಮೋಹಕ ವಾಕ್ಶಕ್ತಿಯಿಂದ ಕಾಂಗ್ರೆಸ ಮುಂದಾಳುಗಳನ್ನು ಮಂಕುಗೊಳಿಸಿದ್ದಾರಂತೆ. ಈ ಪತ್ರಬರೆದವನು ವಾಯಸರಾಯರಿಗೆ ತಾನರಿಯದೇ ಹಿರಿಯ ಗೌರವ ಸಲ್ಲಿಸಿದ್ದರೂ ಕಾಂಗ್ರೆಸ್ ಮಂತ್ರಿಗಳ ಬುದ್ಧಿಶಕ್ತಿಯನ್ನು ಮಾತ್ರ ತೆಗಳಿದಂತಾಗಿದೆಯೆಂದು ಗಾಂಧೀಜಿ ಹೇಳಿದರು. ಸ್ವಯಂವೇದ್ಯವಾದುದು ಈ ಪತ್ರಲೇಖಕನಿಗೆ ತಿಳಿಯದುದು ಆಶ್ಚರ್ಯ. ಈ ದೇಶ, ಅಂದರೆ ಅದರ ವಾಚಾಲ ಅಂಶ, ಮುಂದಾಳುಗಳನ್ನು ಬೆಂಬಲಿಸಿದೆ. ಅವರೇನು ಮೂರ್ಖರಲ್ಲ. ಹಿಂದುಸ್ತಾನ ಹರಿದುಹೋಗುವದೆಂದರೆ ಅವರಿಗೂ ಬೇರಾರಷ್ಟೇ ಅಪ್ರಿಯವಾಗಿದೆ. ಆದರೆ ಅವರು ಜನರ ಪ್ರತಿನಿಧಿಗಳಾಗಿ ಅಧಿಕಾರಸ್ಥಾನದಲ್ಲಿದ್ದಾರೆ. ಈ ಪತ್ರ ಬರೆದವನು ಅಧಿಕಾರದಲ್ಲಿದ್ದರೂ ಸ್ಥಿತಿಯೇನು ಬೇರೆ ಬಗೆಯಾಗಿರುತ್ತಿದ್ದಿಲ್ಲ. ಅದು ಹೇಗೇ ಇರಲಿ. ಮುಂದಾಳುಗಳ ಆಯ್ಕೆ ಸರಿಯಾಗಿಲ್ಲದಿದ್ದರೆ, ಇಲ್ಲವೆ ಜನರು ದೇಶನಿಷ್ಠರಾಗಿಲ್ಲದಿದ್ದರೆ. ವಾಯಸರಾಯರನ್ನು ಶಪಿಸುವದು ಮರ್ಯಾದೆಯಲ್ಲ. "ಯಥಾ ರಾಜಾ ತಥಾ ಪ್ರಜಾ" ಎನ್ನುವದಕ್ಕಿಂತಲೂ "ಯಥಾ ಪ್ರಜಾ ತಥಾ ರಾಜಾ" ಎಂಬುದು ಹೆಚ್ಚು ಸತ್ಯವಾದ ಮಾತು.

ಬ್ರಿಟಿಶರು ಜೂನ ೧೯೪೮ ರ ಬದಲು ಅಗಸ್ಟ ೧೫, ೧೯೪೭ ರಲ್ಲಿಯೆ ಇಲ್ಲಿಂದ ಹೊರಟಿದ್ದು ಹೋಗಬೇಕಾಗಿದ್ದರೆ, ಅವರು ಏನಾದರೊಂದು ಮಾರ್ಗದಿಂದ ಅಧಿಕಾರವನ್ನು ಬಿಟ್ಟುಕೊಡಬೇಕಾಗುವದು. ಅದು ಸಾಮಂತ ಸ್ವರಾಜ್ಯದ ಹಾದಿ. ತಮ್ಮ ಸ್ವಂತ ಘಟನೆ ಸಿದ್ಧವಾದೊಡನೆ ಹಿಂದೀಯರು ಬೇಕಾದರೆ ಸಾಮಂತ ಸ್ವರಾಜ್ಯವನ್ನು ತ್ಯಜಿಸಿಬಿಡಬಹುದು. ಬದಲಿಗೆ ನಾವೇ ಬಲಗುಂದಿ ಸಾಮಂತ ಸ್ವರಾಜ್ಯದಲ್ಲೆ ಉಳಿಯ ಬಯಸಿದರೆ ಬ್ರಿಟಿಶರನ್ನು ದೂರುವದು ನ್ಯಾಯವಲ್ಲ. ಅದು ಹೇಡಿತನವೇ ಸರಿ.

ಅಖಂಡ ಬಂಗಾಲ

ಅಖಂಡ ಬಂಗಾಲಕ್ಕಾಗಿ ಹೊರಟ ಚಳವಳಿಯನ್ನು ಕುರಿತು ತಾವಾಡಿದ ಮಾತುಗಳ ಬಗ್ಗೆ ಉಗ್ರ ನಿಷೇಧವನ್ನು ತೋರುವ ಪತ್ರಗಳು ಬರುತಿವೆಯೆಂದು ಗಾಂಧೀಜಿ ಹೇಳಿದರು. "ನಿನಗೀ ಸುದ್ದಿ ಹೇಳಿದವರ ಹೆಸರುಗಳನ್ನು ಬಹಿರಂಗಪಡಿಸಬೇಕು; ಅದರ ಸತ್ಯಾಸತ್ಯತೆಯ ಬಗ್ಗೆ ವಿಚಾರಣೆ ನಡೆಸಬೇಕು. ಸುದ್ದಿ ಹೇಳಿದವರು ತಪ್ಪಾಗಿದ್ದರೆ ಅವರನ್ನು ದಂಡಿಸಬೇಕು, ಸರಿಯಾಗಿದ್ದರೆ ಲಂಚ ತೆಗೆದುಕೊಂಡವರನ್ನು ದಂಡಿಸಬೇಕು, ಎಂದು ಕೇಳಲಾಗಿದೆ. ಇಂಥ ನಿಷೇಧ ಅಪ್ರಸ್ತುತವೆಂದೇ ಇದಕ್ಕೆ ನನ್ನ ಉತ್ತರ. ಆ ಟೊಪ್ಪಿಗೆ ಯಾರ ತಲೆಗೂ ಹೊಂದಿಕೆಯಾಗದಿದ್ದರೆ ತಲೆ ಕೆಡಿಸಿಕೊಳ್ಳುವ ಅವಶ್ಯಕತೆಯೇ ಇಲ್ಲ. ಅಲ್ಲದೆ ಯಾರನ್ನಾದರೂ ದಂಡಿಸಲು ಖಾಸಗಿ ವ್ಯಕ್ತಿಯಾದ ನಾನು ಎಷ್ಟರವನು. ಅದೇ ಕಾಯಿದೆಯ ಕೆಲಸ. ಇದಕ್ಕಿರುವ ಒಂದೇ ಒಂದು ಪರಿಣಾಮಕಾರಿಯಾದ ಅಧಿಕಾರ ಸಂಪತ್ತಿಯೆಂದರೆ ಟಾಲ್‌ಸ್ಟಾಯನು ಹೇಳಿದಂತೆ ಅರಿವುಳ್ಳ ಸಾರ್ವಜನಿಕಾಭಿಪ್ರಾಯ. ಮೊದಲು ಪ್ರಸಿದ್ಧ ಸೈನಿಕನಾಗಿದ್ದು ಆ ಮೇಲೆ ಶಾಂತಿವಾದಿಯಾಗಿ ಅವನು ಯುದ್ಧ ಹೋರಾಟಗಳಿಗಿಂತಲೂ ಸಾರ್ವಜನಿಕಾಭಿಪ್ರಾಯವೇ ಪ್ರಬಲವಾದ ಆಯುಧವೆಂದು ವಾದಿಸುತ್ತಿದ್ದನು. ಇದೇ ಅಹಿಂಸೆಯೆಂದು ನನ್ನ ಹೇಳಿಕೆ. ಚರ್ಚಿಲ್ ಮಹಾಶಯರು ಬ್ರಿಟನ್ನಿಗೆ ಯುದ್ಧವನ್ನು ಗೆದ್ದುಕೊಟ್ಟರು. ಆದರೆ ಸಾರ್ವಜನಿಕಾಭಿಪ್ರಾಯ ಅವರನ್ನು ಪದಚ್ಯುತರನ್ನಾಗಿ ಮಾಡಿದೆ. ಅವರನ್ನು ಹಿಂದುಸ್ತಾನದಲ್ಲಿಯೂ ಸಾರ್ವಜನಿಕಾಭಿಪ್ರಾಯ ಸತರ್ಕವೂ ಪ್ರಬಲವೂ ಆಗಿದ್ದರೆ ಅದರ ವಿರುದ್ಧ ಯಾರೂ ಏನನ್ನೂ ಮಾಡಲಾರರು. ಪರಿಣಾಮಕಾರಿಯಾದ ಸಾರ್ವಜನಿಕಾಭಿಪ್ರಾಯವನ್ನು ನಿರ್ಮಿಸುವದು ಸತ್ಯಸಂಧತೆ ಅಹಿಂಸೆ ಇವುಗಳಿಂದ ಹುಟ್ಟಿದ ನಿಜವಾದ ಧೈರ್ಯವನ್ನೆ ಅವಲಂಬಿಸಿದೆ."

ಅದೇ ಸಂಬಂಧದಲ್ಲಿ ಇನ್ನೊಬ್ಬನು ಗಾಂಧೀಜಿಗೆ ಪತ್ರ ಬರೆದು, "ನಿಮ್ಮ ವಿಶ್ವಾಸಕ್ಕೆ ಪಾತ್ರರಾದವರು ಎಷ್ಟು ಅಸತ್ಯ, ದುಷ್ಟ ಮೂಢ, ನಿರಾಧಾರ ವಿಷಯಗಳನ್ನು ಹೇಳಿದರೂ ಅದನ್ನು ನಂಬುತ್ತೀರಿ" ಎಂದು ಬರೆದಿದ್ದನು. "ಈ ಹಾರಸುದ್ದಿಯನ್ನು ಗಟ್ಟಿಗೆ ಹಚ್ಚಿ ನಾನು ನನ್ನ ಗೆಳೆಯರಿಗೂ ನನ್ನನ್ನು ವೈರಿಯೆಂದು ಬಗೆಯುವವರಿಗೂ ಸೇರಿಯೆ ಹಿತವನ್ನು ಮಾಡಿದಂತಾಯಿತು," ಎಂದು ಗಾಂಧೀಜಿ ಉತ್ತರವಿತ್ತರು. "ಅದೂ ನನ್ನ ಮೇಲೆಯೆ ದುಷ್ಟ ಪದ್ಧತಿಗಳಿಗೆ ಉತ್ತೇಜನವೀಯುವ ಆರೋಪವಿರುವಾಗ. ಅಖಂಡ ಬಂಗಾಲ ಬೇಕೆನ್ನುವದು ಅಪರಾಧವಾಗಿದ್ದರೆ ನಾನು ಅಪರಾಧಿಯೆಂದು ಮನವಾರೆ ಒಪ್ಪಿಕೊಳ್ಳುವೆ. ಅಂಥ ಅಖಂಡತೆಯನ್ನು ಅಭಿಮಾನಕ್ಕೊಪ್ಪುವಂತೆ, ಪ್ರಾಮಾಣಿಕವಾಗಿ, ಉಭಯ ಪಕ್ಷಗಳ ಸಮ್ಮತಿಯಿಂದ ಕಾಯ್ದುಕೊಂಡು ಹೋಗುವದು ಸಾಧ್ಯವಿದ್ದರೆ ಅದರ ಸಮರ್ಥನೆಗೆ ನಾನು ಒಬ್ಬಂಟಿಗನಾಗುವಂತಿದ್ದರೂ ಮುಂದೆ ಬರುತಿದ್ದೆ. ನನ್ನ ಪಾಲಿಗೆ ಇದರಲ್ಲಿ ರಾಜಕೀಯ ಚದುರಂಗವಾಗಲಿ "ವ್ಯಾಪಾರ"ವಾಗಲಿ ಇಲ್ಲ. ನನಗೆ ಬೇಕಾದುದು ಹೃದಯಗಳ ಐಕ್ಯ. ಈ ಯೋಜನೆಯನ್ನು ಪ್ರಾಂತಿಕ ಲೀಗಿನವರು ತಿರಸ್ಕರಿಸಿದ್ದರೂ ಬಂಗಾಲದ ಮುಸ್ಲಿಮರು, ಮುಸ್ಲಿಂ ಬಹುಸಂಖ್ಯಾತರಿಂದ ಹಿಂದುಗಳು ಭಯಪಡುವ ಕಾರಣವಿಲ್ಲವೆಂದು ಅಭಯ ಕೊಡಬಲ್ಲರಾದರೆ, ಇಂದಾದರೂ ವಿಭಜನೆಯನ್ನು ತಡೆಯುವದು ಸಾಧ್ಯವಿದೆಯೆಂಬ ಧೈರ್ಯ ನನಗುಂಟು. ದುರ್ದೈವದಿಂದ ಲಕ್ಷಣಗಳು ತದ್ವಿರುದ್ಧವಾಗಿರುವಂತಿದೆ."


ರಾಷ್ಟ್ರದ್ವಯದ ಪ್ರಮೇಯ

ಮನುಷ್ಯ ದೃಷ್ಟಿಗೆ ಗೋಚರವಾಗುವಷ್ಟು ಮಟ್ಟಿಗೆ ಹಿಂದುಸ್ತಾನದ ವಿಭಜನೆ ಕಟ್ಟಿಟ್ಟಂತೆ ಆಗಿದೆ. ಅದಕ್ಕಾಗಿ ದುಃಖಿಸಬೇಡಿರೆಂದು ಗಾಂಧೀಜಿ ಸಭಿಕರಿಗೆ ಹೇಳಿದರು. "ನಾನಂತೂ ಕಾಯಿದೆ ಆಥವಾ ಜಿನ್ನಾರ ರಾಷ್ಟ್ರದ್ವಯದ ಪ್ರಮೇಯವನ್ನು ನಂಬಿಲ್ಲ, ನಂಬುವಂತೆಯೂ ಇಲ್ಲ. ಧರ್ಮಾಂತರದಿಂದ ರಾಷ್ಟ್ರಾಂತರವಾಗುವದು ಸಾಧ್ಯವೇ ಇಲ್ಲ. ನಾನು ಎಷ್ಟು ಹಿಂದುಸ್ತಾನದವನೋ ಅಷ್ಟೇ ಪಾಕಿಸ್ತಾನದವನೂ ಆಗಿದ್ದೇನೆ. ನೀವೂ ಅದೇ ಬಗೆಯಾಗಿ ನಡೆದುಕೊಂಡರೆ, ಭೌಗೋಲಿಕ ವಿಭಜನೆಯಾದರೂ ಜಿನ್ನಾ ಸಾಹೇಬರು ತಮ್ಮ ಪ್ರಮೇಯವನ್ನು ಸಿದ್ಧಾಂತವಾಗಿ ಮಾಡಿ ತೋರಿಸಲಾರರು.

"ತಮ್ಮನ್ನು ಶಹಾನಶಾಹ-ಇ-ಪಾಕಿಸ್ತಾನ [ಪಾಕಿಸ್ತಾನ ಚಕ್ರವರ್ತಿ] ಯೆಂದು ಕರೆದುದಕ್ಕೆ ಜಿನ್ನಾ ಸಾಹೇಬರು ತಮ್ಮ ಅನುಯಾಯಿಗಳಿಗೆ ಛೀಮಾರಿ ಹಾಕಿದರೆಂದೂ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರಿಗೆ ನ್ಯಾಯದೊರೆಯುವದಾಗಿ ಹೇಳಿದರೆಂದೂ ತಿಳಿಯುತ್ತದೆ. ಅವರು ಮಾತಿಗನುಸಾರವಾಗಿ ನಡೆದುಕೊಂಡರೆ ಎಲ್ಲವೂ ಸರಿಹೋದೀತು. ತಮಗೆ ಬೇಕಾದುದು ದೊರೆತ ಮೇಲೆ ತಮ್ಮ ಮುಸ್ಲಿಮೇತರ ದೇಶಬಾಂಧವರೊಡನೆ ಶಾಂತಿಯಿಂದ ಬಾಳುವದು ಅವರ ಕರ್ತವ್ಯ. ಪಾಕಿಸ್ತಾನದಲ್ಲಿ ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಮಾನ ಹಕ್ಕುಗಳ ಅಭಯವನ್ನು ಅವರು ಕೊಡಬೇಕು. ಉದಾಹರಣೆಗಾಗಿ ಸಿಂಧದ ಹಿಂದುಗಳು ಅಲ್ಲಿ ಶಾಂತಿ ಸುರಕ್ಷಿತತೆಗಳಲ್ಲಿ ಬಾಳಲು ಏಕೆ ಅಸಮರ್ಥರಾಗಬೇಕು? ಒಬ್ಬನೇ ಒಬ್ಬ ಹಿಂದುವೂ ಸಿಂಧುವನ್ನು ಬಿಟ್ಟು ಹೊರಟರೆ ಮುಸ್ಲಿಮರು ಅವನನ್ನು ಒಲಿಸಿ ತಿರುಗಿ ಕರೆದುಕೊಂಡು ಬರಬೇಕು. ಹಿಂದುಗಳಾದರೂ ಎಲ್ಲ ಭಯವನ್ನೂ ತೆಗೆದೊಗೆಯಬೇಕೆಂದು ನಾನು ಸೂಚಿಸುವೆ. ಅವರು ಧರ್ಮಾಂತರ ಅಥವಾ ಸ್ಥಾನಾಂತರ ಹೊಂದುವಂತೆ ಯಾರೂ ಒತ್ತಾಯಗೊಳಿಸಲಾರರು.

"ಇನ್ನು ಹಿಂದೂ ಬಹುಸಂಖ್ಯಾಕ ಪ್ರದೇಶಗಳಲ್ಲಿ ಅವರು, ಮುಸ್ಲಿಮರು ತಮ್ಮ ಪ್ರದೇಶಗಳಲ್ಲೇನು ಮಾಡುತಿರುವರೆಂಬುದನ್ನು ಲೆಕ್ಕಿಸದೆ ಮುಸ್ಲಿಮರೊಡನೆ ನ್ಯಾಯದಿಂದ ನಡೆದುಕೊಳ್ಳತಕ್ಕದ್ದು. ಹೀಗೆ ಮಾತ್ರ ಅವರು ಜಿನ್ನಾ

—೧೧ ನೇ ಪುಟಕ್ಕೆ



ದಿಲ್ಲಿಯ ಭಂಗಿ ವಸತಿಯಲ್ಲಿ ಗಾಂಧೀಜಿ

—ಚಿತ್ರ: ನ್ಯೂಸ ಫೋಟೋ ಬ್ಯೂರೋ, ದಿಲ್ಲಿ.

ಕಸ್ತೂರಬಾ ನಿಧಿಯಿಂದ ನಡೆದ ಚಿಕಿತ್ಸಾಕಾರ್ಯ

ಮೇ ೩೦ ರಲ್ಲಿ ಕಸ್ತೂರಬಾನಿಧಿಯ ಪ್ರಾಂತಿಕ ಅಧಿಕಾರಿಗಳ ಮತ್ತು ವೈದ್ಯಕೀಯ ಸಲಹೆ ಸಮಿತಿಯ ಸಂಯುಕ್ತಸಭೆ ಸೇರಿತ್ತು. ಅಧ್ಯಕ್ಷರು ವೈದ್ಯಕೀಯ ಸಂಸ್ಥೆಯ ಧೋರಣವನ್ನು ವಿವರಿಸಿದರು. ಅದಕ್ಕಾಗಿ ತಯಾರಿಸಿದ ಪಾಠಕ್ರಮದ ಪಟ್ಟಿಗನುಸಾರವಾಗಿ ಹಳ್ಳಿಗಳಲ್ಲಿ ಕೆಲಸ ಮಾಡಲು ಸೂಲಗಿತ್ತಿಯರನ್ನು ಮತ್ತು ದಾದಿಯರನ್ನು ತರಬೇತು ಮಾಡಲು ಯತ್ನಿಸಬೇಕೆಂದು ನಿಧಿಯ ಅಧಿಕಾರಿಗಳಿಗೆ ವೈದ್ಯಕೀಯ ಸಲಹೆ ಸಮಿತಿಯ ಸಲಹೆ ಕೊಟ್ಟಿತ್ತು; ಅದಲ್ಲದೆ ಆರೋಗ್ಯ ಪರೀಕ್ಷಕರ ಸ್ಥಳಗಳಿಗಾಗಿ ಯೋಗ್ಯರನ್ನು ಆರಿಸಬೇಕೆಂದೂ ಹೇಳಿತ್ತು.

ನಿಧಿಯ ಹಣ ಬಹಳ ಮಿತಪ್ರಮಾಣದಲ್ಲಿರುವುದರಿಂದ ಸಲಹೆ ಸಮಿತಿಯು ಬಾಣಂತಿತನದ ಮತ್ತು ಶಿಶುಸಂಗೋಪನದ ಕಾರ್ಯಗಳಲ್ಲೇ ಹೆಚ್ಚು ಆಸಕ್ತಿವಹಿಸಬೇಕೆಂದು ಹೇಳಿದೆ. ಈ ದೇಶದಲ್ಲಿ ಆಗುವ ಬಾಣಂತಿಯರ ಮತ್ತು ಶಿಶುಗಳ ಮರಣದ ಪ್ರಮಾಣವನ್ನು ಗಮನಿಸಿದರೆ ಬಾಣಂತಿಯರ ಮತ್ತು ಶಿಶುಗಳ ಆರೈಕೆಯತ್ತ ಗಮನಕೊಡುವುದು ಇಂದು ಅತ್ಯಗತ್ಯವಾದುದೆನ್ನಬೇಕಾಗುತ್ತದೆ.

ಹಳ್ಳಿಗಳಲ್ಲೇ ಹೆಚ್ಚಾಗಿ ತರಬೇತಿ ಕೊಡಲು ಸಿದ್ಧತೆ ಮಾಡಿದರೆ ಉಮೇದುವಾರರಿಗೆ ಹಳ್ಳಿಯ ವಾತಾವರಣ ಎದುರಿಗಿರುವಂತಾಗುತ್ತದೆಯೆಂದು ಸಲಹೆ ಮಾಡಲಾಗಿತ್ತು. ನಿಧಿಯ ಕಡೆಯಿಂದ ಪ್ರತಿಪ್ರಾಂತದಲ್ಲೂ ಒಂದೊಂದು ಉತ್ತಮವಾದ ತರಬೇತಿಯ ಸಂಸ್ಥೆಯಿರಬೇಕು. ಇದಕ್ಕಾಗಿ ಸಣ್ಣ ಸಣ್ಣ ಪಟ್ಟಣಗಳಲ್ಲಿರುವ ವೈದ್ಯಶಾಲೆಗಳನ್ನು ಬಳಸಿಕೊಳ್ಳುವ ಸವಲತ್ತುಗಳಿವೆಯೋ ಇಲ್ಲವೋ ಎಂಬುದನ್ನು ವಿಚಾರಿಸಬೇಕು. ಉಮೇದುವಾರರು ಹೆಚ್ಚು ಕಲಿತವರಾಗಿರಬೇಕೆಂಬುದನ್ನು ಒತ್ತಿ ಹೇಳಲಾಗಿತ್ತು. ವಿಶೇಷ ತರಹದ ಜ್ಞಾನವನ್ನು ಸ್ವೀಕರಿಸಲು ಅರ್ಹರಾಗುವಂತೆ ಮಾಡಲು ಹಳ್ಳಿಯ ಹುಡುಗಿಯರಿಗೆ ನಿಧಿಯ ಅಧಿಕಾರಿಗಳು ಪ್ರಾಥಮಿಕ ತರಬೇತಿಯನ್ನು ಕೊಡತಕ್ಕದ್ದು. ಸೂಲಗಿತ್ತಿಯರ ಆಡಳಿತದಲ್ಲಿ ಬಾಣಂತಿಯರ ಆರೈಕೆಯ ಸಣ್ಣ ಸಣ್ಣ ಕೇಂದ್ರಗಳನ್ನು ಸ್ಥಾಪಿಸುವ ಧೋರಣಕ್ಕೆ ಪ್ರೋತ್ಸಾಹ ಕೊಡಬಾರದೆಂದು ಹೇಳಲಾಗಿತ್ತು.

ಹಳ್ಳಿಗರೊಡನೆ ಸಂಬಂಧ ಬೆಳೆಸಿ ಅವರ ವಿಶ್ವಾಸವನ್ನು ಗಳಿಸಲು ಹೊರಗಣ ರೋಗಿಗಳಿಗೆ ಚಿಕಿತ್ಸೆ ಮಾಡುವ ವೈದ್ಯಾಲಯಗಳ ಅವಶ್ಯಕತೆಯನ್ನು ಪ್ರಾಂತಿಕ ಅಧಿಕಾರಿಗಳು ಎತ್ತಿ ಹೇಳಿದರು. ವೈದ್ಯಕೀಯ ಸಲಹೆ ಸಮಿತಿಯು ಸಾಧ್ಯವಾದಲ್ಲೆಲ್ಲ ಬಾಣಂತಿಯರ ಆರೈಕೆಯ ಕೇಂದ್ರಗಳಿಗೆಸೇರಿಕೊಂಡೇ ಮೇಲೆ ಹೇಳಿದಂತಹ ಚಿಕಿತ್ಸಾಲಯಗಳಿರತಕ್ಕದ್ದೆಂದು ಅಭಿಪ್ರಾಯಪಟ್ಟಿತು; ಅಂತಹ ಸ್ವತಂತ್ರ ಚಿಕಿತ್ಸಾಲಯಗಳನ್ನು ಸ್ಥಾಪಿಸುವುದನ್ನು ಅದು ಪ್ರೋತ್ಸಾಹಿಸಲಿಲ್ಲ.

ಹೊರಗಣ ಮತ್ತು ಸಾಂಸ್ಥಿಕ ಸೂಲಗಿತ್ತಿತನದ ಪ್ರಶ್ನೆಯನ್ನು ಚರ್ಚಿಸಲಾಯಿತು. ಒಳ್ಳೆಯ ಸನ್ನಿವೇಶವನ್ನೊದಗಿಸುವ, ಒಳ್ಳೆಯ ಆಹಾರವನ್ನೂ ಹೆಚ್ಚಿನ ವಿಶ್ರಾಂತಿಯನ್ನೂ ದೊರಕಿಸುವ ದೃಷ್ಟಿಯಿಂದ ಬಾಣಂತಿಯರಿಗೆ ಹಡೆದ ಮೊದಲ ಹತ್ತು ದಿನಗಳ ವರೆಗೆ ಸಾಂಸ್ಥಿಕ ಸೂಲಗಿತ್ತಿತನವೇ ಬೇಕೆಂದು ನಿರ್ಧರಿಸಲಾಯಿತು, ಆದರೆ ವೈದ್ಯಾಲಯದಲ್ಲೇ ಹಡೆಯುವ ಎಲ್ಲ ತಾಯಿಯರಿಗೂ ಅನುಕೂಲ ಮಾಡಿಕೊಡುವಷ್ಟು ಹಾಸಿಗೆಗಳನ್ನೊದಗಿಸಲು ಸಾಧ್ಯವಿಲ್ಲ. ಅದೂ ಅಲ್ಲದೆ ಹೊರಗಣ ಸೂಲಗಿತ್ತಿತನವನ್ನು ಚೆನ್ನಾಗಿ ನಡೆಸಿಕೊಂಡು ಹೋದದ್ದೇ ಆದರೆ ಅದು ಒಂದು ಬಹುಪರಿಣಾಮಕಾರಿಯಾದ ವಯಸ್ಕರ ವಿದ್ಯಾಭ್ಯಾಸ ಪದ್ಧತಿಯಾದೀತು.

ಮುಂಬಯಿಯ ಸಾರ್ವಜನಿಕ ಆರೋಗ್ಯಾಧಿಕಾರಿಗಳಾದ ಡಾ. ದಾಸಗುಪ್ತರು ಚೆನ್ನಾಗಿ ನಡೆಸಿದ ಹೊರಗಣ ಸೂಲಗಿತ್ತಿತನವು ಸುಮಾರು ಐದೇ ವರ್ಷಗಳಲ್ಲಿ ಇಡಿಯ ಹಳ್ಳಿಯ ಆರೋಗ್ಯದ ಮಟ್ಟವನ್ನೇ ಮೇಲಕ್ಕೆ ತಂದಿದೆಯೆಂದು ಅಭಿಪ್ರಾಯ ಪಡುತ್ತಾರೆ. ಸದ್ಯದಲ್ಲಿ ಮೇಲೆ ಹೇಳಿದ ಎರಡೂ ಬಗೆಯ ಸೂತಿಕಾ ಚಿಕಿತ್ಸೆಗಳೂ ಪ್ರೋತ್ಸಾಹಿಸಲ್ಪಡಬೇಕೆಂದು ವೈದ್ಯಕೀಯ ಸಲಹೆ ಸಮಿತಿಯು ಶಿಫಾರಸು ಮಾಡಿತು.

ಗ್ರಾಮ ಸೇವಕರಿಗೆ ಒಂದು ಅಲ್ಪಕಾಲಿಕ ವೈದ್ಯಕೀಯ ಶಿಕ್ಷಣಕ್ರಮವನ್ನೇರ್ಪಡಿಸಬೇಕೆಂದು ಕೆಲವರು ಪ್ರಾಂತಿಕ ಅಧಿಕಾರಿಗಳು ಹೇಳಿದರು. ಸಲಹೆ ಸಮಿತಿಯು ಅದನ್ನು ಪುರಸ್ಕರಿಸಲಿಲ್ಲ. ಪ್ರಥಮ ಚಿಕಿತ್ಸೆಯಲ್ಲಿ ಮತ್ತು ಗೃಹವೈದ್ಯಪದ್ಧತಿಯಲ್ಲಿ ಅವರಿಗೆ ಶಿಕ್ಷಣ ಕೊಡಬೇಕೇ ವಿನಾ ರೋಗಿಗಳಿಗೆ ಔಷಧೋಪಚಾರ ಕೊಡಲು ತಮಗೆ ತರಬೇತಿಯಾಗಿದೆಯೆಂದೂ ಅವರಿಂದ ಹಾಗೆ ಮಾಡಿ ತಾವು ಹಣಗಳಿಸಬಹುದೆಂದೂ ಅವರ ತಿಳುವಳಿಕೆಗೆ ಬರುವಂತೆ ಏನನ್ನೂ ಮಾಡಲಾಗದು. ಅರ್ಧಜ್ಞರಾದ ವೈದ್ಯರ ಚಿಕಿತ್ಸೆಗೆ ಗುರಿಪಡಿಸಿದರೆ ನಾವು ಹಳ್ಳಿಗರಿಗೆ ಉಪಕಾರ ಮಾಡುವುದನ್ನು ಬಿಟ್ಟು ಅಪಕಾರ ಮಾಡಿದಂತೆಯೇ ಆದೀತು.

ತಮ್ಮ ವಿದ್ಯಾಭ್ಯಾಸದ ಮಟ್ಟವನ್ನು ಸುಧಾರಿಸಿಕೊಳ್ಳಲು ಮತ್ತು ಸೂಲಗಿತ್ತಿತನದಲ್ಲಿ ತರಬೇತಿ ಪಡೆಯಲು ಶಕ್ತರಾಗಲು ಅನುಕೂಲವಾಗುವಂತೆ ಹಳ್ಳಿಯ ದಾದಿಯರಿಗೆ ಪ್ರಾಥಮಿಕ ತರಬೇತಿಯನ್ನು ಕೊಡತಕ್ಕದ್ದೆಂದು ಶಿಫಾರಸು ಮಾಡಲಾಯಿತು. ಅದು ಸಾಧ್ಯವಾಗದಿದ್ದಲ್ಲಿ ಹಳ್ಳಿಯ ಸೂಲಗಿತ್ತಿಯ ಮಗಳಿಗೆ ಇಲ್ಲವೆ ಸೊಸೆಗೆ ಅಂತಹ ತರಬೇತಿಯನ್ನು ಕೊಡಬೇಕು. ಸೂತಿಕಾಗೃಹಗಳಲ್ಲಿ ಆ ದಾದಿಯರನ್ನು ಅಡಿಗೆಯವರನ್ನಾಗಿಯಾಗಲಿ ಸೇವಕಿಯರನ್ನಾಗಿಯಾಗಲಿ ನಿಯಮಿಸಿಕೊಳ್ಳಬೇಕು. ನಿಧಿಯ ಕಾರ್ಯಕರ್ತರು ಅವರ ಸಹಕಾರವನ್ನು ಪಡೆಯಲು ಯತ್ನಿಸಬೇಕಲ್ಲದೆ ಅವರಿಗೆ ತಾವು ಇವರ ಸ್ಪರ್ಧಾಳುಗಳೆಂದು ತೋರುವಂತೆ ನಡೆದುಕೊಳ್ಳಬಾರದು.

— ಸುಶಿಲಾ ನಯ್ಯರ

ಮನುಷ್ಯ ಅಥವಾ ಮೃಗ

ಕೂಲಿಯವರು ಸಿಕ್ಕದ ಊರುಗಳಲ್ಲಿ "ಕೆಲಸ ಕಡಿಮೆ ಮಾಡುವ ಯಂತ್ರ"ಗಳನ್ನು ಬಳಸುತ್ತಾರೆ; ಅವು ಕೂಲಿಯವರು ಬಹಳವಾಗಿರುವ ದೇಶಗಳಲ್ಲಿ "ನಿರುದ್ಯೋಗಿ ಪ್ರಾಣಿಗಳ"ನ್ನು ನಿರ್ಮಿಸುತ್ತವೆ. ಮೊದಲು ಶ್ರಮಕಡಿಮೆ ಮಾಡುವ ಸಾಧನಗಳು ಬಂದೊಡನೆ ಕಸಬುದಾರರಿಗೆ ಕೆಲಸವಿಲ್ಲದಂತಾಯಿತು. ಅನಂತರ "ಹಳ್ಳಿಯ ಹುಂಬರು ತಿನ್ನುವ ಹೊಟ್ಟೆ"ಗಾಗಿ ಮನುಷ್ಯನು ಪಶುಗಳೊಡನೆ ಸ್ಪರ್ಧೆಗೆ ನಿಲ್ಲಬೇಕಾಗುತ್ತದೆ.

ಇದು ರಿಕ್ಷಾ ಕೂಲಿಗಳ ಪದ್ಧತಿಯಾಗಿದೆ. ಅವರು ಟಾಂಗಾ ಕುದುರೆಗಳೊಡನೆ ಸ್ಪರ್ಧಿಸಬೇಕಾಗಿದೆ. ಟಾಂಗಾಕ್ಕೆ ಒಂದು ಕುದುರೆ ಒಬ್ಬ ಸಾರಥಿ ಬೇಕಾಗುತ್ತದೆ. ರಿಕ್ಷಾದಲ್ಲಿ ಕುದುರೆಯಿಲ್ಲ; ಕುದುರೆ ಮತ್ತು ಸಾರಥಿ—ಈ ಇಬ್ಬರ ಕೆಲಸವನ್ನೂ ಕಡಿಮೆ ಕೂಲಿಗೆ ರಿಕ್ಷಾವಾಲನೇ ನಿರ್ವಹಿಸುತ್ತಾನೆ. ಹೀಗೆ ಮನುಷ್ಯತ್ವದಿಂದ ಮನುಷ್ಯನು ಪಶುತ್ವಕ್ಕೆ ಬೀಳುತ್ತಾನೆ. ಮನುಷ್ಯನ ದೇಹರಚನೆ ಕುದುರೆಯಂತಿಲ್ಲ. ಆದುದರಿಂದ ಈ ಕೆಲಸದಿಂದ ಅವನೆದೆಗೆ ಬಹಳ ಪೆಟ್ಟಾಗುತ್ತದೆ. ಮತ್ತು ತನ್ನ ಅನ್ನದ ತುತ್ತಿನೊಡನೆ ಜಾಗ್ರತೆಯಾಗಿ ಮಸಣವನ್ನು ಕಾಣುತ್ತಾನೆ.

ಅಂತಹ ಹೀನ ಕಾರ್ಯವನ್ನು ನಡೆಯಲು ಬಿಡುವ ಯಾವ ಸಮಾಜವೇ ಆಗಲಿ ರಾಕ್ಷಸೀ ಕೃತ್ಯಮಾಡಿದ ಅಪರಾಧಕ್ಕೆ ಗುರಿಯಾಗುತ್ತದೆ. ಪ್ರಾಣಿದಯಾಸಂಘಗಳನ್ನು ಜನರು ಸಂಘಟಿಸಿದ್ದಾರೆ; ಆದರೆ ದಾರಿದ್ರ್ಯದ ಒತ್ತಾಯಕ್ಕೊಳಗಾಗಿ ದನಗಳ ಆಹಾರಕ್ಕೆ ಬಾಯಿ ನೀರುಬಿಡುವ ಜನರ ಆರ್ತಸ್ವರವನ್ನು ಕೇಳುವವರಾರೂ ಇಲ್ಲವೆ?

ಕಡೆಯಪಕ್ಷ, ಒಂದಾದರೂ ಸ್ಥಳದಲ್ಲಿ ಸ್ವಾತಂತ್ರ್ಯ ಮೂಡಿಬರುವ ಈ ಕಾಲದಲ್ಲಿ ಸಮಾಜ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ತೊಡಗಿರುವುದು ಸಂತೋಷದ ಸಂಗತಿ.

ಸುಮಾತ್ರದ ಮೇಡಾನ ನಗರದಲ್ಲಿ ಚೀನೀಯರು ಅಲ್ಲಿ ತಿರುಗುತ್ತಿದ್ದ ೯೦ ರಿಕ್ಷಾಗಳನ್ನು ಕೊಂಡು ನಾಶಗೊಳಿಸಿದರು. ಕೂಲಿಗಳಿಗೆ ನೂರು ನಾಣ್ಯಗಳನ್ನಿತ್ತು ಚೀನಾಕ್ಕೆ ಕರೆದೊಯ್ದರು; ಕೆಲವರಿಗೆ ಅಲ್ಲೇ ಬೇರೆಯ ಕೆಲಸ ಕೊಡಿಸಿದರು.

ಮದ್ರಾಸು ನಾಗಪುರಗಳಂತಹ ನಮ್ಮ ರಿಕ್ಷಾಮಯ ಪಟ್ಟಣಗಳು ಅವರಿಂದ ಒಂದು ನೀತಿಪಾಠ ಕಲಿತುಕೊಂಡು ತಮ್ಮಲ್ಲಿ ಸಾಮಾಜಿಕ ಕರ್ತವ್ಯೋದ್ಬೋಧವಾಗಿದೆಯೆಂದು ತೋರಿಸುವರೆ? ಈ ಕುತ್ಸಿತ ಯಾನವನ್ನು ಬಹಿಷ್ಕರಿಸುವುದನ್ನು ಬಿಟ್ಟು ಮದ್ರಾಸು ಅದಕ್ಕೆ ಅಪ್ಪಣೆ ಕೊಡುವ ಸಿದ್ಧತೆ ನಡೆಸಿದೆ. ಇಂತಹ ದುಸ್ಥಿತಿಗೊಳಗಾದ ಮಾನವಕುಲವಿಭಾಗಕ್ಕೆ ಸ್ವರಾಜ್ಯದಿಂದ ಯಾವ ಪ್ರಯೋಜನ ಉಂಟಾದಂತಾಯಿತು?

—ಜೆ. ಸಿ. ಕೆ.

ನೆತ್ತರ ಹಣ

ಮೇ ತಿಂಗಳೊಳಗೆ ೧॥ ಕೋಟಿ ರೂ. ಬೆಲೆ ಬಾಳುವ ಜರ್ಮನ ಕೈಗಾರಿಕೆಯ ಯಂತ್ರಗಳನ್ನು ಯುದ್ಧದಿಂದಾದ ನಷ್ಟವನ್ನು ತುಂಬುವ ಪರಿಸಲುವಾಗಿ ಹಿಂದುಸ್ತಾನವು ತರಿಸಿಕೊಂಡಿದೆಯೆಂದು ಒಂದು ವಾರ್ತಾವಿಭಾಗ ಸಂಕೋಚ ದಿಂದ ತಿಳಿಸುತ್ತದೆ. ಇದು ಪ್ಯಾರಿಸ್ ಸಮ್ಮೇಲನದ ಫಲಿತಾಂಶ.

ಇದು ನಮ್ಮ ಬಗ್ಗೆ ಜರ್ಮನರ ಸದ್ಭಾವನೆ ಬೆಳೆವಂತೆ ಮಾಡುವುದೋ ಇಲ್ಲವೆ ಅಣು ಬಾಂಬಿನ ಧನಿಗಳ ಸಾಮ್ರಾಜ್ಯಶಾಹಿಯ ಸನ್ನಿಧಿಯಲ್ಲಿ ಅವರು ಭಾರತಕ್ಕೆ ಸ್ಥಾನಕೊಡುವಂತೆ ಮಾಡುವುದೋ?

ಜಪಾನಿನಲ್ಲಿ ಯುದ್ಧನಷ್ಟಪೂರ್ತಿಗಾಗಿ ಸಿಗುವ ವಸ್ತುಗಳಲ್ಲಿ ನೂರಕ್ಕೆ ೧೮ ರಷ್ಟು ತನಗೆ ಬೇಕೆಂದು ಭಾರತ ಬೇಡಿದೆಯೆಂದು ಗೊತ್ತಾಗಿದೆ! ಮತ್ತು ಅವುಗಳನ್ನು ಪರಿಶೀಲಿಸಿ ತರುವ ವ್ಯವಸ್ಥೆ ಮಾಡಲು ಇಲ್ಲಿಂದ ನಮ್ಮ "ಉದ್ಯೋಗಿಕ ಸಂಘ"ದವರು ಜಪಾನಿಗೆ ಪ್ರಯಾಣ ಮಾಡಲಿರುವರೆಂದೂ ತಿಳಿದು ಬಂದಿದೆ.

"ಒಳ್ಳೆಯ ನೆರೆಹೊರೆಯವರಯ್ಯಾ!" ಎನಿಸಿಕೊಳ್ಳುವ, ಸ್ವರಾಜ್ಯ ಗಂಗೆಯ ಉಗಮವನ್ನು ಅಪವಿತ್ರಗೊಳಿಸುವ ಇಂತಹ ಕಾರ್ಯಗಳನ್ನು ಈಗಲೇ ಕೈಕೊಳ್ಳುವುದೊಂದು ದುರಂತ ಪ್ರಸಂಗವೇ ಸರಿ.

ಜೆ. ಸಿ. ಕುಮಾರಪ್ಪ

"ತಂಗೀ ಸಾವೆ, ನಿನಗೆ ಸ್ವಾಗತ"

ಆಚಾರ್ಯ ಕೌಶಾಂಬಿ ಮತ್ತು ಚಕ್ರಯ್ಯರು ತೀರಿಹೋದ ಬಳಿಕ ಇತ್ತೀಚೆಗೆ ಗಾಂಧೀಜಿಯು ಎರಡು ಸಂದರ್ಭಗಳಲ್ಲಿ ಸಾವಿನ ಸುದ್ದಿಯನ್ನೆತ್ತಿದ್ದಾರೆ. ಅವರ ಆ ಆಪ್ತಬಂಧುಗಳು ಇಹಯಾತ್ರೆಯನ್ನು ಕೊನೆಗೊಳಿಸುವ ಕಾಲದಲ್ಲಿ ಅವರೊಡನಿದ್ದ ನಮಗೆ ಸಾಮಾನ್ಯ ಮನುಷ್ಯರು ಅಳುವಂತೆ ಅಳದಿರಲು ಶಕ್ತಿಯನ್ನು ಕೊಡುವ ಅವರ ಶ್ರದ್ಧೆಯ ಸಾಮರ್ಥ್ಯದ ಅರಿವಾಗಿದೆ. ಸಾವು ಮಾನವನ ಮಿತ್ರನೆಂದು ಗಾಂಧೀಜಿ ಹೇಳುತ್ತಾರೆ. ಈ ಸಂದರ್ಭದಲ್ಲಿ ಅಸ್ಸಿಸ್ಸಿಯ ಮಹಾತಪಸ್ವಿಯೊಬ್ಬನ ಈ ಕೆಳಗಿನ ಕತೆ ಒಳ್ಳೆಯ ನಿದರ್ಶನವಾಗಬಹುದಾಗಿದೆ:

"ಅವನಿಗೆ ಕಾಹಿಲೆಯಾದಾಗ ಅವನು ಅಸ್ಸಿಸ್ಸಿಯ ಪಾದ್ರಿಗಳ ಅರಮನೆಯಲ್ಲಿದ್ದನು. ಅನೇಕ ಸಲ ದೈವಹಸ್ತವು ಅವನ ಎದೆಯೊತ್ತುವಂತೆ ತೋರಿತು. ರಾತ್ರಿಕಾಲದಲ್ಲಿ ಅವನು ಗತಿಸಿದರೆ ಅವನ ಶರೀರವನ್ನು ಬೇರೆ ನಗರಕ್ಕೆ ಕೆಗೆದೊಯ್ಯುತ್ತಾರೆಂಬ ಹೆದರಿಕೆಯಿಂದ ಅರಮನೆಯ ಗೋಡೆಗಳ ಸುತ್ತ ಕಾವಲುಗಾರರು, ಸದಾ ಎಚ್ಚತ್ತಿರುವಂತೆ ಜನರು ಆಜ್ಞಾಪಿಸಿದರು. ಆದರೆ ಆ ತಪಸ್ವಿಗೆ ಯಾವ ಭಯವೂ ಇರಲಿಲ್ಲ. ಮತ್ತು ತನ್ನನ್ನು ತೀವ್ರ ಹಿಂಸೆಗೆ ಗುರಿಪಡಿಸಿದ ನೋವನ್ನು ಮರೆಯಲು ಹತ್ತಿರಿದ್ದವರಿಗೆ ದೇವರ ನಾಮವನ್ನು ಹಾಡುವಂತೆ ಕೇಳುತ್ತಿದ್ದನು. ಅವನ ಪ್ರಶ್ನೆಗೆ ಉತ್ತರವಾಗಿ ಅವನ ಕಾಹಿಲೆ ಗುಣಪಡಿಸಲಸಾಧ್ಯವಾದುದೆಂದು ಹೇಳಿದೊಡನೆ ಅವನು ದೇವರೇ ಎಂದು ಕೈಯೆತ್ತಿ ಬಹಳ ಭಕ್ತಿಯಿಂದ ಮತ್ತು ತನುಮನತುಂಬಿದ ಸಂಪ್ರಹರ್ಷದಿಂದ—"ತಂಗೀ ಸಾವೇ, ನಿನಗೆ ಸ್ವಾಗತ" ಎಂದನು. ತಂಗಿಯಾದ ಸಾವಿನ ಸಂಕೀರ್ತನ ಮಾಡಿರೆಂದು ಅವನು ಹೇಳಲು ಏಂಜೆಲೊ ಮತ್ತು ಲಿಯೊ ಸಹೋದರರು ಅಸನೆಡೆಗೆ ಬಂದು ಕಂಬನಿಸೂಸುತ್ತ "ಸೂರ್ಯಗೀತ"ವನ್ನೂ ಆತಪಸ್ವಿಯೇ ಮಾಡಿದ ದೈವಲೀಲೆಯನ್ನು ವರ್ಣಿಸುವ ಇನ್ನಿತರ ಹಾಡುಗಳನ್ನು ಹಾಡಿದರು. ಮತ್ತು ಕಡೆಯ ಸೊಲ್ಲು ಸುರುವಾಗುವಷ್ಟರಲ್ಲಿ ಅವನು ಮರಣ ಸಹೋದರಿಯ ವಿಷಯದ ಕೆಲವು ಸಾಲುಗಳನ್ನು ಹೀಗೆ ಸೇರಿಸಿದನು:

"ಸಾವಿನರಸ ನಿನ್ನನೆಲ್ಲ
ನರರು ನುತಿಸಲಿ
ಸಾಯದಿರುವ ಮನುಜನಿರುವ
ನೇನುಬುವಿಯಲಿ?
ಎಲೆಲೆ ನಿನ್ನ ಶುದ್ಧೇಚ್ಛೆಯ
ಮಡಿಲೊಳಿರುವ ನರನೆ ಸುಭಗ,
ಮತ್ತೆ ಸಾವು ಕೆಡಿಸದವನ
ನುತ್ತಮೋತ್ತಮ!
ಜನರೆ, ನನ್ನ ಸಾವಿನರಸ
ನನ್ನು ಹರಸಿರಿ;
ಭಜಿಸಿರೋ ಕೃತಜ್ಞರಾಗಿ
ದೈನ್ಯದೊಂದಿರಿ!"

ಹಿಂದೀ ಒಕ್ಕೂಟ ಎಂತು ವರ್ತಿಸತಕ್ಕದ್ದು?

(೭ನೇ ಪುಟದಿಂದ)

ಜನರು ಒಕ್ಕೂಟದಲ್ಲಿರುವರೆಂದು ನನಗೆ ಹೇಳಲಾಗುತ್ತಿದೆ. ಅನೇಕ ಪವಿತ್ರ ಮುಸಲ್ಮಾನ ಮಸೀದೆಗಳಿರುವವು. ಉಳಿದವುಗಳಂತೆ ಅವುಗಳನ್ನು ಪವಿತ್ರ ಸ್ಥಾನಗಳೆಂದು ನೋಡಲಾಗುವದೊ? ಮುಸಲ್ಮಾನ ವಿದ್ಯಾಪೀಠ ಸಂಬಂಧದಲ್ಲಿಯೂ ಇದೇ ಬಗೆಯಾಗಿ ನೋಡಿಕೊಳ್ಳಲಾಗುವದೊ? ಇಂಥ ವಿಷಯಗಳಲ್ಲಿ ಸಮಂಜಸ ರೀತಿಯಿಂದ ನಡೆದುಕೊಳ್ಳುವದರಲ್ಲಿಯೆ ಹಿಂದುಸ್ತಾನದ ನಿಜವಾದ ಐಕ್ಯ ಅಡಕವಾಗಿದೆ. ಪಾಕಿಸ್ತಾನದಲ್ಲಿ ಏನೇ ಹೇಳಲಿ ಅಥವಾ ಮಾಡಲಿ ಹಿಂದುಸ್ತಾನದ ಮಟ್ಟಿಗೆ ನಾನು ಹೀಗೆ ಹೇಳಬಯಸುತ್ತೇನೆ. 'ಶಠಂ ಪ್ರತಿ ಶಾಠ್ಯಂ' ಎಂಬುದು ಪಾಶವೀ ಇಲ್ಲವೆ ಅನಾಗರಿಕ ಜನರ ತತ್ವ. ಇಂಥ ಜನರದೂ ಒಂದು ಕಾಲ ಇದ್ದಿತು. ಈ ಕಾಡು ಕಾಯಿದೆಗೆ ಜಗತ್ತು ಬೇಸತ್ತು ಹೋಗಿದೆ. ದ್ವೇಷಕ್ಕೆ ಬದಲು ಪ್ರೇಮ, ಅಸತ್ಯಕ್ಕೆ ಬದಲು ಸತ್ಯ, ಅಸಹನೆಗೆ ಬದಲು ಸಹನೆ ಈ ತತ್ವಕ್ಕಾಗಿ ಜಗತ್ತು ಹಾತೊರೆಯುತ್ತದೆ. ನಾಗರಿಕತೆಯು ಈ ನಿಯಮದಂತೆ ಜಗತ್ತು ನಡೆಯುದಿದ್ದರೆ ಅದರ ನಾಶಕ್ಕೆ ಕಾರಣವಾದ ಖಂಡಿತ."

ಅನ್ನ, ಮತ್ತೂ ಅನ್ನ

ಆಹಾರದ ಕೊರತೆಯನ್ನು ನಿವಾರಿಸುವ ಉಪಾಯ ಹೊರಗಿನಿಂದ ಆಯಾತಮಾಡುವುದರಲ್ಲಿಲ್ಲ; ನಮ್ಮ ಬೆಳೆವ ಗದ್ದೆಗಳೇ ನಮಗೆ ಆಗತ್ಯವಾದ ಆಹಾರವನ್ನು ಪೂರಯಿಸುವಂತೆ ಹಂಚಿಕೆ ಮಾಡಬೇಕೆಂದು ನಾವು ಅನೇಕಸಲ ಹೇಳಿದ್ದೇವೆ. ಹೆಚ್ಚು ಬೆಲೆ ಕೊಡುವೆವೆಂದು ಗಿರಣಿದಾರರು ಗದ್ದೆಗಳಲ್ಲಿ ಬೆಳೆವ ಕಚ್ಚಾಮಾಲುಗಳನ್ನು ಕರಿಸಲು ತೀವ್ರ ಪ್ರಯತ್ನ ಮಾಡುತ್ತಿದ್ದಾರೆ. ಇದು ತಪ್ಪು ತಿಳುವಳಿಕೆ. ಹಣ್ಣುಹಣ ಒಬ್ಬನಿಗೆ ಆಹಾರವನ್ನು ಉಣಿಸದು. ಇದು ಅಜ್ಞಾನಿಯಾದ, ಅದೂರದರ್ಶಿಯಾದ ರೈತನನ್ನು ತಪ್ಪುದಾರಿಗೆಳೆದೊಯ್ಯುತ್ತದೆ. ಆಹಾರ ಪುರವಠೆ ಸಾಕಷ್ಟಾದ ಹೊರತು ಹಣಕ್ಕಾಗಿ ಧಾನ್ಯಬೆಳೆಯಲು ಗದ್ದೆಗಳು ಉಪಯುಕ್ತವಾಗದಂತೆ ನೋಡಿಕೊಳ್ಳಬೇಕು. ಧಾನ್ಯಗಳ ಬೆಳೆಯನ್ನು ಸರಕಾರವು ನಿಯಂತ್ರಿಸಬೇಕು. ರೈತರು ತಮ್ಮ ಮನಬಂದಂತೆ ನಡೆಯಲು ಎಡೆಗೊಡಬಾರದು.

ಗಿರಣಿಗಳು

ಸಿಗುವಷ್ಟರಲ್ಲೂ ಕೂಡ ಸೀದಾಧಿಕಾರಿಗಳು ಅಕ್ಕಿಯನ್ನು ಗಿರಣಿಗೆಹಾಕಿಸುವದರಿಂದ ನೂರಕ್ಕೆ ೧೦ ರಷ್ಟು ನಷ್ಟವಾಗುತ್ತದೆ. ಕೈಯಿಂದ ಕುಟ್ಟುವುದನ್ನೇ ಜಾರಿಗೆ ತರಬೇಕು.

ಕಾಡುಗಳು

ಯುದ್ಧಕಾಲದಲ್ಲಿ ಮುಂದೆ ೧೦ ವರ್ಷಗಳಿಗಾಗುವಷ್ಟು ಕಟ್ಟಿಗೆಯನ್ನು ಕಡಿದು ತೆಗೆಯಲಾಯ್ತು. ಈ ಕಾಡಿನ ನಾಶದಿಂದ ಮಳೆ ಮತ್ತು ನೀರಿನ ಪೂರೈಕೆಗೆ ತೊಂದರೆಯುಂಟಾಗುವುದಲ್ಲದೆ ಸುತ್ತುಮುತ್ತಲಿನ ನೆಲ ಸಾಗುವಳಿಗೆ ಬಾರದಂತೆ ಹಾಳಾಗುತ್ತದೆ. ನಾವು ಹೆಚ್ಚಾಗಿ ಕಾಡುಗಳನ್ನು ಬೆಳೆಸುವ ಕಾರ್ಯಮಾಡಬೇಕು. ಈಗಿರುವ ಕಾಡು ಪ್ರದೇಶವನ್ನು ಕೊನೆಯ ಪಕ್ಷ ಎರಷ್ಟಾದರೂ ಹೆಚ್ಚಿಸಬೇಕು.

ಮರುಭೂಮಿ

ವರ್ಷಕ್ಕೆ ೩೦೦ ಚದರ ಮೈಲುಗಳಂತೆ ರಾಜಪುತಾನಾದ ಮರುಭೂಮಿ ಅಗಲವಾಗುತ್ತಿದೆಯೆಂದು ಅರಣ್ಯ ಸಂಶೋಧ ಸಂಸ್ಥೆಯವರು ನಮ್ಮ ಗಮನಕ್ಕೆ ತಂದಿದ್ದಾರೆ. ಇದು ಬಹಳ ತೀವ್ರವ್ಯಥೆಯನ್ನುಂಟುಮಾಡುವ ಸಂಗತಿ. ಇದನ್ನು ಚೆನ್ನಾಗಿ ಪರಿಶೀಲಿಸಿ ನೋಡಬೇಕಾಗಿದೆ. ಆಗಲೆ ಸ್ವಲ್ಪವಾಗಿರುವ ಬೆಳೆವ ಭೂಮಿಯನ್ನು ಮರುಭೂಮಿಯಾಗಬಿಡಲು ಭಾರತಕ್ಕೆ ಸಾಧ್ಯವಿಲ್ಲ.

ಇದರ ಜೊತೆಗೆ ಕೃತಕಗೊಬ್ಬರವನ್ನು ಯುಕ್ತಾಯುಕ್ತ ವಿವೇಕವಿಲ್ಲದೆ ಉಪಯೋಗಿಸುವ ಅಪಾಯವೂ ಸೇರಿದೆ. ಹಾಗೆ ಮಾಡಿದರೆ ಕೆಲವು ವರ್ಷಗಳಲ್ಲಿ ಒಳ್ಳೆಯ ಗದ್ದೆಗಳು ಬಂಜರು ಬೀಳುವಂತಾಗಬಹುದು.

ನಮ್ಮನ್ನೆದುರಿಸುವ ಈ ದುರ್ಭೇದ್ಯ ಪ್ರಶ್ನೆಗಳನ್ನು ಉತ್ತರಿಸಲು ಸರಕಾರವು ಸಂಬಂಧಿಸಿದ ಖಾತೆಯನ್ನು ಒತ್ತಾಯ ಪಡಿಸುವುದೆಂದು ಆಶಿಸುತ್ತೇನೆ.

ದನಕರುಗಳು

ಕಳೆದ ಕೆಲವು ವರ್ಷಗಳಲ್ಲಿ ಪರದೇಶದ ಸೈನಿಕರ ಮತ್ತು ಬಂದಿಗಳ ಆಹಾರಕ್ಕಾಗಿ ಲಕ್ಷಗಟ್ಟಲೆ ದನಕರುಗಳನ್ನು ಕಡಿಯಲಾಯಿತು. ಇದರಿಂದ ಹಾಲಿನ ಕೊರತೆ ಬಹಳ ಹೆಚ್ಚಾಯಿತು. ಉತ್ತಮ ವರ್ಗದ ದನಗಳನ್ನು ಸಾಕುವ ಪದ್ಧತಿಯನ್ನನುಸರಿಸುವ ತೀವ್ರಧೋರಣವನ್ನನುಸರಿಸುವದಲ್ಲದೆ ಹಾಲಿನ ಪುಡಿಯನ್ನು ಆಯಾತ ಮಾಡುವುದು ಇದರ ನಿವಾರಣೆಯ ಮುದ್ದಲ್ಲ. ಉಳುವ ಹೋರಿಗಳ ಕೊರತೆಯನ್ನು ನೀಗಿಸಲು ನಮ್ಮ ಸರಕಾರಗಳು "ಟ್ರ್ಯಾಕ್ಟರ್ಸ್" ಗಳನ್ನು ತರ ಹೋಗುತ್ತವೆ. ಇದರಿಂದ ತಾತ್ಕಾಲಿಕವಾಗಿ ಸ್ವಲ್ಪ ಉಪಯೋಗ ಕಂಡರೂ ಶಾಶ್ವತವಾಗಿ ಈ ಪ್ರಶ್ನೆಯನ್ನು ಎದುರಿಸಲು ಬೇರೆಯ ಮಾರ್ಗವನ್ನೇ ಅನುಸರಿಸಬೇಕಾದೀತು.

—ಜೆ. ಸಿ. ಕುಮಾರಪ್ಪ

ಆಚಾರ್ಯ ಧರ್ಮಾನಂದ ಕೌಶಾಂಬಿ

ಆಚಾರ್ಯ ಧರ್ಮಾನಂದ ಕೌಶಾಂಬಿಯವರು ಹಿಂದುಸ್ತಾನದ ಪ್ರಮುಖ ವಿದ್ವಾಂಸರಲ್ಲಿ ಒಬ್ಬರು. ಬೌದ್ಧ ಧರ್ಮದಲ್ಲಿ ಮತ್ತು ಪಾಲೀಭಾಷೆಯಲ್ಲಿ ಅವರು ವಿಶಿಷ್ಟ ಪ್ರಾವೀಣ್ಯ ಪಡೆದಿದ್ದರು. ಅನೇಕ ವರುಷಗಳ ವರೆಗೆ ಅವರು ಅಮೇರಿಕೆ ಮತ್ತು ಇಂಗ್ಲಂಡದಲ್ಲಿ ಬೌದ್ಧ ವೇದಾಂತದಲ್ಲಿ ಸಂಶೋಧನ ನಡೆಸಿ ಅದರಲ್ಲಿ ಅನೇಕ ಹೊಸ ಹೊಸ ವಿಚಾರಗಳನ್ನು ಹೊರಗೆಡಹಿದರು.

ಕಳೆದ ವರ್ಷದ ಸಪ್ಟಂಬರ, ಇಲ್ಲವೆ ಅಕ್ಟೋಬರ ತಿಂಗಳಲ್ಲಿ ಅವರು ಅಮರಣ ಉಪವಾಸವನ್ನು ಕೈಕೊಂಡರು. ಈ ಜನ್ಮದಲ್ಲಿಯ ತಮ್ಮ ಕೆಲಸವಾಯಿತೆಂದೂ ಅದುದರಿಂದ ಅದನ್ನು ಕೊನೆಗಾಣಿಸಬೇಕೆಂದೂ ಅವರಿಗೆನಿಸಿತು. ಇದರಲ್ಲಿ ಕೈಹಾಕಲು ಅವರ ಭಕ್ತರು ಗಾಂಧೀಜಿಯವನ್ನು ಬಿನ್ನವಿಸಿದರು. ಅಮರಣ ಉಪವಾಸ ಮಾಡುವದರಿಂದ ಅವರ ಮನಸ್ಸನ್ನು ತಿರುಗಿಸಲು ಗಾಂಧೀಜಿ ಯಶಸ್ವಿಯಾದರು. ಆದರೆ ಅವರ ಆರೋಗ್ಯ ಬಹಳ ಕೆಟ್ಟಿದ್ದಿತು. ಅವರಿಗೆ ಯಾವದೂ ಪಚನವಾಗುತ್ತಿರಲಿಲ್ಲ, ಹುರುಳು ಕಟ್ಟಿಗಳ ಬಾಧೆಯಿಂದ ರಾತ್ರಿಯೆಲ್ಲ ನಿದ್ರೆ ಹತ್ತುತ್ತಿರಲಿಲ್ಲ. ಒಳ್ಳೆ ಡಾಕ್ಟರರಿಂದ ಔಷಧ ತೆಗೆದುಕೊಂಡು ಅವರು ಆರೋಗ್ಯ ಸುಧಾರಿಸಿಕೊಳ್ಳಬೇಕೆಂದು ಅವರ ಮಕ್ಕಳ ಅಪೇಕ್ಷೆಯಾಗಿದ್ದಿತು. ಆದರೆ ಅವರು ತಮ್ಮ ಕೊನೆಯ ದಿನಗಳನ್ನು ಸೇವಾಗ್ರಾಮದ ಆಶ್ರಮದಲ್ಲಿ ಕಳೆಯ ಬಯಸಿದರು. ಅಂಥ ಸಮಯದಲ್ಲಿಯೂ ಅವರು ತಮ್ಮ ಮಕ್ಕಳನ್ನು ತಮ್ಮನ್ನು ಕಾಣಲು ಬರಗೊಟ್ಟಿರಲಿಲ್ಲ.

(ಶ್ರೀ ಕಾಕಾಸಾಹೇಬ ಕಾಲೇಲಕರರು ಆಚಾರ್ಯ ಕೌಶಾಂಬಿಯವರ ಪರಮ ಮಿತ್ರರು. ಆಗಾಗ ಅವರನ್ನು ಕಾಣಲು ಬರುತ್ತಿದ್ದರು. ಆ ಇಬ್ಬರೂ ವಿದ್ವಾಂಸರು ಅನೇಕ ವಿಷಯಗಳ ಮೇಲೆ ಚರ್ಚೆ ಮಾಡುತ್ತಿರುವದನ್ನು ಕೇಳುವದು ಒಳ್ಳೆ ಮನೋರಂಜಕವಾಗಿರುತ್ತಿದ್ದಿತು.

ಸೇವಾಗ್ರಾಮ ಆಶ್ರಮದಲ್ಲಿ ಅವರು ಕೆಲ ಸಮಯ ಪಾಶ್ಚಾತ್ಯ ವೈದ್ಯಕದ ಉಪಚಾರ ಹೊಂದಿದರು. ಅನಂತರ ಅವರು ನಿಸರ್ಗ ಚಿಕಿತ್ಸೆಯನ್ನು ಪಡೆಯುತ್ತಿದ್ದರು. ಆದರೆ ಬಾಳಬೇಕೆಂಬ ಇಚ್ಛೆ ಅವರಿಗಿರಲಿಲ್ಲ, ಯಾವ ಔಷಧೋಪಚಾರದಿಂದ ಯಾವ ಸಹಾಯವೂ ಆಗಲಿಲ್ಲ.

ಮರಣಪೂರ್ವದಲ್ಲಿ ಗಾಂಧೀಜಿಯನ್ನು ಕಾಣಬೇಕೆಂದು ಅವರಿಗೆ ಬಲವಾದ ಇಚ್ಛೆಯಿದ್ದಿತು. ಆದರೆ ಗಾಂಧೀಜಿಗೆ ನವಖಾಲಿ ಮತ್ತು ಬಿಹಾರಗಳಲ್ಲಿ ಉಳಿಯಬೇಕಾಯಿತು. ಗಾಂಧೀಜಿ ಹಿಂದಿನಸಲ ದಿಲ್ಲಿಗೆ ಬಂದಾಗ ತಮ್ಮನ್ನು ದಿಲ್ಲಿಗೆ ಕರೆದುಕೊಂಡು ಹೋಗಿ ಮರಳಿ ಆಶ್ರಮಕ್ಕೆ ತರಲು ನನಗೆ ಕೇಳಿಕೊಂಡರು. ಅವರ ಸಲುವಾಗಿ ಏನೇ ಮಾಡುವದು ದೊಡ್ಡ ಗೌರವದ ಮಾತೆಂದು ನಾವೆಲ್ಲ ಭಾವಿಸಿದೆವು. ಅವರನ್ನು ದಿಲ್ಲಿಗೆ ಕರೆತರಲು ನಾನು ಗಾಂಧೀಜಿಯ ಅಪ್ಪಣೆ ಪಡೆದೆ. ಆದರೆ ಕೊನೆಯ ಗಳಿಗೆಯಲ್ಲಿ ಅವರು ತಮ್ಮ ವಿಚಾರವನ್ನು ಬದಲಿಸಿದರು. 'ನನ್ನೀ ಅನಾರೋಗ್ಯ ಸ್ಥಿತಿಯಲ್ಲಿ ಬಾಪೂಜಿಗೆ ಏಕೆ ತೊಂದರೆ ಕೊಡಬೇಕು? ಎಂದು ವಾದಿಸಿದರವರು. "ಅವರನ್ನು ನೋಡುವದೇ ನನ್ನ ಭಾಗ್ಯವಾಗಿದ್ದರೆ, ನನ್ನ ಆರೋಗ್ಯವಾದರೂ ಸುಧಾರಿಸುವದು ಇಲ್ಲವೆ ಅವರಾದರೂ ಇಲ್ಲಿಗೆ ಬರುವರು" ಆದರೆ ಎರಡೂ ಘಟನೆಗಳು ಸಂಭವಿಸಲಿಲ್ಲ ಅವರು ೪ನೇ ತಾರೀಖು ಅತ್ಯಂತ ಶಾಂತ ಮನಸ್ಕರಾಗಿ ದೇಹತ್ಯಾಗ ಮಾಡಿದರು. ಅವರ ಕೊನೆಯ ಕ್ಷಣಗಳನ್ನು ಆಶ್ರಮವಾಸಿಗಳೊಬ್ಬರು ಇಂತು ವರ್ಣಿಸಿದ್ದಾರೆ.

"ಮುಂಜಾನೆ ೧೦ ಗಂಟೆಗೆ ಕಾಕಾಸಾಹೇಬರು ಬಂದು ಅವರೊಡನೆ ಮಾತಾಡಿದರು. ಅವರು ಲಕ್ಷ್ಯಪೂರ್ವಕವಾಗಿ ಕೇಳಿಕೊಂಡು ಸಂಜ್ಞೆಗಳಿಂದ ಉತ್ತರ ಕೊಟ್ಟರು. ತಮ್ಮನ್ನು ಕಾಣಲು ಮಗ ಮತ್ತು ಮಗಳಿಗೆ ಅಪ್ಪಣೆ ಕೊಡಿರೆಂದು ಕಾಕಾಸಾಹೇಬರು ಅವರನ್ನು ಬಿನ್ನವಿಸಿಕೊಂಡರು. ಆದರೆ ಅವರೊಪ್ಪಲಿಲ್ಲ. ಅನಂತರ ಅವರು ಮೈಒರೆಸಿಕೊಂಡರು ಅನಂತರ ಪ್ರಾರ್ಥನವನ್ನು ಕರೆಯಲು ಹೇಳಿದರು. ಹೊರಗೆ ಅವರು ಕಾಲಿಡುವಂತೆಯೆ ತೋರಿತು. ಅನಂತರ ಅವರು, ಶಂಕರಜೀಯವರ ಕೈಹಿಡಿದುಕೊಂಡು ಅವರ ಆಧಾರ ಮಸ್ಕಿಸುವಂತೆ ಒಡನ್ನು ಕೆಲ ಮಟ್ಟಿಗೆ ಒತ್ತಿದರು. ಅವರು ಕೂಡಲೆ ಶಾಂತಚಿತ್ತರಾಗಿ ಪ್ರಾಣತ್ಯಾಗ ಮಾಡಿದರು. ಎಲ್ಲಿಯೂ ಮುಖದ ಇಲ್ಲವೆ ವಿಚಿತ್ರತೆ ಕಂಡುಬರಲಿಲ್ಲ- ನಮ್ಮೊಬ್ಬ ಸ್ನೇಹಿತ ಸಹಕಾರಿಯು ಯಾತ್ರೆಗಾಗಿ ಹೊರಟಂತೆ ತೋರಿತು.

"ಸಾಯಂಕಾಲ ೫-೩೦ ಗಂಟೆಗೆ ಅಂತ್ಯವಿಧಿ ಮುಗಿಯಿತು. ಕಾಕಾಸಾಹೇಬ, ವಿನೋಬಾ ಮತ್ತು ಎಲ್ಲ ಸಂಸ್ಥೆಗಳ ನಿವಾಸಿಗಳು ಉಪಸ್ಥಿತರಾಗಿದ್ದರು. ಕಾಕಾಸಾಹೇಬರು ಕೌಶಾಂಬಿಯವರ ಜೀವನ ಮತ್ತು ಕಾರ್ಯದ ಬಗ್ಗೆ ಅಂತ್ಯವಿಧಿಯ ನಂತರ ಕೆಲ ಮಾತುಗಳನ್ನು ಹೇಳಿದರು. ಇಂಥ ಮರಣವನ್ನಿಚ್ಛಿಸುವದು ಕ್ವಚಿತ್ತಾಗಿ ಮಾತ್ರ. ಮರಣವನ್ನು ಮಿತ್ರನಂತೆ ಹೇಗೆ ಸ್ವಾಗತಿಸಬೇಕೆಂಬ ಬಗ್ಗೆ ಅವರು ಉದಾಹರಣೆಯನ್ನು ಹಾಕಿ ಕೊಟ್ಟಿರುವರು. ಕೌಶಾಂಬಿಯವರಂತೆ ವಿರಕ್ತಿ ಭಾವವನ್ನು ನಾವೆಲ್ಲ ತಾಳಿ ನಗೆನಗುತ್ತ ಮರಣವನ್ನಪ್ಪಿಕೊಳ್ಳಲು ಸಮರ್ಥರಾಗಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದರು."

ಗಾಂಧೀಜಿಯವರು ೫ ನೇ ತಾರೀಖು ಪ್ರಾರ್ಥನೋತ್ತರ ಸಭೆಯಲ್ಲಿ ಆಚಾರ್ಯ ಕೌಶಾಂಬಿಯವರ ಮರಣವನ್ನುಲ್ಲೇಖಿಸುತ್ತ ಹೀಗೆ ಹೇಳಿದರು.

"ಪ್ರಸಿದ್ಧ ಬುದ್ಧ ಧರ್ಮಾಭಿಮಾನಿಗಳೂ ವಿದ್ವಾಂಸರೂ ಆಗಿದ್ದ ಆಚಾರ್ಯ ಕೌಶಾಂಬಿಯವರ ಮರಣದ ದುಃಖದಾಯಕ ವಾರ್ತೆಯನ್ನು ತಿಳಿಸಲು ನನಗೆ ವಿಷಾದವೆನಿಸುತ್ತದೆ. ಅವರು ಪ್ರಸಿದ್ಧ ಪಾಲೀ ವಿದ್ವಾಂಸರಾಗಿದ್ದರು. ಪಾಲೀ ವಿದ್ವಾಂಸರೆಂದು ಅವರು ಅಮೇರಿಕೆಯಲ್ಲಿ ಕೆಲಸ ಮಾಡಿದ್ದರು. ಅವರು ತಮ್ಮ ವಿದ್ವತ್ತೆಯ ಪ್ರಭಾವದಿಂದ ಬಹಳ ಹಣ ಗಳಿಸಬಹುದಾಗಿದ್ದರೂ ಅವರು ಸೇವಾ ಮಾರ್ಗವನ್ನು ವಹಿಸಿ ಅಸಹಕಾರ ಯುಗದಲ್ಲಿ ಪ್ರಾರಂಭಿಸಲ್ಪಟ್ಟಿದ್ದ, ಗುಜರಾಥ ವಿದ್ಯಾಪೀಠವನ್ನು ಸೇರಿದ್ದರು, ಅವರು ತಮ್ಮ ಕೊನೆಯ ದಿನಗಳನ್ನು ಸೇವಾಗ್ರಾಮ ಆಶ್ರಮದಲ್ಲಿ ಕಳೆದರು. ಅತ್ಯಂತ ಸಮರ್ಥರಾದ ಡಾಕ್ಟರರು, ಆ ವಿದ್ವಾಂಸರನ್ನು ಉಪಚರಿಸಲು ಆನಂದದಿಂದ ಒಪ್ಪಬಹುದಾಗಿತ್ತು. ಅವರು ತಮ್ಮ ಮಾತೃಭೂಮಿಯಾದ ಗೋವೆಗೆ ಹೋಗಬಹುದಾಗಿತ್ತು. ಅವರಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇರುವರು. ಅವರಿಬ್ಬರು ದೊಡ್ಡ ಸಂಬಳದವರು. ಆದರೆ ಆಚಾರ್ಯರು ಸಂನ್ಯಾಸಿಯಂತಿರಬಯಸಿದರು. ಆಶ್ರಮವಾಸಿಗಳಿಂದಲೂ ಯಾವ ಸೇವೆಯನ್ನು ತೆಗೆದುಕೊಳ್ಳಲು ಅವರು ಒಪ್ಪಲಿಲ್ಲ. ಆದರೆ ಅವರ ಸೇವೆ ಮಾಡುವದು ತಮಗೊಂದು ಬಗೆಯ ಮರ್ಯಾದೆಂದು ಆಶ್ರಮವಾಸಿಗಳೆಲ್ಲ ಅವರಿಗೆ ಮನವರಿಕೆ ಮಾಡಿಕೊಟ್ಟ ನಂತರ ಅವರು ಆಶ್ರಮದ ಶಾಂತ ವಾತಾವರಣದಲ್ಲಿ ಕೊನೆಯ ದಿನಗಳನ್ನು ಕಳೆಯಲು ಒಪ್ಪಿಕೊಂಡರು. ಆಶ್ರಮದಲ್ಲಿರುವಾಗ ಅವರು ಸಾಮಾನ್ಯವಾಗಿ ಉಪೋಷಣ ಮಾಡಿದಂತೆಯೆ ಇರುತ್ತಿದ್ದರು. ತಮ್ಮ ಜೀವನದಲ್ಲಿ ಬುದ್ಧತತ್ವಗಳನ್ನವರು ಆಳವಾಗಿ ಅಳವಡಿಸಿಕೊಂಡಿದ್ದರು. ಆದುದರಿಂದಲೆ ಮರಣ ಒಳ್ಳೆ ವಿಶ್ವಾಸಿಕ ಮತ್ತು ತಪ್ಪದಗೆಳೆಯ ಮತ್ತು ಮುಕ್ತಮಾಡುವ ಮಂತ್ರಿ ಎಂದು ಅವರು ಭಾವಿಸಿದ್ದರು. ಆದುದರಿಂದ ಅವರು ಆಶ್ರಮವಾಸಿಗಳಲ್ಲಿಯ ತಮ್ಮ ಜೀವನ ಸುಗಂಧವನ್ನು ಬೀರಿದರು ತಾವು ಮರಣ ಹೊಂದಿದ ಬಳಿಕ ಯಾವದೇ ಬಗೆಯ ಆಡಂಬರ ಮುಂತಾದ್ದು ಬೇಡ ಎಂದು ಅವರ ಇಚ್ಛೆ ಇದ್ದಿತು. ಪಾಲೀ ಭಾಷೆಯನ್ನು ಕಲಿತು ಬುದ್ಧಧರ್ಮ ಪ್ರಚಾರ ಕೈಕೊಳ್ಳುವವರನ್ನು ಸಿಲೋನಕ್ಕೆ ಕಳಿಸಿ ವಿದ್ಯಾಭ್ಯಾಸ ಮಾಡಿಸಲು ಶಿಷ್ಯವೃತ್ತಿಯನ್ನು ಇಲ್ಲವೆ ಶಿಷ್ಯವೃತ್ತಿಗಳನ್ನು ಕೊಡಬೇಕೆಂಬುದು ಅವರ ಒಂದೇ ಒಂದು ಇಚ್ಛೆ ಇದ್ದಿತು.

ಹೊಸದಿಲ್ಲಿ ಸುಶೀಲಾ ನಯ್ಯರ
೮-೬-೪೭

ಸಂಸ್ಥಾನಗಳು ಎತ್ತ ಸಾಗಿವೆ

(೭ನೇ ಪುಟದಿಂದ)

ಹಾಗಿದ್ದರೆ ಅಂದರೆ ಹಿಂದೀ ಒಕ್ಕೂಟದಿಂದ ಹೊರಗುಳಿಯದಾರದಾಗಿದ್ದರೆ— ಹೆಚ್ಚು ಕುಸಂಗತ ಶಬ್ದಗಳಲ್ಲಿ— ಸಿಡಿದುನಿಲ್ಲುವದು ಹಿಂದುಸ್ತಾನವನ್ನು ತುಂಡರಿಸುವದೆಂದು ಈ ಸಂಸ್ಥಾನ ನಿಶ್ಚಿತವಾಗಿ ಭಾವಿಸಲಾರದು. ರಾಜಕೀಯ ದೃಷ್ಟಿಯಿಂದ ಹಿಂದುಸ್ತಾನ ಏಕೀಕೃತವಾಗಿದ್ದಾಗ ತ್ರಾವಣಕೋರ ಸ್ವತಂತ್ರವಾಗಿದ್ದಿತು. ಇದೀಗ ಕೇವಲ ಧಾರ್ಮಿಕ ಕಾರಣಗಳಿಗಾಗಿ ಹಿಂದುಸ್ತಾನದ ವಿಭಜನೆಯಾಗುತ್ತಿರುವಾಗ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರಂಥವರು ಮುಸ್ಲಿಂ ಲೀಗು ಹಾಕಿಕೊಟ್ಟ ಈ ಕೆಟ್ಟ ಉದಾಹರಣೆಯನ್ನು ಅನುಸರಿಸಿ ಪೂರ್ಣ ಅನ್ಯಾಯದ ಈ ವಿಭಜನೆಗೆ ಅಷ್ಟೊಂದು ಮಹತ್ವ ಕೊಡಬೇಡಿರೆಂದು ಮಹಾರಾಜರಿಗೆ ಬೋಧಿಸಬಹುದೆಂದು ತಾವು ಆಶಿಸಿದ್ದಾಗಿ ಗಾಂಧೀಜಿ ಹೇಳಿದರು

ಜನಮತವನ್ನು ತೆಗೆದುಕೊಂಡಿದ್ದಾದರೆ ತ್ರಾವಣಕೋರದಲ್ಲಿಯ ಕ್ರಿಶ್ಚನ್ನರು ಮತ್ತು ಅಸ್ಪೃಶ್ಯರನ್ನೊಳಗೊಂಡ ಹಿಂದುಗಳೆಲ್ಲ ಸರ್ ಸಿ. ಪಿ. ಯವರ ಸ್ವತಂತ್ರ ತ್ರಾವಣಕೋರದ ವಿಚಿತ್ರ ವಿಚಾರದ ವಿರುದ್ಧ ಮತಕೊಡುವರೆಂದು ಧೈರ್ಯದಿಂದ ಹೇಳಬಲ್ಲೆನೆಂದು ಗಾಂಧೀಜಿ ಹೇಳಿದರು. ಸರ್ ಸಾಹೇಬರು ಸ್ವತಂತ್ರ ತ್ರಾವಣಕೋರದ ತಮ್ಮ ಈ ವಿಚಿತ್ರ ವಿಚಾರದಲ್ಲಿ ಅವರು ಬ್ರಿಟಿಶರ ಸಾರ್ವಭೌಮತ್ವವನ್ನು ಒಪ್ಪಿ ಹಿಂದೀ ಜನತೆಯ ಒಕ್ಕೂಟದ ಸಾರ್ವಭೌಮತ್ವವನ್ನು ಒಪ್ಪುವದಿಲ್ಲ. ಸರ್ ಸಿ. ಪಿ. ಯವರ ದುರ್ದೈವದಿಂದ ತಮ್ಮ ಬಿನ್ನಹ ಮತ್ತು ತರ್ಕಸರಣಿಯನ್ನು ಮನ್ನಿಸಲು ಸಮರ್ಥರಾಗದಿದ್ದರೆ ಉಳಿದ ಸಂಸ್ಥಾನಿಕರಲ್ಲಿಯಾದರೂ ಹಿಂದುಸ್ತಾನದ ಜನತೆಯ ಗೂಡ- ಇದರಲ್ಲಿ ಸಂಸ್ಥಾನದ ಪ್ರಜೆಗಳೂ ಸಮಾವಿಷ್ಟರಾಗುವರೆಂದು ನಿರಾತಂಕದಿಂದ ಅಂಜಿಕೆಯಿಲ್ಲದೆ ಹೇಳಬಹುದು- ಕೂಡಿಕೊಂಡು ಧ್ಯೇಯಸಾಧಿಸಿಕೊಳ್ಳುವ ಸುಸ್ಪಷ್ಟ ವಿವೇಕೋದಯವಾಗುವದೆಂಬ ಆಸೆಯನ್ನು ಪ್ರದರ್ಶಿಸಿದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಮಾತಾಡುತ್ತ ಗಾಂಧೀಜಿ ಹೇಳಿದರು.

ಸಂಸ್ಥಾನಗಳಲ್ಲಿ ಕೈಹಾಕಬೇಡಿರೆಂದು ನಾನು ಹೇಳುತ್ತಿದ್ದ ಕಾಲವೊಂದು ಇದ್ದಿತು. ಆ ಕಾಲಕ್ಕೆ ನಾವು ಮೂರನೇ ರಾಷ್ಟ್ರದ ಗೂಢ ಭೀಕರ ಯುದ್ಧದಲ್ಲಿ ತೊಡಗಿದ್ದೆವು. ಇದೀಗ ಕಾಲ ಬದಲಾಗಿದೆ. ಹಿಂದುಸ್ತಾನ ಸ್ವಾತಂತ್ರ್ಯದ ಹೊಸ್ತಿಲಿನಲ್ಲಿದೆ. ಹೈದರಾಬಾದ ಮತ್ತು ತ್ರಾವಣಕೋರ ಸಂಸ್ಥಾನಗಳು ಸ್ವತಂತ್ರ ಸಂಸ್ಥಾನಗಳಾಗಬೇಕೆಂದು ಮಾತಾಡಹತ್ತಿವೆ. ಇಂಥ ಮಾತು ನಿರುಪಯುಕ್ತ. ಘಟನಾ ಸಮಿತಿಯನ್ನು ಸೇರಲು ನಿರ್ಧರಿಸಿದ ಬಹುಸಂಖ್ಯ ಸಂಸ್ಥಾನಗಳನ್ನು ನಾನು ಅಭಿನಂದಿಸುತ್ತೇನೆ. ಅವರು ಮನಃಪೂರ್ವಕವಾಗಿ ಘಟನಾ ಸಮಿತಿಯನ್ನು ಸೇರಿದ್ದಾದರೆ ಸೇವಕರು ಮತ್ತು ಧರ್ಮದರ್ಶಿಗಳೆಂದು ಅವರು ಪೂರ್ಣ ಸುರಕ್ಷಿತರಾಗಿರುವರು. ಕಾಲಕ್ಕೆ ತಕ್ಕಂತೆ ಅವರು ನಡೆಯತಕ್ಕದ್ದು.

"ಬ್ರಿಟಿಶರ ಗುಲಾಮರಂತಿದ್ದ ಸಂಸ್ಥಾನಿಕರು ಹಿಂದೀ ಒಕ್ಕೂಟದಲ್ಲಿ ಸನ್ಮಾನ್ಯ ಸ್ಥಾನವನ್ನು ಪಡೆಯುವದನ್ನು ಬಿಟ್ಟುಗೊಟ್ಟು ಸ್ವತಂತ್ರವಾಗಬೇಕೆಂದು ಬಯಸುವದಂತು ಆಶ್ಚರ್ಯಕರವಾಗಿದೆ. ಒಕ್ಕೂಟವೇನು ಸಂಸ್ಥಾನಿಕರಿಗೆ ಶತ್ರುವಲ್ಲ. ಆದರೆ ಇಂದು ಅಧಿಕಾರ ಸೂತ್ರಗಳು ಜನತೆಯ ಕೈಯಲ್ಲಿ ಬಂದಾಗ ಇಡೀ ಹಿಂದುಸ್ತಾನದ ಕಲ್ಯಾಣವನ್ನು ಅತ್ಯಂತ ದಕ್ಷತೆಯಿಂದ ಸಾಧಿಸಬೇಕು. ರಕ್ಷಿಸಬೇಕು. ಸಂಸ್ಥಾನ ಪ್ರಜೆಗಳು ನಮಗೆ ಅನುಕೂಲರಿರುವರು. ಸಂಸ್ಥಾನಿಕರು ಸ್ವತಂತ್ರರಾದರೆ ಸಂಸ್ಥಾನ ಪ್ರಜೆಗಳ ಸ್ವಾತಂತ್ರ್ಯವನ್ನು ಹತ್ತಿಕ್ಕಿಯೇ ಆಗತಕ್ಕದ್ದು. ಹಿಂದುಸ್ತಾನದ ಬಗ್ಗೆ ನನಗೆ ಇದ್ದ ಅನುಭವದಿಂದ ಹೇಳುವದಾದರೆ ಅಂಥ ಪರಿಸ್ಥಿತಿಯನ್ನು ಎಂದಿಗೂ ಸಹಿಸಲಾಗದು. ವಿಧಿ ಲಿಖಿತವನ್ನು ಸಂಸ್ಥಾನಿಕರು ತಿಳಿದುಕೊಳ್ಳಲಿಕ್ಕೆಬೇಕು."

ವಾರದ ಪತ್ರ

[೩ನೇ ಪುಟದಿಂದ]

ಸಾಹೇಬರ ರಾಷ್ಟ್ರದ್ವಯ ಪ್ರಮೇಯವನ್ನು ನಿರಸನಗೊಳಿಸಬಲ್ಲರು."

ಪಾಕಿಸ್ತಾನದ ಅಲ್ಪಸಂಖ್ಯಾಕರು

ಅತ್ಯಂತ ಸಂಕಟಗ್ರಸ್ತವಾದ ರಾವಳಪಿಂಡಿಯಿಂದ ಕೆಲ ಮುಸ್ಲಿಮೇತರರು ಗಾಂಧೀಜಿಯನ್ನು ಕಾಣಬಂದಿದ್ದರು. ಸ್ವಾಭಾವಿಕವಾಗಿ ಗಾಂಧೀಜಿ ಅವರೊಡನೆ, ಈಗೇನು ಪಾಕಿಸ್ತಾನ ಕಟ್ಟಿಟ್ಟಂತಾದುದರಿಂದ ಅವರ ಸುತ್ತಮುತ್ತಲಿನ ಮುಸ್ಲಿಮರ ನಡೆವಳಿಯಲ್ಲಿ ಏನಾದರೂ ಹೆಚ್ಚು ಕಡಿಮೆ ಕಾಣಸುತ್ತದೆಯೋ, ಎಂದು ಕೇಳಿದರು. ಹೆಚ್ಚು ಕಡಿಮೆಯೇನೋ ನಿಶ್ಚಯವಾಗಿಯೂ ಆಗಿದೆ, ಆದರೆ ಅದು ಮೊದಲಿಗಿಂತ ಕೆಟ್ಟ ತರಗತಿಗಿಳಿದುದೇ ಹೆಚ್ಚು ಕಡಿಮೆಯೆಂದು ಅವರಿಂದ ಕೇಳಿ ಗಾಂಧೀಜಿ ಅವಾಕ್ಕಾದರು.

"ಈ ವರದಿ ಅತಿ ರಂಜಿತವೆಂದೂ ಅದು ಕೇವಲ ಸುಳ್ಳೆಂದೂ ನಿಜವಾಗಿ ಮುಸ್ಲಿಮರು ಹಿಂದುಗಳೊಡನೆಯೂ ಸೀಖರೊಡನೆಯೂ ಇತರರೊಡನೆಯೂ ಗೆಳೆತನ ಬೆಳೆಸಲು ಅತಿಶಯ ಪ್ರಯತ್ನ ಮಾಡುತ್ತಿದ್ದಾರೆಂದೂ ಸತ್ಯವಾಗಿ ಯಾರಾದರೂ ಹೇಳುವವರಿದ್ದರೆ ನನಗೆಷ್ಟು ಆನಂದವಾದೀತು" ಎಂದರು ಗಾಂಧೀಜಿ.

ಕಾಂಬೆಲ್ಲಪುರದಿಂದ ಬಂದ ಕೆಲ ಗೆಳೆಯರು ತಾವು ಕ್ಯಾಂಬೆಲಪುರದಲ್ಲಿ ಸುರಕ್ಷಿತವಾಗಿ ಬಾಳಬಲ್ಲೆವೇನೆಂದು ಕೇಳಿದರು. ಗಾಂಧೀಜಿ ತಮಗಂತೂ ಮನುಷ್ಯ ಮಾತ್ರದ ಭಯವಿಲ್ಲ. ಪಾಕಿಸ್ತಾನಕ್ಕಂತೂ ಹೆದರುವದೆ ಇಲ್ಲ, ಏಕೆಂದರೆ ದೇವರೊಬ್ಬನಿಗೇ ತಾವು ಭಯಪಡುವವರು ಎಂದರು. ಅದು ಕಾರಣ ಆ ಗೆಳೆಯರು ಪಾಕಿಸ್ತಾನಕ್ಕೆ ಸೇರಿದ ಪ್ರದೇಶದಲ್ಲಿದ್ದಾಕ್ಷಣ ತಮ್ಮ ಸುರಕ್ಷಿತತೆಯ ಬಗ್ಗೆ ಚಿಂತಾಕ್ರಾಂತರಾಗಬೇಕಾಗಿಲ್ಲೆಂದೂ ಅವರು ಆಶ್ವಾಸನ ಕೊಟ್ಟರು. ಆದರೆ ಅವರ ಆಶ್ವಾಸನೆಯಿಂದ ಬಂದವರ ಮೇಲೆ ಪರಿಣಾಮವಾದಂತೆ ಕಾಣಲಿಲ್ಲ. ಪಾಕಿಸ್ತಾನದಲ್ಲಿ ಉಳಿಯಬೇಕಾಗಿ ಬಂದ ಬೇರೆ ಎಷ್ಟೋ ಮುಸ್ಲಿಮೇತರರಂತೆ ಅವರೂ ಭೀತರಾಗಿದ್ದರು. ಅದು ಕಾರಣ ಅವರನ್ನು ಮನಗಾಣುವಂತೆ ಸಂತೈಸಿ ಭಯನಿವಾರಣೆ ಮಾಡುವ ಭಾರ ಜಿನ್ನಾ ಸಾಹೇಬರಿಗೂ ಬೇರೆ ಮುಸ್ಲಿಂ ಲೀಗ್ ಮುಂದಾಳುಗಳಿಗೂ ಸೇರಿದ್ದೆಂದು ಗಾಂಧೀಜಿ ಹೇಳಿದರು.

ಗಡಿನಾಡು

ಕಾಯದೆ ಆಝಮ ಜಿನ್ನಾ ಸಾಹೇಬರು ತಮ್ಮ ಅಂತರಂಗವನ್ನೆಲ್ಲ ಬಿಚ್ಚಿ ತೋರಿಸಬೇಕೆಂದೂ ಹಾಗಾದರೆ ಮುಸ್ಲಿಂ ಬಹುಸಂಖ್ಯಾಕರ ಆಳಿಕೆ ಅಥವಾ ಪಾಕಿಸ್ತಾನವೆಂದು ಅವರು ಹೇಳುತ್ತಿರುವದರ ಅರ್ಥವೇನೆಂದು ಜಗತ್ತಿಗೆ ತಿಳಿದೀತೆಂದೂ ಗಾಂಧೀಜಿ ಸೂಚಿಸಿದರು.

"ವಾಯವ್ಯ ಗಡಿನಾಡು ಪ್ರಾಂತದಲ್ಲಿ ಮತಗಣನೆಯಾಗುವದಂತೆ. ನನ್ನನ್ನು ಕೇಳಿದರೆ ಜಿನ್ನಾ ಸಾಹೇಬರು ಗಡಿನಾಡ ಮಂತ್ರಿಗಳನ್ನೂ ಬಾದಶಾಖಾನರನ್ನೂ ಇತರ ಖುದಾಯಿ ಖಿದ್ಮತಗಾರರನ್ನೂ ಭೆಟ್ಟಿಯಾಗಿ ಅವರು ಪಾಕಿಸ್ತಾನದಲ್ಲಿ ಏಕೆ ಸೇರಬೇಕೆಂದು ತಿಳಿಯಹೇಳಬೇಕು. ಕರಾರುಗಳು ಆಕರ್ಷಕವಾಗಿದ್ದರೆ ಗಡಿನಾಡ ಗೆಳೆಯರಿಗೆ ಪಾಕಿಸ್ತಾನದಲ್ಲಿ ಸೇರಿ ಪಠಾಣಸ್ತಾನವನ್ನು ಇದ್ದಂತೆ ಇರಗೊಡಿಸಬಹುದಾದರೆ ಪಠಾಣ ಪಠಾಣರಲ್ಲಿ ತಿಕ್ಕಾಟವೊದಗುವುದನ್ನು ತಪ್ಪಿಸಲು ಗಡಿನಾಡು ಮುಸ್ಲಿಂ ಬಹುಸಂಖ್ಯಾಕ ರಾಜ್ಯಗಳ ಸಂಯುಕ್ತ ಘಟನೆಯಲ್ಲಿ ಸೇರುವದೊಳಿತೆಂದು ನಾನು ಗಡಿನಾಡಿನ ಗೆಳೆಯರಿಗೆ ಸೂಚಿಸಲು ಹಿಂದೆ ಮುಂದೆ ನೋಡಲಿಕ್ಕಿಲ್ಲ. ಪಠಾಣರನ್ನು ಮತಗಣನೆಗೋಸ್ಕರ ಇಬ್ಬಣವಾಗಿ ಒಡೆಯುವದು ಖಂಡಿತ ಒಳಿತಲ್ಲ"

ಬರಿ ಕಾಗದದ ಚೂರು


ಇನ್ನಾದರೂ ಹಿಂದೂಗಳೂ ಮುಸ್ಲಿಮರೂ ಸೀಖರೂ ಎಲ್ಲ ಜಾತಿ ಪಂಥಗಳೂ ಒಂದಾಗಿ ವಾಯಿಸರಾಯರ ಜೂನ ೩ರರ ಪ್ರಕಟನೆಯನ್ನು ಬರಿ ಕಾಗದದ ಚೂರೆಂದು ಪರಿಗಣಿಸಿ ಆ ಬಗ್ಗೆ ಮುಂದಿನ ಕ್ರಮಗಳನ್ನು ನಿಲ್ಲಿಸುವದು ಸಾಧ್ಯವಿದೆಯೆಂದು ಗಾಂಧೀಜಿ ಹೇಳಿದರು. ನಿಜವಾಗಿ ಅದು ಕಾಂಗ್ರೆಸ್ ಲೀಗುಗಳ ನಡುವಣ ಒಪ್ಪಂದದ ಸೂಚಕವಾಗಿಲ್ಲ. ಹಿಂದುಸ್ತಾನದ ವಿಭಜನೆಯಲ್ಲಿ ತಾವು ಮನಃಪೂರ್ವಕ ಭಾಗವಹಿಸುವಂತಿಲ್ಲವೆಂದು ಕಾಂಗ್ರೆಸ ಮುಂದಾಳುಗಳು ಸ್ಪಷ್ಟಗೊಳಿಸಿದ್ದಾರೆ. ಕಾಯಿದೆ ಆಝಮ ಜಿನ್ನಾರಾದರೂ ಬಂಗಾಲ ಪಂಜಾಬಗಳ ವಿಭಜನೆಯಾಗಬೇಕಾಗಿರುವದರಿಂದ ಅದರಲ್ಲಿ ಅಷ್ಟು ಸಂತುಷ್ಟರಾಗಿಲ್ಲ. ಯಾವ ದೆಸೆಯಲ್ಲಿ ನೋಡಿದರೂ ಇಂದು ನಮ್ಮನ್ನು ಬಳಸಿರುವ ಕಗ್ಗತ್ತಲೆಯಲ್ಲಿ ಇನ್ನಾದರೂ ತಿಕ್ಕಾಟ ರಕ್ತಪಾತಗಳಾಗದಂತೆ ಬೆಳಕು ತೋರಲು ಎಲ್ಲ ಪಕ್ಷಗಳಿಗೂ ಒಂದಾಗಿ ಸಂಯುಕ್ತ ಯೋಜನೆಯೊಂದನ್ನು ರೂಪಿಸುವದೊಂದೇ ಉಪಾಯವೆಂದು ನನಗನಿಸುತ್ತಿದೆಯೆಂದು ಅವರು ಹೇಳಿದರು.

ಹೊಸದಿಲ್ಲಿ
೧೫—೬—೪೭ —ಸುಶಿಲಾ ನಯ್ಯರ

ವಂಗಭಂಗದ ನಿರ್ಣಯ
ಶಾಸನ ಸಭೆಯ ತೀರ್ಮಾನ

ತಾ. ೨೦ ಕ್ಕೆ ಕಲಕತ್ತೆಯಲ್ಲಿ ಸೇರಿದ ಬಂಗಾಲ ಶಾಸನ ಸಭೆಯ ವಿಭಕ್ತ ಅಧಿವೇಶನದಲ್ಲಿ ಬಂಗಾಲ ವಿಭಜನೆಯಾಗಬೇಕೆಂದು ನಿರ್ಣಯಿಸಲ್ಪಟ್ಟಿತು.

ಮೊದಲು ಇಡಿ ಶಾಸನ ಸಭೆ ಸೇರಿ ಬಂಗಾಲ ಈಗಿರುವ ಘಟನಾ ಸಮಿತಿಯಲ್ಲಿರಬೇಕೋ ಹೊಸ ಘಟನಾ ಸಮಿತಿಯಲ್ಲೋ ಎಂಬ ಬಗ್ಗೆ ಮತಗಣನೆಯಾಯಿತು. ೧೨೬ ವಿರುದ್ಧ ೯೦ ಮತದಿಂದ ಹೊಸ ಘಟನಾ ಸಮಿತಿಗೆ ಸೇರಬೇಕೆಂದು ನಿರ್ಣಯವಾಯಿತು. ಆ ಮೇಲೆ ಪಶ್ಚಿಮ ಮತ್ತು ಪೂರ್ವ ಬಂಗಾಲಗಳ ಸದಸ್ಯರ ಸಭೆಗಳು ಬೇರೆಬೇರೆಯಾಗಿ ಸೇರಿದವು. ಪಶ್ಚಿಮ ಬಂಗಾಲ ಭಾಗದವರು ೫೮ ವಿರುದ್ಧ ೨೧ ಮತಗಳಿಂದ ವಿಭಜನೆಯಾಗಬೇಕೆಂದು ನಿರ್ಧರಿಸಿದರು. ಲೀಗ್ ಸದಸ್ಯರು ಮಾತ್ರ ವಿರೋಧಿಸಿದರು. ಆಂಗ್ಲೋ ಇಂಡಿಯನ್ನರು ಕಾಂಗ್ರೆಸ್ಸಿನೊಡನೆ ಮತವಿತ್ತರು. ಪಶ್ಚಿಮ ಬಂಗಾಲದವರು ಅಷ್ಟೇ ಮತಗಳಿಂದ ಈಗಿರುವ ಘಟನಾ ಸಮಿತಿಯಲ್ಲಿ ಸೇರಲು ನಿರ್ಧರಿಸಿದರು. ಪೂರ್ವ ಬಂಗಾಲ ಬಹುಸಂಖ್ಯೆಯಿಂದ ವಿಭಜನೆಯ ವಿರುದ್ಧ ಮತವಿತ್ತಿತು. ಆದರೆ ವಿಭಜನೆ ಇದರಿಂದ ನಿಲ್ಲುವದಿಲ್ಲ. ಆಸಾಮದ ಸಿಲ್ಹಟ ಜಿಲ್ಲೆ ಪೂರ್ವ ಬಂಗಾಲದಲ್ಲಿ ಸೇರಬಯಸಿದರೆ ಸೇರಿಸಿಕೊಳ್ಳುವ ನಿರ್ಣಯವೂ ಆಯಿತು.



ಶ್ರೀ ಪದ್ಮನಾಭ ಭೀಮರಾವ ಪದಕಿ



ಮುಂಬಯಿಯ ಕರ್ನಾಟಕ ಬ್ರಾಹ್ಮಣ ಶಿಕ್ಷಣ ಸಂಸ್ಥೆಯ ಶಿಷ್ಯವೃತ್ತಿಯನ್ನು ಪಡೆದು ಶ್ರೀ ಪದಕಿಯವರು ಮುಂಬಯಿ ವಿಶ್ವವಿದ್ಯಾಲಯದ ಬಿ. ಎಸ್ ಸಿ. (ಟೆಕ್ನಾಲಜಿ) ಕೆಮಿಕಲ್ ಎಂಜಿನಿಯರಿಂಗ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವರು. ಇವರು ಹುಬ್ಬಳ್ಳಿಯ ನ್ಯೂ ಇಂಗ್ಲಿಶ್ ಸ್ಕೂಲಿನಿಂದ ಮ್ಯಾಟ್ರಿಕ್ ಪಾಸಾಗಿ ಕರ್ನಾಟಕ ಕಾಲೇಜಿನಿಂದ ಬಿ ಎಸ್ ಸಿ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದರು.

ಧಾರವಾಡ

ಹುಬ್ಬಳ್ಳಿಯ ತರುಣ ವಕೀಲರೂ ನಗರಸಭೆಯ ಸ್ಥಾಯೀ ಸಮಿತಿಯ ಚೇಅರಮನ್‌ರೂ ಆಗಿರುವ ಶ್ರೀ ಎಸ್. ಜಿ. ಮಗಜೀಕೊಂಡಿ ಬಿ. ಎ. ಎಲೆಲ್. ಬಿ ಇವರು ಮುದ್ದೇಬಿಹಾಳದಲ್ಲಿ ರೆಸಿಡೆಂಟ ಮ್ಯಾಜಿಸ್ಟ್ರೇಟರಾಗಿ ನೇಮಕ ಹೊಂದಿರುವರು.

ಬೆಂಗಳೂರಿನ ತಾಯಿನಾಡು ಪತ್ರಿಕೆಯ ಸಂಚಾಲಕರಾದ ಶ್ರೀ ಪಿ. ಆರ್. ರಾಮಯ್ಯ ಇವರು ದಿಲ್ಲಿ, ಮುಂಬಯಿ, ಬೆಳಗಾವಿಗಳಿಗೆ ಹೋಗಿ ೧೫ ನೇ ತಾರೀಕು ಮಧ್ಯಾಹ್ನ ಹುಬ್ಬಳ್ಳಿಗೆ ಬಂದರು. ಹುಬ್ಬಳ್ಳಿಯಲ್ಲಿಯ ಗೆಳೆಯರನ್ನು ಭೆಟ್ಟಿಯಾಗಿ ಮರುದಿನ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ಮೈಸೂರಿನ ರಾಜಕಾರಣದ ಸಂಬಂಧದಲ್ಲಿ ಅವರು ದಿಲ್ಲಿಯಲ್ಲಿ ಪ್ರಮುಖರೊಡನೆ ವಿಚಾರವಿನಿಮಯ ಮಾಡಿದರು.

ಕರ್ಜಗಿಯ ಶ್ರೀ ಕೃಷ್ಣಮೂರ್ತಿ ಏರಿ ಇವರು ತಮ್ಮ ಲಗ್ನದ ಕಾಲಕ್ಕೆ ಕರ್ನಾಟಕ ಬ್ರಾಹ್ಮಣ ಎಜ್ಯುಕೇಶನ ಸೊಸಾಯಿಟಿಗೆ ೧೦೧ ರೂಪಾಯಿಗಳ ಸಹಾಯವಿತ್ತಿದ್ದಾರೆ.

ಕರ್ನಾಟಕದ ಗಡಿಗಳಲ್ಲಿ ಆಂಧ್ರ ಮಹಾರಾಷ್ಟ್ರ ಮತ್ತು ಕೇರಳರು ಬಗೆ ಬಗೆಯಿಂದ ಆಕ್ರಮಣ ಮಾಡುವದನ್ನೆಲ್ಲ ನಿಷೇಧಿಸುವದಕ್ಕಾಗಿ ೧೫ ಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಶ್ರೀ ರಾ ಶ್ರೀ ಹುಕ್ಕೇರಿಕರ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಪ್ರೊ. ಜಾಗೀರದಾರರು ನಿಷೇಧದ ಗೊತ್ತುವಳಿಯನ್ನು ಮಂಡಿಸಿದರು. ಶ್ರೀ ಬೆಟಗೇರಿಯವರು ಅನುಮೋದನವನ್ನಿತ್ತರು. ಭಟಕಳ ಬಂದರದ ಅಭಿವೃದ್ಧಿಗೆ ವ್ಯತ್ಯಯ ಬರುವಂತೆ ನಡುಗಾಲ ಸರಕಾರದವರು ಮತ್ತೊಂದು ಸಮಿತಿಯನ್ನು ನೇಮಿಸಿದ್ದನ್ನು ನಿಷೇಧಿಸಲಾಯಿತು.

ಮೋಟೆಬಿನ್ನೂರಲ್ಲಿ ಇತ್ತಿತ್ತಲಾಗಿ ಗಿಣ್ಣೀ ರೋಗವು ಬಹಳ ಜನರಲ್ಲಿ ಪ್ರಸಾರವಾಗಹತ್ತಿದೆ ಈ ರೋಗ ಅಂಟುರೋಗ ಇರುವದರಿಂದ ಇನ್ನೂ ಹೆಚ್ಚು ಜನರು ಇದಕ್ಕೆ ಬಲಿಬೀಳುವ ಸಂಭವವಿದ್ದುದರಿಂದ ಆರೋಗ್ಯಾಧಿಕಾರಿಗಳು ಇತ್ತ ಲಕ್ಷ್ಯ ಕೊಡಬೇಕೆಂದು ಓರ್ವರು ಕೇಳಿಕೊಂಡಿದ್ದಾರೆ.

ಬೆಳಗಾವಿ

ಬೆಳಗಾವಿ ನಗರಸಭೆಯ ಇಬ್ಬರು ಸದಸ್ಯರನ್ನು ಅಪಹರಿಸಿಕೊಂಡು ಹೋದಪ್ರಕರಣದಲ್ಲಿ ೭ ಜನರನ್ನು ಸೆರೆಹಿಡಿದಿರುವರಷ್ಟೇ. ಅವರಿಗೆ ಪೋಲೀಸರು ಬೇಡಿಹಾಕಿ ಹಗ್ಗದಿಂದ ಕಟ್ಟಿ ಹುರಂಗಳ್ಕೆ ಒಯ್ದುದ್ದನ್ನು ಬೆಳಗಾವಿ ನಗರಸಭೆಯ ಪುರೋಗಾಮಿಪಕ್ಷ ನಿಷೇಧಿಸಿತು. ಈಗ ಪಾರಿಶೆಪ್ವಾ ಕೇರಿ ಇವರನ್ನು ಜಾಮೀನಮೇಲೆ ಬಿಡುಗಡೆ ಮಾಡಲಾಗಿದೆ.

ಬೆಳಗಾವಿಯಲ್ಲಿ ಮಜಲಿ— ಯಾಳಗಿ— ಜೋಶಿ ಸ್ಮಾರಕ ನಿಧಿಗೆ ಈ ವರೆಗೆ ೭೮೯೩ ರೂಪಾಯಿಗಳು ಕೂಡಿವೆ. ಆಕ್ಟೋಬರದೊಳಗಾಗಿ ಉಳಿದವರೆಲ್ಲ ತಮ್ಮ ಕಾಣಿಕೆಗಳನ್ನು ಕೊಡಬೇಕಾಗಿ ಕಾರ್ಯಾಧ್ಯಕ್ಷರಾದ ಶ್ರೀ ಗೋಖಲೆಯವರು ಬಿನ್ನವಿಸುತ್ತಾರೆ.

ವಿಜಾಪುರ

ವಿಜಾಪುರದ ಪಿ ಡಿ ಜೆ ಹಾಯಸ್ಕೂಲಿನಲ್ಲಿ ನಡೆಸಿದ ಸ್ಪೆಶಲ್ ಸಂಸ್ಕೃತ ವರ್ಗದ ಪರೀಕ್ಷೆಗಳಲ್ಲಿ ೧ ನೇ ಮತ್ತು ೨ ನೆ ನಂಬರ ಪಡೆದ ಎಸ್. ಜಿ. ಕುಲಕರ್ಣಿ ಮತ್ತು ಎಚ್. ಎನ್. ದೇಶಪಾಂಡೆ ಮತ್ತು ಮ್ಯಾಟ್ರಿಕದಲ್ಲಿ ೫೧೫ ಗುಣಗಳನ್ನು ಪಡೆದು ಶಾಲೆಗೆ ಮೊದಲು ನಂಬರ ಬಂದ ಎಸ್. ಕೆ. ಅವಧಾನಿ ಎಂಬವನಿಗೂ ಪಾರಿತೋಷಕ ಕೊಡುವ ಸಮಾರಂಭ ಶ್ರೀ ವೆಂ. ಭಿ. ನಾಯಿಕರ ಅಧ್ಯಕ್ಷತೆಯಲ್ಲಿ ಶನಿವಾರ ೧೪ ಕ್ಕೆ ಜರಗಿತು. ಶಾರೀರಿಕ ಶಿಕ್ಷಣದಲ್ಲಿ ಪ್ರಾವೀಣ್ಯ ಪಡೆದ ವಿದ್ಯಾರ್ಥಿಗೆ ಪ್ರತಿವರುಷ ೨೦ ರೂ. ಕೊಡುವದಾಗಿ ಶ್ರೀ ನಾಯಕರು ಜಾಹೀರ ಪಡಿಸಿದರು.

ಬದಾಮಿ ತಾಲೂಕ ಸ್ಪೆಶಲ್ ಮಾಮಲೇದಾರ ಶ್ರೀ ಸಾವಳಗಿಯವರು ಅನಧಿಕೃತ ರೇಶನಿಂಗ ಪದಾರ್ಥಗಳನ್ನು ಬದಾಮಿಯಿಂದ ವಿಜಾಪುರಕ್ಕೆ ತರುವ ಕಾಲಕ್ಕೆ ಅದೇ ಟ್ರಕ್ಕಿನಲ್ಲಿ ಬದಾಮಿ ತಾಲೂಕಿನ ಸಪ್ಲಾಯ ಅಸಿಸ್ಟಂಟ ಶ್ರೀ ಕೊಲ್ಹಾರ ಇವರು ಇದ್ದರೂ ತಮ್ಮ ಕರ್ತವ್ಯ ಪಾಲನೆಯನ್ನು ಯೋಗ್ಯವಾಗಿ ಮಾಡದಿರುವ ಬಗ್ಗೆ ಜಿಲ್ಹಾಧಿಕಾರಿಗಳು ಅವರನ್ನು ಸಸ್ಪೆಂಡ ಮಾಡಿದ್ದಾರೆ.

ಇದೇ ಸಂದರ್ಭದಲ್ಲಿ ಡಿ. ಎಸ್. ಪಿ. ಯವರು ಶ್ರೀ ಕೊಟ್ಟಿಯವರನ್ನು ಹಿಂಬಡತಿ ಮಾಡಿರುವರೆಂದೂ ತಿಳಿಯುತ್ತದೆ.

ವಿಜಾಪುರದ ಕರ್ನಾಟಕ ವೈಭವದ ಸಂಪಾದಕರೂ ತರುಣ ವಕೀಲರೂ ಆಗಿದ್ದ ಶ್ರೀ ವೆಂಕಟರಾವ ತಿಳಗೂಳ ಇವರು ೧೫ ನೇ ತಾರೀಕು ಸಾಯಂಕಾಲ ೪ ಗಂಟೆಗೆ ಸಿವಿಲ್ ಅಸ್ಪತ್ರೆಯಲ್ಲಿ ಮರಣಹೊಂದಿದರು. ಅವರಿಗೆ ವಯಸ್ಸು ಕೇವಲ ೩೮ ಇದ್ದಿತು. ಕಾಮಿಣೆಯಿಂದ ಅವರು ಹಲ ದಿನಗಳಿಂದ ಹಾಸಿಗೆ ಹಿಡಿದಿದ್ದರು.

ದೇವರ ಹಿಪ್ಪರಗಿಯ ಪ್ರಸಿದ್ಧ ಜಮೀನದಾರರೂ ಲೋಕಪ್ರಿಯರೂ ಆಗಿದ್ದ ಶ್ರೀ ಕೃಷ್ಣಪ್ಪಾ ನಾಯಕ ಇವರು ೧೪ ನೇ ತಾರೀಕು ಸಾಯಂಕಾಲ ಅಕಸ್ಮಾತ್ತಾಗಿ ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮರಣ ಕಾಲಕ್ಕೆ ಇವರಿಗೆ ೬೧ ವರುಷಗಳಾಗಿದ್ದವು. ಪರಮಾತ್ಮನು ಇವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ. ಇವರು ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಮೋಹರೆ ಹಣಮಂತರಾಯರ ಅಣ್ಣಂದಿರು.

ಅಲಮಟ್ಟಿಯ ವೀರಶೈವ ವಿದ್ಯಾಲಯದಲ್ಲಿ ಜೂನ ತಿಂಗಳಿಂದ ಸಂಸ್ಕೃತ ಪಾಠಶಾಲೆ ಪ್ರಾರಂಭವಾಗಿದೆ ಶ್ರೀ ಮಹಾಂತಸ್ವಾಮಿ ಪಟ್ಟದ ದೇವರು ವಿದ್ಯಾರ್ಥಿಗಳಿಗೆ ಭೋಜನ ವ್ಯವಸ್ಥೆಯನ್ನೇರ್ಪಡಿಸಿದ್ದಾರೆ. ಕಾವ್ಯತೀರ್ಥ ಪರೀಕ್ಷೆಯವರೆಗೆ ಶಿಕ್ಷಣ ಕೊಡಲಾಗುವದು.

ಬಳ್ಳಾರಿ

ಬಳ್ಳಾರಿ ನಗರದ ಸೆಂಟ್ರಲ್ ಕೋ ಅಪರೇಟಿವ ಸ್ಟೋರದಿಂದ ಕಳೆದೆರಡು ತಿಂಗಳಲ್ಲಿ ೨೫ ಪೌಂಡಿನ ೧೩ ಹಾಲಿನ ಪುಡಿಯ ಡಬ್ಬಿಗಳು ಮಾಯವಾಗಿದ್ದವು ಹೊಟೆಲಗಳನ್ನು ಅವುಗಳೊಡೆಯರ ಮನೆಗಳನ್ನು ಪರಿಶೋಧಿಸಿ ೯೩ ಹಾಲಿನ ಡಬ್ಬಿಗಳನ್ನು ಜಪ್ತಮಾಡಿದರು ಸಂಜೆಗೆ ಎಂಟು ಜನ ಹೊಟೆಲ್ ಒಡೆಯರನ್ನು ಇಬ್ಬರು ಗುಮಾಸ್ತರನ್ನೂ ಇನ್ಸ್ಪೇಕ್ಟರನನ್ನೂ ಬಂಧಿಸಿರುವರು.

ಹೊಸದಾಗಿ ಪುನರ್ಘಟಿತವಾದ ಚಿತ್ರದುರ್ಗ ಜಿಲ್ಹಾ ಬೋರ್ಡಿಗೆ ಕೆ. ಕೆಂಚಪ್ಪ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ನಾಲ್ಕು ಜನರು ಹುರಿಯಾಳಾಗಿದ್ದರು.

ಬೆಳಗಾವಿಯ ಶ್ರೀ ಗೋಖಲೆ ಕೇಶವರಾಯರು ವಿಶ್ರಾಂತಿಗಾಗಿ ೩ ತಿಂಗಳ ವಿಜಾಪುರದಲ್ಲಿ ಉಳಿಯುವರು.

ಗುರ್ಲಹೊಸೂರ ಮೂಲ ಶಿಕ್ಷಣ ಕೇಂದ್ರಕ್ಕೆ ಡಿ. ಎ. ಇ. ಓ. ಎ. ಗುಡಿಸಾಗರ ಮತ್ತು ಕೆ. ಬಿ. ಅಂಗಡಿಯವರು ೧೬ ನೇ ತಾರೀಕು ಭೆಟ್ಟಿಕೊಟ್ಟು ಮನಮೆಚ್ಚುವ ರೀತಿಯಲ್ಲಿ ಮೂಲ ಶಿಕ್ಷಣದ ಮಹತ್ವವನ್ನು ತಿಳಿಸಿ ಹೇಳಿದರು.

ಉತ್ತರ ಕನ್ನಡ

ಮಳೆಗಾಲದಲ್ಲಿ ಎಲ್ಲರಿಗೂ ಅತ್ಯವಶ್ಯವಾಗಿ ಬೇಕಾಗುವ ಕೊಡೆಗಳನ್ನು ಪಟ್ಟಣಗಳಲ್ಲಿ ಸೀದಾ ಕಾರ್ಡಿನವರಿಗೆ ಎರಡರಂತೆ ಮತ್ತು ಹಳ್ಳಿಯವರಿಗೆ ಒಂದರಂತೆ ಕೊಡಬೇಕೆಂದು ಜಿಲ್ಹಾ ಮ್ಯಾಜಿಸ್ಟ್ರೇಟರು ವಿಧಿಸಿದ್ದಾರೆ. ಕೊಡೆಗಳ ನಿರ್ಯಾತದ ಮೇಲೆಯೂ ನಿರ್ಬಂಧ ಹೇರಲಾಗಿದೆ.

ಶ್ರೀ ಡಿ. ಅಬೂಬಕರ ಮತ್ತು ಇಸ್ಮಾಯಿಲ್‌ಸಾ. ಮುಂಬಯಿ ಇವರು ಭಟಕಳದ ಮಜಲೀಸ ಧರ್ಮಾರ್ಥ ವಾಚನಾಲಯಕ್ಕೆ ೧೪೦೦ ರೂಪಾಯಿ ಬೆಲೆ ಬಾಳುವ ಬಾನುಲಿಯನ್ನು ದಾನವೆಂದು ಕೊಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಹೆಯಲ್ಲಿ ಒಟ್ಟು ೧೫ ಕಿಸಾನ ಕಾರ್ಯಕರ್ತರು ಬಂಧಿಸಲ್ಪಟ್ಟಿರುವರು ಇಲ್ಲವೆ ಗಡಿ ಮಾಡಲ್ಪಟ್ಟರುವರು. ಇವರೆಲ್ಲರಿಗೆ ಹಕ್ಕ ಸೌಕರ್ಯಗಳನ್ನು ಕೊಡುವ ಬಗ್ಗೆ ಕಮ್ಯುನಿಷ್ಟ ಪಕ್ಷದ ಕಾರ್ಯದರ್ಶಿಗಳು ಬಿನ್ನವಿಸಿಕೊಂಡಿರುವರು.

ಕುಮಟೆಯಲ್ಲಿ ಕ್ಯಾನರಾ ಕಾಲೇಜಿನ ಅಡಿಗಲ್ಲನ್ನಿಡುವ ಸಮಾರಂಭ ಡಾ. ಬಾಳಿಗಾ ಇವರ ಅಧ್ಯಕ್ಷತೆಯಲ್ಲಿ ಜರುಗಿತ್ತು. ಇವರು ಹುಬ್ಬಳ್ಳಿಗೆ ಹೋಗಿ ಅಲ್ಲಿಂದ ಮುಂಬಯಿಗೆ ತೆರಳಿದರು. ಹುಬ್ಬಳ್ಳಿಯಲ್ಲಿ ಗೌಡ ಸಾರಸ್ವತ ಸಮಾಜದವರು ಅವರನ್ನು ಡಾ. ಎನ್. ಎಂ. ಕಾಮತರ ಮನೆಯಲ್ಲಿ ಸತ್ಕರಿಸಿದರು.

ಜಿಲ್ಹೆಯಲ್ಲಿ ಅಕ್ಕಿ ಸೀದಾ ೧೦೦ಕ್ಕೆ ೨೦ ರಷ್ಟು ಕಡಮೆ ಮಾಡಲಾಗಿದೆ ಇನ್ನು ಮೇಲೆ ಪ್ರತಿಯೊಬ್ಬ ಪ್ರೌಢನಿಗೆ ೧೫ ದಿನಗಳಿಗೆ ೫ ಸೇರುಗಳ ಬದಲು ೪ ಸೇರು ಅಕ್ಕಿ ಕೊಡಲಾಗುವದು. ಉಳಿದ ಒಂದು ಸೇರು ಬೇರೆ ಧಾನ್ಯ ಕೊಡಲಾಗುವದು.

ಉತ್ತರ ಕನ್ನಡ ಜಿಲ್ಹೆಯಲ್ಲಿ ರೈತ ಜಮೀನದಾರರಲ್ಲಿ ಒಂದುಬಗೆಯ ತಿಕ್ಕಾಟವುಂಟಾದಂತಾಗಿದೆ. ಜಮೀನದಾರರು ಸ್ವತಃ ಸಾಗು ಮಾಡಲು ಪ್ರಾರಂಭಿಸಿದ ಹೊಲಗಳಲ್ಲಿ ರೈತ ಸಂಘದ ಒಕ್ಕಲಿಗರು ರಾತ್ರಿಯಲ್ಲಿ ಗರಗಿನ ಬೀಜ ಬಿತ್ತುತ್ತಾರಂತೆ. ಜಮೀನದಾರರು ಪ್ರತಿಯಾಗಿ ತೋಟ ಪಟ್ಟಿಗಳಲ್ಲಿನ ಕಾಯಿ ಕೊಯ್ಯಿಸಿ ಒಕ್ಕಲಿಗರನ್ನು ಹಾನಿಗೊಳಿಸುವರಂತೆ. ಇಬ್ಬರ ತಿಕ್ಕಾಟದಲ್ಲಿ ಬೆಳೆಗೆ ಹಾನಿ ಮಾತ್ರ.

ಉತ್ತರ ಕನ್ನಡ ಜಿಲ್ಹೆಯಲ್ಲಿ ಇದೇ ಜೂನದಿಂದ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಗ್ರಾಮಗಳಲ್ಲೆಲ್ಲ ಒತ್ತಾಯದ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಗುವದಿತ್ತು. ಆದರೆ ಈಗ ಆ ಯೋಜನೆ ಬೇಡೆಂದು ಸರಕಾರದವರು ವಿಧಿಸಿರುವರಂತೆ.

ಕನ್ನಡ ಸಂಸ್ಥಾನ


ದಕ್ಷಿಣ ಸಂಸ್ಥಾನದ ಪರವಾಗಿ ಘಟನಾ ಸಮಿತಿಗೆ ಆರಿಸಲ್ಪಡುವ ಒಂದು ಸ್ಥಳಕ್ಕೆ ೮ ಜನ ಉಮೇದವಾರರು ನಾಮಪತ್ರಗಳನ್ನು ಕೊಟ್ಟಿದ್ದಾರೆ. ಶ್ರೀ. ಹ. ಪಾಟೀಲ ಡಿ. ಬಿ. ಟಂಕಸಾಲಿ, ಶ್ರೀಮಂತ ಅಪ್ಪಾಸಾಹೇಬ ಪಂತ, ಎಂ. ಎಚ್. ಗೋಡಬೋಲೆ, ಪಾಟಣಕರ, ಎಸ್. ಆರ್. ಬೋಸಲೆ, ಬಿ. ಎಸ್. ಮುನವಳ್ಳಿ ಮತ್ತು ಸರಪೋತನೀಸ ಇವರು ಹುರಿಯಾಳುಗಳಾಗಿದ್ದಾರೆ.

ಜಮುಖಂಡಿಗೆ ಬೆಳಗಾವಿ ಸಾಂಗಲಿ ಮೊದಲಾದ ಸಂಸ್ಥಾನಗಳಿಂದ ಮೂರು ನಾಲ್ಕು ದಿನಗಳಿಂದ ಮುಸಲ್ಮಾನರು ಗುಂಪುಗಟ್ಟಿಕೊಂಡು ಬರುತ್ತಿರುವರೆಂದೂ ಮಸೀದೆಯಲ್ಲಿ ಗುಪ್ತ ಸಭೆಗಳನ್ನು ಕೂಡಿಸುತ್ತಿರುವರೆಂದೂ ಇದರಿಂದ ಜನರು ಭಯಭೀತರಾಗಿರುವರೆಂದೂ ಜಮುಖಂಡಿಯ ನಮ್ಮ ಸುದ್ದಿಗಾರರಿಂದ ತಿಳಿಯುತ್ತದೆ. ಸಾಬಡೆಯವರ ಕೊಲೆ ಮತ್ತು ಶ್ರೀ ಎಸ್ ಎಂ ಅಥಣಿ ಇವರಿಗೆ ಕೊಲೆಯ ಬೆದರಿಕೆ ಹಾಕಿದ್ದರಿಂದಲೂ ಜನರು ಭೀತರಾಗಿದ್ದಾರೆ.

ಮುಂಬಯಿ ಮುಖ್ಯಮಂತ್ರಿಗಳಾದ ಖೇರ ಸಾಹೇಬರೂ ಈ ಬಗ್ಗೆ ಕೂಡಲೆ ವಿಚಾರಣೆಯಾಗಬೇಕೆಂದು ಅಭಿಪ್ರಾಯ ಪಟ್ಟಿರುವರು.

ದಿವಂಗತ ಸಾಬಡೆಯವರ ಕೊಲೆಯ ಸಂಬಂಧದ ವಿಚಾರಣೆಯನ್ನು ಬೇಗ ಮಾಡಬೇಕೆಂದು ರೆಸಿಡೆಂಟ ಸಾಹೇಬರಿಗೆ ಜಮುಖಂಡಿ ಪ್ರಜಾ ಪರಿಷತ್ತಿನ ಉಪಾಧ್ಯಕ್ಷ ಡಾ. ಹುಲ್ಯಾಳಕರ ಅವರು ಬರೆದಿರುವದಾಗಿ ತಿಳಿಯುತ್ತದೆ.

ಕಬ್ಬೂರ ದಂಪತಿಗಳ ಪರದೇಶ ಪ್ರಯಾಣ



ಮುಂಬಯಿಯಲ್ಲಿಯ ಪ್ರಮುಖ ಬಣ್ಣದ ವ್ಯಾಪಾರಸ್ಥರೂ ಕನ್ನಡನಾಡಿನ ಮಾನ್ಯ ನಾಗರಿಕರೂ ಆಗಿರುವ ಶ್ರೀ ಕೃಷ್ಣರಾವ ಕಬ್ಬೂರ ಮತ್ತು ಅವರ ಧರ್ಮಪತ್ನಿ ಶ್ರೀ ಸೋನೂಬಾಯಿ ಕಬ್ಬೂರ ಇವರು ಇದೇ ತಿಂಗಳ ೧೪ ನೇ ತಾರೀಕಿಗೆ ಇಂಗ್ಲಂಡ ಮತ್ತು ಪರದೇಶಗಳಲ್ಲಿ ನಾಲ್ಕು ತಿಂಗಳವರೆಗೆ ಸಂಚಾರ ಮಾಡಲು ಮುಂಬಯಿಯಿಂದ ಹೊರಟರು. ಕರ್ನಾಟಕ ಮಿತ್ರವೃಂದವೆಲ್ಲ ತಮ್ಮನ್ನಾಶೀರ್ವದಿಸಬೇಕೆಂದು ಅವರು ಕೋರಿರುವರು.

ಕೊಲ್ಹಾಪುರ ರಾಜ್ಯ ಘಟನೆಯನ್ನು ಧಿಕ್ಕರಿಸಿ ಇದನ್ನು ನಿಷೇಧಿಸಲು ಜೂನ ೨೩ ಕ್ಕೆ ಹರತಾಳ ಆಚರಿಸಬೇಕೆಂದು ಕೊಲ್ಹಾಪುರ ಸಂಸ್ಥಾನ ಪ್ರಜಾಪರಿಷತ್ತಿನ ಕಾರ್ಯಕಾರೀ ಸಮಿತಿಯಲ್ಲಿ ಗೊತ್ತುವಳಿ ಸ್ವೀಕೃತವಾಯಿತು.

ಶಿವಮೊಗ್ಗಿ ಜಿಲ್ಹಾ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ಸ್ವತಂತ್ರ ಪಕ್ಷದ ಹುರಿಯಾದ ಶ್ರೀ ಡಿ ಪರಮೇಶ್ವರಪ್ಪ ಇವರು ಆರಿಸಿ ಬಂದಿರುವರು. ಕಾಂಗ್ರೆಸ್ ಪಕ್ಷದ ಹುರಿಯಾಳುವು ಆರಿಸ್ಸಿಬರಲಿಲ್ಲ.

ಕೊಲ್ಹಾಪುರದ ನಗರ ಸಭಾಮಂದಿರದ ಮಧ್ಯದಲ್ಲಿ ಪೊಟ್ಯಾಸಿಯಂ ಕ್ಲೋರಾಯಡದಿಂದ ಒಂದು ಗಿಡವನ್ನುರುಳಿಸುವ ಪ್ರಯತ್ನಮಾಡಿದರೆಂದು ಮೂವರು ವಿದ್ಯಾರ್ಥಿಗಳನ್ನು ಸೆರೆಹಿಡಿಯಲಾಗಿದೆ. ಸ್ಫೋಟಕ್ಕಾಗಿ ಒಬ್ಬ ವಿದ್ಯಾರ್ಥಿಗೆ ಗಾಯಗಳಾಗಿದ್ದವು.

ಹೊಳಲ್ಕೆರೆಯಲ್ಲಿ ಮಲ್ಲಾಡಿಹಳ್ಳಿ ಮಾದಣ್ಣ ಹೈಸ್ಕೂಲಿನ ಆರಂಭೋತ್ಸವ ವಿದ್ಯಾಭ್ಯಾಸ ಇಲಾಖಾ ಅಧ್ಯಕ್ಷರಾದ ಶ್ರೀ ಆರ್ ಕಸ್ತೂರ ರಾಜಶೆಟ್ಟಿಯವರ ಹಸ್ತದಿಂದ ಜರಗಿತು.



ಮುಂಬಯಿ

ಹರಿಜನ ಮತ್ತು ಹಿಂದುಳಿದ ವರ್ಗಗಳ ಹಾಗು ಮುಸಲ್ಮಾನ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಇಂತಿಷ್ಟು ಸ್ಥಳಗಳನ್ನು ಕಾಯ್ದಿರಿಸಬೇಕೆಂದು ಮುಂಬಯಿ ಸರಕಾರವು ಆಜ್ಞಾಪಿಸಿದ್ದಾರೆ. ಶೇಕಡಾ ೧೫ ರಷ್ಟು ಸ್ಥಳಗಳನ್ನು ಮುಸಲ್ಮಾನರಿಗೆ ಮತ್ತು ೭.೫ ರಷ್ಟು ಸ್ಥಳಗಳನ್ನು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಕಾಯ್ದಿಡಬೇಕೆಂದು ವಿಧಿಸಿದ್ದಾರೆ.

ಮುಂಬಯಿ ಪ್ರಾಂತದಲ್ಲಿ ಇನ್ನೆರಡು ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ನಿರ್ಧಾರವನ್ನು ಅಧಿಕಾರಿಗಳು ಅಭಿಪ್ರಾಯ ಪಟ್ಟಿರುವರು.

ಹರಿಜನ ವಿದ್ಯಾರ್ಥಿಗಳೊಡನೆ ಊಟ ಮಾಡಲು ಒಪ್ಪದವರಿಗೆ ವರ್ಗಗಳಲ್ಲಿ ಪ್ರವೇಶ ನಿರಾಕರಿಸಲ್ಪಟ್ಟದ್ದರಿಂದ ಅಹಮದಾಬಾದ ಎಲ್. ಡಿ. ಇಂಜಿನಿಯರಿಂಗ ಕಾಲೇಜಿನ ೬೦೦ ವಿದ್ಯಾರ್ಥಿಗಳು ಅಸ್ಪೃಶ್ಯತಾ ಪ್ರತಿಜ್ಞೆಯನ್ನು ಹಾಕಿದ್ದಾರೆ. ಕಳೆದ ವರ್ಷ ಹಾಸ್ಟೇಲದಿಂದ ವಿದ್ಯಾರ್ಥಿಗಳನ್ನು ಹೊರಗೆ ಹಾಕಿ ವರ್ಗಗಳಿಗೆ ಪ್ರವೇಶ ಕೊಡಲಾಗಿತ್ತು. ಈ ಸವಲತ್ತನ್ನೂ ಈ ವರ್ಷ ಹಿಂತೆಗೆದುಕೊಂಡಿದ್ದರಿಂದ ಮುಖ್ಯ ಮಂತ್ರಿಗಳು ಇದರಲ್ಲಿ ಮಧ್ಯಸ್ಥಿ ಮಾಡಬೇಕು. ಇಲ್ಲವಾದರೆ ಉಪವಾಸ ಮಾಡುವೆವೆಂದು ವಿದ್ಯಾರ್ಥಿಗಳು ತಿಳಿಸಿದ್ದಾರೆ.

ರಾಷ್ಟ್ರ ವಿಭಜನೆಯನ್ನು ನಿಷೇಧಿಸಲು ಮುಂಬಯಿಯ ಕಾಂಗ್ರೆಸದಲ್ಲಿ ಶ್ರೀ. ಪಟ್ವರ್ಧನರು ಮಂಡಿಸಿದ್ದ ಗೊತ್ತುವಳಿ ನಿರಾಕೃತವಾಯಿತು.

ಕೇಂದ್ರ ಸರಕಾರದ ಕೂಲಿಕಾರ ಮಂತ್ರಿಗಳಾದ ಶ್ರೀ. ಜಗಜೀವನರಾಮ ಮತ್ತು ಮುಂಬಯಿ ಸರಕಾರದ ಕೂಲಿಕಾರ ಮಂತ್ರಿ ಶ್ರೀ. ಗುಲಜಾರೀಲಾಲ ನಂದಾ ಇವರು ಜಿನೇವಾದಲ್ಲಿ ಸೇರುವ ಅಂತರರಾಷ್ಟ್ರೀಯ ಕೂಲಿಕಾರ ಪರಿಷತ್ತಿಗಾಗಿ ಜಿನೇವಾಕ್ಕೆ ತೆರಳಿದರು.

ಪ್ರಾಂತಿಕ ಮದ್ಯಪ್ರತಿಬಂಧಕ ಸಮಿತಿಗೆ ತಾತ್ಪೂರ್ತಿಕ ಕಾರ್ಯದರ್ಶಿ ಸ್ಥಳವೊಂದನ್ನು ಮುಂಬಯಿ ಸರಕಾರದವರು ಹೊಸದಾಗಿ ಏರ್ಪಡಿಸಿದ್ದು ಅದಕ್ಕೆ ಅಬಕಾರೀ ಖಾತೆಯ ಕಮೀಶನರರ ಪರ್ಸನಲ್ ಅಸಿಸ್ಟಂಟ ಎಸ್. ಎಸ್. ನಾಡಕರ್ಣಿಯವರನ್ನು ನೇಮಿಸಿದ್ದಾರೆ.

ಪಂಢರಪೂರದ ಆಷಾಢ ಉತ್ಸವಕ್ಕೆ ಬರುವ ಯಾತ್ರಿಕರು ಕುರ್ಡುವಾಡಿ ಸ್ಟೇಶನದಲ್ಲಿ ಉಳಿದರೆ ನೀರಿನ ತೀವ್ರ ಅನಾನುಕೂಲವನ್ನು ಅನುಭವಿಸುವ ಪ್ರಸಂಗ ಬರುವದು. ಅದರಿಂದ ಒಹಳ ಸಮಯ ಸ್ಟೇಶನದಲ್ಲಿ ಯಾತ್ರಿಕರು ಉಳಿಯಬಾರದೆಂದೂ ನೀರನ್ನು ಮಿತವ್ಯಯದಿಂದ ಉಪಯೋಗಿಸಬೇಕೆಂದೂ ಸರಕಾರದವರು ಪ್ರಕಟಿಸಿದ್ದಾರೆ.

ಪುಣೆ ಜಿಲ್ಲೆಯಿಂದ ಧಾರವಾಡಕ್ಕೆ ೨೩೪೭೫ ಮಣ, ಕೊಲ್ಲಾಪುರದಿಂದ ೨೦೬೬೪ ಮಣ ಬೆಳಗಾವಿ ಜಿಲ್ಲೆಯಿಂದ ಕಾನಡಾಕ್ಕೆ ೧೧೭೫೬ ಮಣವನ್ನು, ಧಾರವಾಡಕ್ಕೆ ೩೧೮೬೦ ಮಣ ಬೆಲ್ಲ ಕಳಿಸಲಾಗಿದೆಂದು ಪ್ರಕಟಿಸಲಾಗಿದೆ.

ಮುಂಬಯಿ ಕಾಳಬಾದೇವಿ ರೋಡಿನಲ್ಲಿಯ ಅನೇಕ ಪಹಾರಗಳನ್ನು ಝಡತಿಮಾಡಿ ಸುಮಾರು ೫ ಬಟ್ಟೆಯ ಗಂಟುಗಳನ್ನು ಪೋಲೀಸರು ಜಪ್ತಮಾಡಿದ್ದಾರೆ. ಇದರ ಬೆಲೆ ಸುಮಾರು ೫ ಲಕ್ಷ ರೂಪಾಯಿ ಇದೆ.

ಕೊಲ್ಹಾಪುರದಲ್ಲಿ ೧೫ ನೇ ತಾರೀಖು ರಾತ್ರಿ ಕರವೀರನಾಥ ಹತ್ತರ ಒಬ್ಬನಿಗೆ ತೀಕ್ಷ್ಣ ಶಸ್ತ್ರಗಳಿಂದ ಇರಿಯಲಾಯಿತು. ನಗರದಲ್ಲೆಲ್ಲ ಶಸ್ತ್ರಧಾರಿ ಪೋಲೀಸರ ಪಹರೆಯಿದ್ದು ಇದ್ದು ರಾತ್ರಿ ೧೦ ರ ನಂತರ ಬಿಡಾರ ಬಿಟ್ಟು ಹೊರಗೆ ಬರುವದಕ್ಕೆ ನಿರ್ಬಂಧ ಹಾಕಿದೆ. ಮೊನ್ನೆ ನಡೆದ ಗಲಭೆಯ ಪ್ರಕರಣದಲ್ಲಿ ಅಲ್ಪವಯ ಹುಡುಗನೊಬ್ಬನನ್ನು ಸೆರೆ ಹಿಡಿಯಲಾಗಿದೆ.

೧೧ನೇ ತಾರೀಖು ಮಧ್ಯರಾತ್ರಿಯ ಸುಮಾರಿಗೆ ೫ ಜನ ಶಸ್ತ್ರಧಾರಿ ದರೋಡೆಗಾರರು ಕೊಲ್ಹಾಪುರದಿಂದ ೪ ಮೈಲುಗಳ ಮೇಲೆ ಇರುವ ಕಳೆ-ಹಿಪ್ಪರಗಿ ಹಳ್ಳಿಯಲ್ಲಿರುವ ಲಿಂಬಪ್ಪಾ ಉಡಾಪಶಿವ ಎಂಬ ಹಳ್ಳಿಗನ ಗುಡಿಸಲನ್ನು ಪ್ರವೇಶಿಸಿ ಅವನನ್ನು ಅವನ ಹೆಂಡತಿಯನ್ನು ಹೊಡೆದು ಬಡಿದು ರೋಖ ಹಣ ಮತ್ತು ಬಟ್ಟೆ ಬಂಗಾರವನ್ನು ಅಪಹರಿಸಿಕೊಂಡು ಹೋದರು.

ಕೊಲ್ಹಾಪುರ ತಾಲೂಕಿನ ಪಹರಿ ಎಂಬ ಹಳ್ಳಿಯ ... ... ಹೊಡೆದು ಅವನಲ್ಲಿದ್ದ ... ರೂಪಾಯಿಗಳನ್ನೆಲ್ಲ ದೋಚಿಕೊಂಡು ಹೋದರು.

೧೩ ನೇ ತಾರೀಖು ಬೆಳಗು ಮುಂಜಾನೆ ಮುಂಬಯಿ ವಿಕ್ಟೋರಿಯಾ ಟರ್ಮಿನಸ ಸ್ಟೇಶನ ದಲ್ಲಿಯ ಒಂದನೆ ಮತ್ತು ಎರಡನೇ ವರ್ಗದ ಟಿಕೀಟ ಕಚೇರಿಯಲ್ಲಿ ಹೊಕ್ಕು ಅಲ್ಲಿದ್ದ ಮೂವರು ಕಾರಕೂನರ ಮೇಲೆ ಗುಂಡು ಹಾರಿಸಿ ಅಲ್ಲಿದ್ದ ರೂಪಾಯಿಗಳನ್ನು ದೋಚಿಕೊಂಡು

ಹೊಸದಿಲ್ಲಿ

ಬ್ರಹ್ಮದೇಶ ಸರಕಾರದವರು ಇತ್ತೀಚೆ ಹೊರಡಿಸಿದ ಅವಸರದ ವಲಸೆ ಕಾಯದೆಯನ್ನು ಹಿಂದುಸ್ಥಾನ ಸರಕಾರದವರು ತೀವ್ರವಾಗಿ ಪ್ರತಿಭಟಿಸಿದ್ದಾರೆ.

ಇಜಿಪ್ತ ಸರಕಾರ ಮತ್ತು ಹಿಂದುಸ್ಥಾನ ಸರಕಾರದ ವಾಣಿಜ್ಯ ಪಾತ್ರಗಳೊಡನೆ ನಡೆದ ಮಾತುಕತೆಗಳ ಪರಿಣಾಮವಾಗಿ ಇಜಿಪ್ತ ಸರಕಾರ ಹಿಂದುಸ್ಥಾನಕ್ಕೆ ಅಕ್ಕಿಯನ್ನು ಕೊಡಲು ಒಪ್ಪಿಕೊಂಡಿದೆ. ಅದಕ್ಕೆ ಪ್ರತಿಯಾಗಿ ಹಿಂದುಸ್ಥಾನದಿಂದ ಇಜಿಪ್ತ ಕಲ್ಲಿದ್ದಲನ್ನು ಪಡೆಯುವದು.

ಫರೀದಕೋಟ ಸಂಸ್ಥಾನ ಸ್ವತಂತ್ರವಾಗುವದೆಂದು ಕೆಲವು ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಸುದ್ದಿ ನಿರಾಧಾರವಾಗಿದೆಂದು ಆ ಸಂಸ್ಥಾನದ ಕಾರ್ಯದರ್ಶಿಗಳು ಪ್ರಕಟಿಸುತ್ತಾರೆ.

ಹಿಂದುಸ್ಥಾನದಲ್ಲಿಯ ಫ್ರೆಂಚ ರಾಯಭಾರಿಗಳಾಗಿರುವ ಹೆನ್ರಿ ರಾಕ್ಸ ಇರಾಣದ ರಾಯಭಾರಿಗಳಾದ ಅಲ್ಲಿ ಮೂಸಾಮಿ ಮತ್ತು ತುರ್ಕಸ್ಥಾನದ ಕಮೀಶನರರಾದ ಸಾಲೆಅಲೀ ಪಾಶಾ ರವರು ೧೫ಕ್ಕೆ ಬ್ಯಾ. ಜಿನ್ನಾರನ್ನು ಭೆಟ್ಟಿಯಾದರು.

ದಿಲ್ಲಿಯ ಕರೋಲ ಭಾಗದಲ್ಲಿ ಲಾಯಸೆನ್ಸ ಇಲ್ಲದೆ ಮದ್ದು ಮಾರುತಿದ್ದ ಆರೋಪದಿಂದ ಕಥಕ ಅಹಮ್ಮದ ಎಂಬ ೩೦ ವರುಷದ ತರುಣನೊಬ್ಬನನ್ನು ಸೆರೆಹಿಡಿದಿದ್ದಾರೆ. ತಾನು ಅಸ್ಸಗಟವರಾದ ಲಿಯಾಕತ ಅಲ್ಲಿಖಾನರ ಅಪ್ತ ಕಾರ್ಯದರ್ಶಿಯೆಂದು ಆರೋಪಿಯು ಬೆದರಿಸಿದನು. ಪೋಲೀಸರು ಒಬ್ಬನನ್ನು ಅಂಕಿತದ ಕೆಲವು ನೋಟುಗಳೊಂದಿಗೆ ಮದ್ದು ಕೊಳ್ಳಲು ಕಳಿಸಿ ಅವನು ೪೦ ಕಾಡತೂಸುಗಳ ಪಾರ್ಸಲನ್ನು ಕೊಡುತಿದ್ದಾಗ ಅವನನ್ನು ಸೆರೆಹಿಡಿದರು.

ದಿಲ್ಲಿಯಲ್ಲಿ ತಾತ್ಪೂರ್ತಿಕವಾಗಿ ಪಾಕಿಸ್ಥಾನದ ಘಟನಾ ಸಮಿತಿಯನ್ನು ಕೂಡಿಸುವದಾಗಿಯೂ ಅನಂತರ ಅದನ್ನು ಕರಾಚಿಗೆ ಸ್ಥಳಾಂತರಿಸಲಾಗುವದೆಂದೂ ತಿಳಿಯುತ್ತದೆ. ಪಾಕಿಸ್ಥಾನದ ಕೇಂದ್ರವನ್ನು ಕರಾಚಿಯಲ್ಲಿ ಸ್ಥಾಪಿಸುವ ಸ್ತ್ವನ ಸ್ಥಗಿತಾ ನಡೆದಿವೆ. ೧೫ ನೇ ಅಗಸ್ಟಕ್ಕೆ ಈ ಕಚೇರಿ ಸ್ಥಾಪಿತವಾಗುವದೆಂದು ತಿಳಿಯುತ್ತದೆ.

ಬಂಗಾಲ ವಿಚ್ಛೇದಿಸಲ್ಪಡಬೇಕೆಂದು ನಿರ್ಣಯಿಸಲ್ಪಟ್ಟಲ್ಲಿ ಸಿಲ್ಹೆಟದಲ್ಲಿ ನಡೆಯಲಿರುವ ಮತಗಣನೆಯ ಪರಿಣಾಮ ಸಿಲ್ಹೆಟವನ್ನು ಪೂರ್ವ ಬಂಗಾಲದ ಹೊಸ ಪ್ರಾಂತದಲ್ಲಿ ಕೂಡಿಸಬೇಕೆಂಬದಕ್ಕೆ ಅನುಕೂಲವಾದರೆ ಪೂರ್ವ ಬಂಗಾಲವು ಅದನ್ನು ಕೂಡಿಸಿಕೊಳ್ಳಲು ಒಪ್ಪಬೇಕೊ ಹೇಗೆಂಬದನ್ನು ೩ ನೇ ಪರಿಶಿಷ್ಟದಲ್ಲಿಯ ಮತದಾರ ಸಂಘಗಳ ಸಭಾಸದರು ನಿರ್ಣಯಿಸತಕ್ಕದ್ದೆಂದು ಗವರ್ನರ ಜನರಲ್‌ರು ಪ್ರಕಟಿಸಿದ್ದಾರೆ.

ಪೂರ್ವ ಬಂಗಾಲದ ಬೆಕರಗಂಜ ಜಿಲ್ಲೆಯಲ್ಲಿ ಹಿಂದೂ ಬಹುಮತವುಳ್ಳ ೩೦೦ ಹಳ್ಳಿಗಳನ್ನು ಪಶ್ಚಿಮ ಬಂಗಾಲದ ಹಿಂದೂ ಪ್ರಾಂತದಲ್ಲಿ ಕೂಡಿಸಬೇಕೆಂಬ ಬೇಡಿಕೆಯನ್ನು ದಿಲ್ಲಿ ವಿಶ್ವವಿದ್ಯಾಲಯದ ಶ್ರೀ ಸುಕುಮಾರ ಪತ್ರರ ಅಧ್ಯಕ್ಷತೆಯಲ್ಲಿ ಬೆಕರಗಂಜದ ಹಿಂದೂ ನಾಗರಿಕರ ಸಭೆಯಲ್ಲಿ ಸ್ವೀಕರಿಸಲಾಯಿತು.

ಗುರಗಾಂವ ಜಿಲ್ಲೆಯಲ್ಲಿ ಜಾತೀಯ ಗಲಭೆ ಆರಂಭವಾಗಿ ತಿಕಲಿ ಎಂಬ ಹಳ್ಳಿಯಲ್ಲಿ ೩೦ ಜನರು ಮರಣಹೊಂದಿದರು. ಅವರಲ್ಲಿ ೩ ಜನ ಸ್ತ್ರೀಯರಿದ್ದಾರೆ. ಸುಮಾರು ೨೦೦ ಕ್ಕಿಂತ ಹೆಚ್ಚು ಜನರಿಗೆ ಗಾಯಗಳಾಗಿವೆ. ಹಳ್ಳಿಯಲ್ಲಿಯ ಸುಮಾರು ೧೦೦ ಮನೆಗಳು ಭಸ್ಮವಾಗಿವೆ; ಪೋಲೀಸರು ೨೨ ಸುತ್ತು ಗುಂಡು ಹಾರಿಸಿದ ರೀತಿ ಅದರಿಂದ ಇದೆ. ಹಿಂದುಗಳ ಸಂರಕ್ಷಣ ಮಂತ್ರಿಗಳಾದ ಸರದಾರ ಬಲದೇವಸಿಂಗರು ಅಲ್ಲಿಗೆ ಹೋಗಿ ಪರಿಸ್ಥಿತಿಯನ್ನೆಲ್ಲ ತಿಳಿದುಕೊಂಡು ಬಂದರು.

ಹೋಗಲು ಪ್ರಯತ್ನಿಸಿದರು. ಕಾರಕೂನನೊಬ್ಬ ಗದ್ದಲ ಮಾಡಿದ್ದರಿಂದ ರೂಪಾಯಿ ಸಿಕ್ಕಲಾರದೆ ಹಾಗೆಯೆ ಹೋದರು. ಕಾರಕೂನರ ಹತ್ತರ ೧೩ ಸಾವಿರ ರೂಪಾಯಿಗಳಿದ್ದವು. ಕಾರಕೂನ ರಿಗೆ ಗಾಯಗಳಾಗಿದ್ದು ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಆರೋಪಿಗಳ ಪತ್ತೆಯಿಲ್ಲ.

ಮದ್ರಾಸ

ನಮಗೆ ಎದುರಾಗಿ ನಿಂತ ಕ್ರೂರ ಹಾಗೂ ಅನ್ಯಾಯ ಅಮಾನುಷ ಶಕ್ತಿಗಳ ಆಹ್ವಾನಗಳನ್ನು ತಾಳ್ಮೆಯಿಂದ ಎದುರಿಸಬೇಕು. ನಮ್ಮ ಸಾಂಘಿಕ ಜೀವನದಲ್ಲಿ ಕೊಳೆಯನ್ನು ಕಿತ್ತೊಗೆಯಲು ಯಾವ ಸರ್ವಾಧಿಕಾರಿಗೂ ಸಾಧ್ಯವಿಲ್ಲ. ಇದೆಲ್ಲಕ್ಕೂ ತಾಳ್ಮೆ ಬೇಕು ಎಂದು ಡಾ. ಝುಕೀರ ಹುಸೇನರು ಅಗ್ನೇಯ ಏಶಿಯಾ ಶಿಕ್ಷಣ ಪರಿಷತ್ತಿನ ಸಮಾರೋಪ ಭಾಷಣದಲ್ಲಿ ಅಭಿಪ್ರಾಯಪಟ್ಟರು.

ನಾಯರ ಸೇವಾ ಸಮಾಜದಿಂದ ಇತ್ತೀಚೆ ರಾಜೀನಾಮೆ ಕೊಟ್ಟು ಹೊರಬಿದ್ದ ಅನಂತ ಪದ್ಮನಾಭ ಪಿಳ್ಳೆಯವರು ಚಂಗನಚೇರಿಯಲ್ಲಿ ೧೫ಕ್ಕೆ ರಾಜದ್ರೋಹದ ಆರೋಪಕ್ಕಾಗಿ ಸೆರೆಹಿಡಿಯಲ್ಪಟ್ಟರು. ಘಟನಾ ಸಮಿತಿಯ ಸಂಬಂಧದಲ್ಲಿ ಬಂಧಿತರಾಗಿದ್ದ ೧೪ ಜನರಲ್ಲಿ ೪ ಜನರನ್ನು ಈಗ ಬಿಡಲಾಗಿದೆ.

ದಕ್ಷಿಣ ಹಿಂದುಸ್ಥಾನದಲ್ಲಿ ಪ್ರಸಿದ್ಧ ತಿರುಪತಿ ವೆಂಕಟರಮಣ ದೇವಸ್ಥಾನದಲ್ಲಿ ಹರಿಜನರು ೧೪ ನೇ ತಾರೀಖು ಪ್ರವೇಶ ಮಾಡಿ ಪೂಜೆಯನ್ನು ಮಾಡಿದರು. ಮದ್ರಾಸದ ಮುಖ್ಯ ಮಂತ್ರಿಗಳಾದ ಓಮಂದೂರರ ನೇತೃತ್ವದಲ್ಲಿ ಈ ಪ್ರವೇಶ ಸಮಾರಂಭ ನಡೆಯಿತು. ಹರಿಜನ ಮಂತ್ರಿ ಕೂರ್ಮಯ್ಯನವರೂ ಈ ಸಮಾರಂಭದಲ್ಲಿ ಉಪಸ್ಥಿತರಾಗಿದ್ದರು.

ತ್ರಿಚನಾಪಳ್ಳಿಯಲ್ಲಿ ಶ್ರೀ ಮುದ್ದಿಯಾರರ ಅಧ್ಯಕ್ಷತೆಯಲ್ಲಿ ಸೇರಿದ್ದ ತ್ರಿಚಿ ಜಿಲ್ಹಾ ದ್ರವಿಡ ಪರಿಷತ್ತಿನಲ್ಲಿ ಮದ್ರಾಸ ಇಲಾಖೆಯಲ್ಲಿ ತಮಿಳು ತೆಲಗು ಮಲೆಯಾಳ ಹಾಗು ಕನ್ನಡ ಭಾಷೆಗಳನ್ನೊಳಗೊಂಡ ಸಾರ್ವಭೌಮ ಸ್ವತಂತ್ರ ದ್ರವಿಡಸ್ಥಾನವನ್ನು ನಿರ್ಮಿಸಬೇಕೆಂದು ಗೊತ್ತುವಳಿ ಸ್ವೀಕೃತವಾಯಿತು.

ಕೃಷ್ಣಾ ಜಿಲ್ಲೆಯ ದಿವಿ ತಾಲೂಕಿನ ಮಂಗಲಾಪುರಂ ಹಾಗು ಬೇರೆ ಕೆಲ ಹಳ್ಳಿಗಳ ರೈತರು ಕಮ್ಯುನಿಸ್ಟರ ಪ್ರೇರಣೆಯಿಂದ ಚಲಾಪಿಲ್ಲಿ ರಾಜರ ಒಡೆತನದಲ್ಲಿಯ ಸುಮಾರು ೧೫೦೦ ಎಕರೆ ಭೂಮಿಗಳನ್ನು ಆಕ್ರಮಿಸಿ ಅವುಗಳನ್ನು ತಮ್ಮತಮ್ಮಲ್ಲಿ ಹಂಚಿಕೊಂಡಿರುವರೆಂದು ತಿಳಿಯುತ್ತದೆ. ಜಮೀನದಾರಿ ಪದ್ಧತಿ ರದ್ದಾದ ಕೂಡಲೆ ಭೂಮಿಗಳ ಒಡೆಯರು ತಾವೇ ಎಂದು ತಿಳಿದುಕೊಂಡು ರೈತರು ಹೀಗೆ ಮಾಡಿದ್ದಾರಂತೆ. ಸರಕಾರದವರು ಜಿಲ್ಹಾಧಿಕಾರಿಗಳಿಗೆ ವಿವರಗಳನ್ನು ಕೇಳಿರುವರು.

ಪ್ರಜೆಗಳ ಮತವನ್ನು ಹತ್ತಿಕ್ಕಿದರೆ ಅವರು ಅದನ್ನು ತೀವ್ರವಾಗಿ ಪ್ರತಿಭಟಿಸುವರು ಎಂದು ಮುಂಚಾಗಿ ತಿರುವಾಂಕೂರಿನ ದರಬಾರಕ್ಕೆ ಥಾನೂ ಪಿಳ್ಳೆಯವರು ಎಚ್ಚರಿಕೆ ಕೊಟ್ಟಿದ್ದಾರೆ.

ಕಾಂಗ್ರೆಸ ವರಿಷ್ಠರ ಆಜ್ಞೆಯಂತೆ ಮದ್ರಾಸ ಮಂತ್ರಿಗಳಾದ ಕಳಾ ವೆಂಕಟರಾವ ಎಚ್. ಸೀತಾರಾಮರೆಡ್ಡಿಯವರು ಘಟನಾ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟರು.

ಯುಕ್ತ ಪ್ರಾಂತ

ಕಾನಪುರದಲ್ಲಿ ೧೪ನೇ ಕಲಮಿನ ಆಜ್ಞೆಯನ್ನು ಮೀರಿ ರಾಜಾದಿ ಕಿರಿಕಿ ಮೆರವಣಿಗೆಯನ್ನು ಹೊರಡಿಸಲು ಪ್ರಯತ್ನಿಸಿದ ಕೆಲವು ಮುಸಲ್ಮಾನ ಪುಂಡರನ್ನು ಓಡಿಸಲು ಪೋಲೀಸರು ಗೋಳೀಬಾರು ಮಾಡಿದ್ದರ ಪರಿಣಾಮವಾಗಿ ೫ ಜನ ಸತ್ತರು ೮ ಜನರಿಗೆ ಗಾಯಗಳಾಗಿವೆ. ಶಾಂತತೆಯನ್ನು ಪ್ರಸ್ಥಾಪಿಸುವದಕ್ಕಾಗಿ ಮಿಲಿಟರಿ ಸಹಾಯವನ್ನು ತೆಗೆದುಕೊಳ್ಳಲಾಯಿತು.

ಸಡುಗಾಲ ಸರಕಾರದ ಆಹಾರ ಮಂತ್ರಿಗಳಾಗಿರುವ ಶ್ರೀ ರಾಜೇಂದ್ರ ಬಾಬುಗಳು ಘಟನಾ ಸಮಿತಿಯ ಅಧ್ಯಕ್ಷರಾಗಿರುವದರಿಂದ ಆಹಾರ ಮಂತ್ರಿತ್ವಕ್ಕೆ ರಾಜೀನಾಮೆ ಕೊಡಲಿರುವರು. ಅದುದರಿಂದ ಅದಕ್ಕೆ ಸಂಯುಕ್ತ ಪ್ರಾಂತ ಸರಕಾರದ ಮುಖ್ಯ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು ನೇಮಿಸಲ್ಪಡುವರೆಂದು ತಿಳಿಯುತ್ತದೆ. ಶ್ರೀ ರಫಿ ಅಹಮ್ಮದ ಕಿದ್ವಾಯಿ ಇಲ್ಲವೆ ಪುರುಷೋತ್ತಮದಾಸ ಟಂಡನ್ ಇವರು ಮುಖ್ಯಮಂತ್ರಿಗಳಾಗಬಹುದು.

ಮೂರುಮಹಾಲುಗಳಲ್ಲಿ ೪೮ ಗಂಟೆಗಳ ಕರ್ಫ್ಯೂ ಆಜ್ಞೆಯನ್ನು ಹಾರಿ ಮಾಡಿದ್ದರಿಂದ ಬನಾರಸದ ಮುಸಲ್ಮಾನರು ಹರತಾಳವನ್ನಾಚರಿಸಿದರು.

ಬಂಗಾಲ

ಬಂಗಾಲ ವಿಭಜನೆಯ ಸಂಬಂಧದಲ್ಲಿ ಬೇರೆ ಬೇರೆ ಭಾಗಗಳಿಂದ ಹಿಂದೂ ಮಹಾಸಭೆಗೆ ಬಂದ ಶಿಷ್ಟಮಂಡಳಗಳ ಹೇಳಿಕೆಗಳನ್ನು ಒತ್ತಟ್ಟಿಗೆ ಕೂಡಿಸಲು ತಜ್ಞರ ಒಂದು ಸತ್ಯಶೋಧನ ಸಮಿತಿಯನ್ನು ಡಾ. ಶ್ಯಾಮಪ್ರಸಾದ ಮುಖರ್ಜಿಯವರು ನೇಮಿಸಿದ್ದಾರೆ.

ಪೂರ್ವ ಬಂಗಾಲದಲ್ಲಿ ಒಂದೇ ಸವನೆ ೭೨ ಗಂಟೆ ಮಳೆ ಬಿದ್ದದರಿಂದ ಕೊಮಿಲ್ಲಾ ನಗರದಲ್ಲಿಯ ಅನೇಕ ಮನೆಗಳು ನೀರಿನಲ್ಲಿ ಮುಳುಗಿರುವವು.

ಪಂಜಾಬ-ಸರಹದ್ದ

ಗಡಿನಾಡಿನಲ್ಲಿ ಬ್ರಿಟಿಶ್ ಸರಕಾರದ ಯೋಜನೆಯಂತೆ ಮತಗಣನೆ ನಡೆಸುವ ಏರ್ಪಾಟುಗಳೆಲ್ಲ ಮುಗಿಯ ಬಂದಿವೆಂದೂ ಮತಗಣನೆಯೂ ಜುಲೈ ಮೊದಲನೆ ವಾರದಿಂದ ೧೫ ದಿನ ನಡೆಯುವದೆಂದೂ ತಿಳಿಯುತ್ತದೆ.

ಅಂಬಾಲಾ ಪೂರ್ವ ಪಂಜಾಬದ ರಾಜಧಾನಿಯಾಗುವದೆಂದು ತಿಳಿಯುತ್ತದೆ.

ಸ್ವತಂತ್ರ ಗಡಿ ಪ್ರಾಂತದ ನಮ್ಮ ಧ್ಯೇಯ ಸಾಧ್ಯವಾಗಿಂತಾಗಿದೆಂದು ಗಡಿನಾಡಿನ ಮುಖ್ಯ ಮಂತ್ರಿಗಳಾದ ಡಾ ಖಾನಸಾಹೇಬರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು; ಪಠಾಣರು ವಿದೇಶಿಯರ ದಾಸ್ಯದಲ್ಲಿರಲಾರರು. ಸ್ವರಾಷ್ಟ್ರಿಕ ಮತಗಣನೆಗೆ ಬೇಕಾಗುವ ಶಾಂತ ಪರಿಸ್ಥಿತಿ ಗಡಿಪ್ರಾಂತದಲ್ಲಿ ಇಲ್ಲವೆಂದೂ ಅವರು ಉತ್ತರಿಸಿದರು.

ಪಂಜಾಬ

ಲಾಹೋರದಲ್ಲಿ ೧೩ ನೇ ತಾರೀಖು ಮಧ್ಯರಾತ್ರಿಯಲ್ಲಿ ಒಂದು ದೇಶೀ ಬಾಂಬ ಒಗೆದದ್ದರ ಪರಿಣಾಮವಾಗಿ ಒಬ್ಬನು ತತ್ಕಾಲಿಕ ಮಡಿದ ದ್ದಕ್ಕದ ಬೇರೆ ನಾಲ್ವರಿಗೆ ಗಾಯಗಳಾಗಿವೆ.

ಅಮೃತಸರದಲ್ಲಿ ೧೩ ಕ್ಕೆ ೨೪ ಗಂಟೆಗಳಲ್ಲಿ ನಾಲ್ಕು ಕಡೆ ಮತ್ತೆ ಕೊಳ್ಳಿ ಇಡಲಾಗಿದೆ. ಒಬ್ಬನನ್ನು ಇರಿಯಲಾಗಿದೆ. ಲೋಗಾಡಗೇಟ ಹತ್ತಿರ ಬಾಂಬು ಸ್ಫೋಟವಾಗಿ ಮೂವರಿಗೆ ಗಾಯಗಳಾಗಿವೆ. ಅರು ಮನೆಗಳಿಗೆ ಬೆಂಕಿ ಹಚ್ಚಲಾಗಿದೆ.

ನಾಲ್ಕು ಮಾತು — ರಂಗನಾಥ ದಿವಾಕರ

ಸ್ವತಂತ್ರ ಸಂಸ್ಥಾನಗಳು

ತ್ರಿಮಂತ್ರಿಗಳ ಯೋಜನೆಯ ಪ್ರಕಾರ ಸಂಸ್ಥಾನಗಳು ಸ್ವತಂತ್ರವಿರುವವು ಎಂಬ ಮಾತಿಗೆ ಜೂನ ೩ ನೇ ದಿನಾಂಕದ ಘೋಷಣೆ ಅಡ್ಡ ಬರುವದಿಲ್ಲ ಎಂದು ವ್ಹಾಯಿಸರಾಯರು ಹೇಳಿ ಬಿಟ್ಟರು. ಆದರೆ ಅವನ್ನು ಬ್ರಿಟಿಶ್ ಡೊಮೀನಿಯನ್ನಿನಲ್ಲಿ ಸೇರಿಸಲಿಕ್ಕಾಗುವದಿಲ್ಲ ಎಂಬ ಮಾತನ್ನೂ ಅವರು ಹೇಳಿದರು. ಹಲವು ಸಂಸ್ಥಾನಿಕರು ಹಾಗೂ ಹಲವು ಸಂಸ್ಥಾನಿಕರ ದಿವಾಣರು ತಾವು ಸ್ವಾತಂತ್ರ್ಯದ ಹಣ್ಣಿನ ರುಚಿಯನ್ನು ನೋಡೇ ಬಿಡುವ ಎಂದು ನಿರ್ಧರಿಸಿದಂತೆ ತೋರುವದು! ತ್ರಾವಣಕೋರದ ದಿವಾಣರು ಸ್ವಾತಂತ್ರ್ಯವನ್ನು ಜಾಹೀರ ಪಡಿಸಿ ಅದರ ಕುರುಹೆಂದು ಸಭೆ ಮುಂತಾದವುಗಳನ್ನೆಲ್ಲ ತಡೆದು, ಬಿಟ್ಟು ಹಲವಾರು ಜನರನ್ನು ಜೇಲಿಗೆ ಸಹ ಅಟ್ಟಿ ಬಿಟ್ಟರು. ತಾವು ಸ್ವಾತಂತ್ರ್ಯವನ್ನು ಸಾರಲು ಅಧಿಕೃತರು ಎಂದು ಸಾರಿ ಹೈದ್ರಾಬಾದದ ನಿಜಾಮರು ಸದ್ಯಕ್ಕೆ ಸಮಾಧಾನಪಟ್ಟಿರುವರು.

x x x

ಈ ಪರಿಸ್ಥಿತಿಯ ಅರ್ಥವೇನು? ಸಂಸ್ಥಾನಿಕರ ಕರ್ತವ್ಯವೇನು, ಸಂಸ್ಥಾನೀ ಪ್ರಜೆಗಳ ಕರ್ತವ್ಯವೇನು, ಸಂಸ್ಥಾನಗಳ ನೆರೆಯಲ್ಲಿರುವ ನಮ್ಮಂಥವರ ಕರ್ತವ್ಯವೇನು, ಹಾಗೂ ಸಂಸ್ಥಾನಗಳ ಸುತ್ತಲಿರುವ ಹಿಂದುಸ್ತಾನ ಸರಕಾರದ ಕರ್ತವ್ಯವೇನು? ಈ ಮಾತುಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ಅದರಂತೆ ನಡೆಯುವದು ನಮ್ಮೆಲ್ಲರ ಕರ್ತವ್ಯವಿರುವದು. ಸಂಸ್ಥಾನಗಳು ಅಂದರೆ ಸಂಸ್ಥಾನಿಕರು ಹಾಗೂ ಅವರ ಪ್ರಜೆಗಳು, ಕೇವಲ ಸಂಸ್ಥಾನಿಕರು ಮಾತ್ರವಲ್ಲ. ಇದು ತಿಳಿಯತಕ್ಕ ಮೊದಲನೆಯ ಮಹತ್ವದ ಮಾತು. ಸಂಸ್ಥಾನಗಳು ಬ್ರಿಟಿಶ್ ಅಧಿರಾಜ್ಯತ್ವದಿಂದ ಸ್ವತಂತ್ರ-ಇದರ ಅರ್ಥ ಹಿಂದುಸ್ತಾನದಲ್ಲಿ ಪ್ರಸ್ಥಾಪಿತವಾಗತಕ್ಕ ಸ್ವತಂತ್ರ ಸರಕಾರದೊಡನೆ ತಮ್ಮ ಘಟನಾತ್ಮಕ ಸಂಬಂಧಗಳನ್ನು ಬೆಳೆಸಿಕೊಳ್ಳಲು ಸ್ವತಂತ್ರ ಎಂದೇ ಅರ್ಥ. ಹಿಂದುಸ್ತಾನದ ಘಟನಾಸಮಿತಿಗೆ ಸಂಸ್ಥಾನಗಳು ಸೇರಬೇಕೆಂಬ ಭಾವನೆಯಿಂದಲೆ ತಾವು ಘೋಷಣೆಯನ್ನು ಸಾರಿದ್ದಾಗಿದೆ ಎಂದು ವ್ಹಾಯಿಸರಾಯರು ಹೇಳಿರುವರು. ಆದುದರಿಂದ ಸಂಸ್ಥಾನಿಕರು ಹಾಗೂ ಅವರ ಪ್ರಜೆಗಳು ವಿಚಾರವಿನಿಮಯ ಮಾಡಿಕೊಂಡು ಘಟನಾ ಸಮಿತಿಯಲ್ಲಿ ಯಾವ ಪ್ರಕಾರವಾಗಿ ಸೇರಬೇಕೆಂಬ ನಿರ್ಣಯ ಮಾಡುವದು ಕ್ರಮಪ್ರಾಪ್ತವು. ಅದನ್ನು ಬಿಟ್ಟು ಪ್ರಜೆಗಳ ಅಭಿಪ್ರಾಯವನ್ನು ಪಡೆಯುವ ಗೋಜಿಗೆ ಹೋಗದೆ ತಮ್ಮಷ್ಟಕ್ಕೆ ತಾವೇ ಪ್ರಜೆಗಳ ಹೆಸರಿನಿಂದ ಸ್ವಾತಂತ್ರ್ಯವನ್ನು ಜಾಹೀರ ಮಾಡುವ ಧೈರ್ಯವನ್ನು ತ್ರಾವಣಕೋರಿನ ದಿವಾಣರು ತೋರಿರುವರು! ಈ ಸಂದರ್ಭದಲ್ಲಿ ಅಲ್ಲಿಯ ಪ್ರಜೆಗಳ ಕರ್ತವ್ಯವು ಸ್ಪಷ್ಟವಿದೆ. ಸಂಸ್ಥಾನವು ಪ್ರಜೆಗಳದು. ಅವರ ಅಭಿಪ್ರಾಯದಂತೆ ಅಲ್ಲಿ ಎಲ್ಲವೂ ನಡೆಯಬೇಕು. ಅಲ್ಲಿಯ ದಿವಾಣರಾಗಲಿ, ಸಂಸ್ಥಾನಿಕರಾಗಲಿ, ಅಲ್ಲಿಯ ಸರಕಾರವಾಗಲಿ ಅಲ್ಲಿಯ ಪ್ರಜೆಗಳ ಪ್ರತಿನಿಧಿಗಳಾಗಿ ಕೆಲಸ ಮಾಡಬಲ್ಲರೇ ಹೊರತು ಸ್ವತಂತ್ರವಾಗಿಯಲ್ಲ. ಆದುದರಿಂದ ಅಲ್ಲಿಯ ಪ್ರಜೆಗಳು ತಮ್ಮ ಪೂರ್ಣ ಸ್ವಾತಂತ್ರ್ಯದ ಹೋರಾಟವನ್ನು ಧೈರ್ಯದಿಂದ, ಸಾಹಸದಿಂದ ಸಾಗಿಸಬೇಕು. ಅವರು ನಿಃಶಸ್ತ್ರರಿರುವದರಿಂದ ಶಾಂತಿಮಯ ಮಾರ್ಗದಿಂದಲೆ ಅವರು ಈ ಹೋರಾಟವನ್ನು ಸಾಗಿಸಬಲ್ಲರು. ಈ ಶಸ್ತ್ರವು ಸ್ವಾತಂತ್ರ್ಯವನ್ನು ದೊರಕಿಸಿ ಕೊಡಲು ಸಾಕಷ್ಟು ಸಮರ್ಥವಿರುವದೆಂಬದು ಈಗ ಹಿಂದುಸ್ತಾನದ ಉದಾಹರಣೆಯ ಮೂಲಕ ಸಿದ್ಧವಾಗಿದೆ. ಅವರ ನೆರೆಹೊರೆಯವರಾದ ನಾವು ಆ ಪ್ರಜೆಗಳಿಗೆ ಪೂರ್ಣ ನೈತಿಕ ಬೆಂಬಲವನ್ನು ಕೊಡುವದಲ್ಲದೆ ಅವರಿಗೆ ಪ್ರತಿಯೊಂದು ಬಗೆಯ ಜನ-ಧನ ಸಹಾಯವನ್ನು ಕೊಟ್ಟೇ ತೀರಲಿಕ್ಕೆಬೇಕು: ಇನ್ನು ಇಷ್ಟು ಮೀರಿ ಜನರ ಸ್ವಾತಂತ್ರ್ಯದ ಕೂಗನ್ನು ಲೆಕ್ಕಿಸದೆ ತಮ್ಮ ಕಾರಭಾರವನ್ನು ತ್ರಾವಣಕೋರ ಅಥವಾ ಇನ್ನಾವದೇ ಸಂಸ್ಥಾನದ ಸರಕಾರದವರು ಬಲಾತ್ಕಾರದಿಂದ, ಹಿಂಸಾಚಾರದಿಂದ ನಡೆಸಿದರೆ ಆಗಸ್ಟ ೧೫ ಕ್ಕೆ ಪ್ರಸ್ಥಾಪಿತವಾಗುವ ಹಿಂದುಸ್ತಾನ ಸರಕಾರದವರು ಸಾಮ ದಾನ ಭೇದ ದಂಡ ಎಂಬ ಯಾವದೇ ಉಪಾಯದಿಂದ ಆಯಾ ಸರಕಾರಗಳನ್ನು ಹಾದಿಗೆ ತಂದು ಪ್ರಜೆಗಳ ಸಂರಕ್ಷಣ ಮಾಡಲಿಕ್ಕೆಬೇಕು.

x x x

ನಿಜವಾಗಿ ನೋಡಿದರೆ ಈಗ ಹಿಂದುಸ್ತಾನಕ್ಕೆ ಸ್ವಾತಂತ್ರ್ಯವು ಬಂದುದು ಕಾಂಗ್ರೆಸ್ಸಿನ ಹೋರಾಟ, ಜನರ ಸ್ವಾರ್ಥತ್ಯಾಗ ಇತ್ಯಾದಿಗಳ ಮೂಲಕ. ಇವನ್ನೆಲ್ಲ ಲಕ್ಷಿಸದೆ ಕೇವಲ ಕೃತಘ್ನರಾಗಿ, ತಮ್ಮ ಪ್ರಜೆಗಳನ್ನು ಹತ್ತಿಕ್ಕಿ ಸುಲ್ತಾನಶಾಹಿಯನ್ನು ನಡೆಸಬೇಕೆಂದು ಯಾವದೇ ಸಂಸ್ಥಾನಿಕರು ಪ್ರಯತ್ನಿಸಿದರೂ ಅವರನ್ನು ಹಾದಿಗೆ ತರುವದು ಹಿಂದೀ ಜನತೆಯ ಹಾಗೂ ಹಿಂದುಸ್ತಾನ ಸರಕಾರದ ಆದ್ಯ ಕರ್ತವ್ಯವಿರುವದು.

ಭಾಷಾನುಗುಣ ಪ್ರಾಂತ

ಈ ಪ್ರಶ್ನೆ ಈಗೊಂದು ಮಟ್ಟಿಗೆ ಬಂದಿದೆ. ಆಗಸ್ಟ ೧೫ ಕ್ಕೆ ಪ್ರಸ್ಥಾಪಿತವಾಗುವ ಹಿಂದುಸ್ತಾನ ಸರಕಾರವು ಒಂದು ಸಮಿತಿಯನ್ನು ನೇಮಿಸಬೇಕು. ಆ ಸಮಿತಿಯವರು ಆಂಧ್ರ, ಕರ್ನಾಟಕ, ಕೇರಳ, ಮಹಾರಾಷ್ಟ್ರ ಅಲ್ಲದೆ ಬೇರೆ ಪ್ರಾಂತಗಳ ಪ್ರಶ್ನೆಯನ್ನು ಪರೀಕ್ಷಿಸಬೇಕು. ಪ್ರತ್ಯೇಕ ಪ್ರಾಂತವಾಗಲು ಸಿದ್ಧ ಹಾಗೂ ಯೋಗ್ಯವಿದ್ದ ಭಾಗಗಳನ್ನು ಆ ರೀತಿ ಅವರು ವಿಭಾಗಿಸಿ ನಾಮಕರಣ ಮಾಡಬೇಕು ಎಂದು ಈಗ ನಿರ್ಣಯವಾಗಿದೆ. ಕರ್ನಾಟಕದ ಎದುರಿಗೆ ಈ ಸಂದರ್ಭದಲ್ಲಿ ಮುಖ್ಯ ಪ್ರಶ್ನೆಯೆಂದರೆ, ಭಾಷೆ, ಸಾಮೀಪ್ಯ, ಸಾನ್ನಿಧ್ಯ, ಸಾಂಸ್ಕೃತಿಕ ಏಕರಸತೆ, ಆರ್ಥಿಕ ಭದ್ರತೆ, ಸ್ಥಿರತೆ, ಅಲ್ಪಸಂಖ್ಯಾಕರ ರಕ್ಷಣೆ—ಈ ಮುಂತಾದ ದೃಷ್ಟಿಯಿಂದ ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತವಾಗಲು ಸಮರ್ಥವು ಎಂಬುದನ್ನು ಸಿದ್ಧಪಡಿಸುವ ಭಾರವು. ಇದು ಈಗ ನಮ್ಮ ಮೇಲೆ ಇದೆ. ಅವಧಿ ಬಹಳ ಕಡಿಮೆ ಇದೆ. ಅಷ್ಟರಲ್ಲಿ ಒಂದು ನಿಪುಣರ ಗುಂಪು ಕೂಡಿ ವ್ಯವಸ್ಥಿತವಾಗಿ ಪಕ್ಷದ ಮಂಡನ ಮಾಡಲು ಎಲ್ಲ ಸಿದ್ಧತೆ ಮಾಡಲಿಕ್ಕೆ ಬೇಕು. ಕೇವಲ ಜನಸಾಮಾನ್ಯರನ್ನಾಗಲಿ, ಕಾಂಗ್ರೆಸ್ಸಿನ ಮುಖಂಡರನ್ನಾಗಲಿ ಒಪ್ಪಿಸುವ ಪ್ರಶ್ನೆ ಈಗ ಉಳಿದಿಲ್ಲ. ಅದಕ್ಕೂ ಮುಂದಿನ ಹೆಜ್ಜೆಯನ್ನು ಈಗ ಇಡಬೇಕಾಗಿದೆ. ಇದರಲ್ಲಿ ನಾವು ಯಶಸ್ವಿಗಳಾದರೆ ಇದೇ ಸಿದ್ಧವಾಗುವ ಘಟನೆಯಲ್ಲಿ ಕರ್ನಾಟಕವೊಂದು ಪ್ರತ್ಯೇಕ ಪ್ರಾಂತವೆಂದು ನಿರ್ದೇಶಿಸಲ್ಪಟ್ಟು ೧೯೪೯—೫೦ ರಲ್ಲಿ ಆಗಬಹುದಾದ ಮೊದಲನೆ ಚುನಾವಣೆಗಳು ಏಕತಂತ್ರ ಕರ್ನಾಟಕದಲ್ಲಿಯೆ ಆಗುವವು. ಆದುದರಿಂದ ಆಯಾ ನಿಪುಣರದೊಂದು ಗುಂಪು ಕೂಡಲೆ ಕೆಲಸಕ್ಕೆ ಹತ್ತುವದು ಅತ್ಯವಶ್ಯವು.

ಲಾಭ ಹಾನಿ

ಜೂನ ೩ರ ಘೋಷಣೆಯಂತೂ ಈಗ ಅಮಲಿನಲ್ಲಿ ಬರುತ್ತಲಿದೆ. ಅದು ಬರಬೇಕೋ ಬರಬಾರದೋ ಎಂಬ ಪ್ರಶ್ನೆ ಈಗ ಇಲ್ಲ. ಅದೊಂದು ಸಿದ್ಧ ಮಾತು. ಲೀಗಿನವರು ಅದನ್ನು ಪ್ರಾಮಾಣಿಕತನದಿಂದ ಒಂದು ಕೊನೆಯ ನಿರ್ಣಯವೆಂದು ಅಮಲಿನಲ್ಲಿ ತಂದರೆ ಎಲ್ಲವೂ ಸುಸೂತ್ರವಾಗಿ ಸಾಗಬಲ್ಲದು. ಇದೊಂದು ಹೆಜ್ಜೆಯಾಯಿತು, ಮುಂದೆ ಮತ್ತೆ ಕೂಟಮಾರ್ಗವನ್ನು (ಕಾರಿಡರ) ಬೇಡಬೇಕು, ಹಿಂದುಸ್ತಾನದಲ್ಲಿಯ ಮುಸಲ್ಮಾನರು ಕೂಡ ಬೇರೆ ಪ್ರತ್ಯೇಕ ರಾಷ್ಟ್ರದವರು, ಇತ್ಯಾದಿ ಮಾತುಗಳನ್ನು ಚಾಚಿ ಅವುಗಳಿಗಾಗಿ ಮನ್ನಣೆ ಪಡೆಯಲು ಪ್ರಯತ್ನ ಪಡಬೇಕೆಂದು ಲೀಗಿನವರು ಹವಣಿಸಿದರೆ ಮತ್ತೆ ಎಲ್ಲವೂ ಗೊಂದಲಕ್ಕೆ ಈಡಾಗುವದು. ಈಗ ಆದ ಸ್ಥಿತಿಯೇನಂದರೆ ಲೀಗಿನವರು ಎಷ್ಟೇ ಖಟಿಪಟಿ ಮಾಡಿದರೂ ಅವರಿಗೆ ಬಂಗಾಲ, ಪಂಜಾಬ, ಆಸಾಮಗಳ ಮೇಲೆ ಬೇಕಾದ ಅಖಂಡ ಪ್ರಭುತ್ವವೇನೂ ದೊರೆಯಲಿಲ್ಲ! ಕೊನೆಗೆ ಹುಳತಿಂದ (ಮಾಥ ಈಟನ್) 'ಲಂಗಡಾ ಪಾಕಿಸ್ತಾನವನ್ನೆ ಅವರು ಕೊಂಡು ಕೂಡಬೇಕಾಯಿತು. ಬೇಡಿದ್ದೆಲ್ಲ ಸಿಕ್ಕಬಹುದೆಂಬ ಭ್ರಮ ದೂರವಾಯಿತು. ಇನ್ನು ಹಿಂದುಸ್ತಾನದ ದೃಷ್ಟಿಯಿಂದ ಆದ ಹಾನಿಯೆಂದರೆ ಅದರ ಅಖಂಡತ್ವವು ಸದ್ಯಕ್ಕಂತೂ ನಷ್ಟವಾಯಿತು. ಆದರೆ ಇನ್ನು ಈ ಜಾತೀಯ (ಮುಖ್ಯವಾಗಿ ಮುಸಲ್ಮಾನರ) ಅಭಿಪ್ರಾಯದಂತೆ ನಡೆಯುವ ಪ್ರಸಂಗವು ಬರಲು ಕಾರಣವಿಲ್ಲ. ನೋ ೧೬ರ ಯೋಜನೆಯಲ್ಲಿ ಅದೊಂದು ಮುಖ್ಯವಾದ ಕರಾರು ಇತ್ತು. ಯಾವದೇ ವಿಷಯದಲ್ಲಿ ಜಾತೀಯ ದೃಷ್ಟಿಗೆ ಮಹತ್ವ ಕೊಡುವ ಗುದ್ದಿಯು ಹಿಂದುಸ್ತಾನದ ಕೊರಳಲ್ಲಿ ಕಟ್ಟಲಾಗಿತ್ತು. ಅದು ಇದರಲ್ಲಿಲ್ಲ. ಆದುದರಿಂದ ಇನ್ನು ಹಿಂದುಸ್ತಾನದ ಮಟ್ಟಿಗಾದರೂ ಹಿಂದು ಮುಸಲ್ಮಾನ ಎಂಬ ತೊಡಕಿನಿಂದ ಮುಕ್ತರಾಗಿ ನಾವು ಇದೊಂದೇ ಒಂದು ಜನಾಂಗ ಎಂಬ ದೃಷ್ಟಿಯಿಂದ ಬೆಳವಣಿಗೆ ನಡೆಸಲು ಆಸ್ಪದವಾಯಿತು. ಇದು ಪ್ರತ್ಯಕ್ಷ ಅಮಲಿನಲ್ಲಿ ಬರಲು ಅನೇಕ ತೊಡಕುಗಳಿವೆ ಎಂಬ ಮಾತು ನಿಜ. ಆದರೆ ಅದೆಲ್ಲ ಕೆಲಸ ನಡೆದಾಗಲೆ ತಿಳಿಯತಕ್ಕ ಸಂಗತಿ.

x x x

ಈ ಸಂದರ್ಭದಲ್ಲಿ ಎ. ಐ. ಸಿ. ಸಿ. ಯಲ್ಲಿ ಸರದಾರ ವಲ್ಲಭಭಾಯಿ ಪಟೇಲರು ಮಾಡಿದ ಭಾಷಣವು ಅತ್ಯಂತ ಮನನೀಯವಾಗಿರುವದು. ಹೋದ ಹಿಂದುಸ್ತಾನದ ಭಾಗದ ಬಗ್ಗೆ ದುಃಖಿಸುತ್ತ ಕೂಡದೆ, ಘಾದನಾಪರರಾಗಿ ಅನ್ಯರ ಮೇಲೆ ದೋಷ ಹೊರಿಸುತ್ತ ನಡೆಯದೆ ಶೇಷವಾದ ಹಿಂದುಸ್ತಾನದ ಬಲವನ್ನು ಒಕ್ಕಟ್ಟಿನಿಂದ ಬೆಳೆಸಿ ಸಮರ್ಥವಾದ ಸೈನ್ಯ, ಅಭಿವೃದ್ಧವಾದ ಉದ್ಯೋಗಗಳು, ಒಕ್ಕಟ್ಟಿನ ಜನಾಂಗ ಇವುಗಳನ್ನು ಸಿದ್ಧಪಡಿಸಿದರೆ ನಾವು ಜಗತ್ತಿಗೆಯೆ ಪಾಠಕಲಿಸಬಹುದು ಎಂದು ಹೇಳಿದರು. ಆದರೆ ನಮ್ಮ ನಮ್ಮಲ್ಲಿ ಕಾಂಗ್ರೆಸ್ಸು, ಸೋಶಲಿಸ್ಟ್, ಕಮ್ಯೂನಿಸ್ಟ ಎಂಬ ಭೇದಗಳನ್ನು ಇಟ್ಟುಕೊಂಡು ಸಾಗಿದರೆ ಯಾವದೂ ಸಾಧ್ಯವಾಗುವದು ಕಠಿಣ, ಎಂಬ ಮುಂತಾದ ಮಾತುಗಳನ್ನು ಅವರು ಹೇಳಿದರು.

ಏನೇ ಇರಲಿ ಯಾವ ವಿಷ ಬೀಜದ ಮೂಲಕ ಅಖಂಡ ಹಿಂದುಸ್ತಾನವು ತುಂಡಾಗುವ ಪ್ರಸಂಗವು ಬಂದಿತೊ ಅದು ಪುನಃ ಹಿಂದುಸ್ತಾನದಲ್ಲಿ ಬೆಳೆಯದಂತೆ ಮಾಡುವದು ಮುತ್ಸದ್ದಿಗಳ ಕರ್ತವ್ಯವಿರುವದು. ಅಲ್ಪಸಂಖ್ಯಾಕರ ಹೆಸರುಗೊಂಡು ಬೆಳೆದು, ಪ್ರತ್ಯೇಕ ಮತದಾರ ಸಂಘಗಳ ಮೂಲಕ ಬೇರು ಬಿಟ್ಟು, ಈ ವಿಷ ಬೀಜವು ಪ್ರತ್ಯೇಕ ರಾಷ್ಟ್ರದ ಬೇಡಿಕೆಯಲ್ಲಿ ಪರಿಣಮಿಸಿತು. ವ್ಯಕ್ತಿ, ಜಾತಿ, ಗುಂಪು ಮುಂತಾದವುಗಳೆಲ್ಲ ರಾಷ್ಟ್ರದ ಸಂಘಟನೆಗೆ ಪೋಷಕವಾಗದೆ ಬಾಧಕವಾಗತೊಡಗಿದರೆ ಯಾವ ರಾಷ್ಟ್ರವು ಬದುಕಬಲ್ಲುದು? ಆದುದರಿಂದ ಇನ್ನಾದರೂ ನಾವು ಜಾತಿಭೂತವನ್ನು ಪೂರ್ಣವಾಗಿ ರಸಾತಲಕ್ಕೆ ಅಟ್ಟದಿದ್ದರೆ ನಮಗೆ ತರಣೋಪಾಯವಿಲ್ಲ. ಈ ಮಾತನ್ನು ನಾವು ಕಲಿಯಲಿಕ್ಕೆ ಬೇಕು.

ಅಂತರ್ ರಾಷ್ಟ್ರೀಯ

(೫ನೇ ಪುಟದಿಂದ)

ಸರಕಾರ ಚೀನ ಸರಕಾರಕ್ಕೆ ಕೊಟ್ಟ ಉತ್ತರದಲ್ಲಿ ಮಂಗೋಲ ಸೈನಿಕರು ಸಿಂಕಿಯಾಂಗಿನ ಮೇಲೆ ದಾಳಿ ಮಾಡಿದ್ದೇ ಸುಳ್ಳೆಂದೂ ಬದಲಿಗೆ ಚೀನಿ ಸರಕಾರದ ಸೈನಿಕರೆ ಮಂಗೋಲ ಪ್ರದೇಶದ ಮೇಲೆ ನುಗ್ಗಿದವೆಂದೂ ಆರೋಪಿಸಿದೆ. ಪೈತ್ಯಾಶಾನ್ ಪರ್ವತಶ್ರೇಣಿಯ ಮೇಲೆ ಮಂಗೋಲ ಸೈನಿಕರು ಏರಿ ಹೋಗಿದ್ದರೆಂದು ಹೇಳಲಾಗಿತ್ತು. ಆದರೆ ಈ ಪರ್ವತ ಮಂಗೋಲ ರಾಜ್ಯದಲ್ಲೇ ಇದೆ. ಆದರಿಂದ ಇದಿ ಶುದ್ಧ ಎಷ್ಟು ಸುಳ್ಳೆಂಬುದು ವ್ಯಕ್ತವಾದೀತು, ಎಂದಿದೆ ಅದು. ಮಂಗೋಲ ರಾಜ್ಯದಲ್ಲಿ ಚೀನಿ ಕಮ್ಯುನಿಸ್ಟರ ಸೈನ್ಯಕ್ಕೆ ಯಾವುದೋ ವಿದೇಶಿ ರಾಜ್ಯವೊಂದು (ಅಂದರೆ ರಶಿಯಾ) ತರಬೇತಿ ಕೊಡುತಿದೆಯೆಂಬ ಚೀನಿ ಪತ್ರಿಕೆಗಳ ಆರೋಪವನ್ನೂ ಅಲ್ಲಗಳೆಯಲಾಗಿದೆ. ತಮ್ಮ ಸೈನ್ಯಕ್ಕೆ ಅಮೇರಿಕೆಯ ಸಹಾಯ ದೊರೆತಿರುವದನ್ನು ಮುಚ್ಚಿಕೊಳ್ಳಲು ಚಿಯಾಂಗರು ಈ ಆರೋಪ ಮಾಡಿದ್ದಾರಂತೆ.

ಅತ್ತ ಮಂಚೂರಿಯಾದ ರಾಜಧಾನಿಯಾದ ಮುಕ್ಡೆನ್ ನಗರದ ಸುತ್ತ ಚೀನಿ ಕಮ್ಯೂನಿಸ್ಟರು ಬಿಗಿಯಾದ ಮುತ್ತಿಗೆ ಹಾಕಿದ್ದಾರೆ. ಚಿಯಾಂಗ ಸೈನ್ಯಕ್ಕೆ ಸಂಪರ್ಕವೇ ತಪ್ಪಿದೆ.

ನಿಧನ ಹೊಂದಿದ ಜೋಧಪುರ ಮಹಾರಾಜರ ಗೌರವಾರ್ಥವಾಗಿ ಬೆಂಗಳೂರು ಮತ್ತು ಮೈಸೂರುಗಳಲ್ಲಿರುವ ಎಲ್ಲ ಸರಕಾರೀ ಕೋರ್ಟು ಕಚೇರಿಗಳೂ ವಿದ್ಯಾಸಂಸ್ಥೆಗಳೂ ಜೂನ ೧೧ ರಲ್ಲಿ ಮುಚ್ಚಲ್ಪಟ್ಟಿದ್ದವು.

ಬೆಂಗಳೂರು-ಮೈಸೂರು

ಬೆಂಗಳೂರು ಹೆಲಸುಂಗಲ ರಸ್ತೆಯಲ್ಲಿ ಜೂನ ೧೦ ರ ಸಂಜೆ ಘೋರತರವಾದ ಮೋಟಾರು ಅಪಘಾತ ನಡೆದು ಮಲ್ಲೇಶ್ವರದ ನಿವಾಸಿಗಳೂ ನಗರದ ಗಣ್ಯ ಪತಿಕೋದ್ಯಮರೂ ಆದ ಶ್ರೀ ಕೆ. ವಾಸುದೇವ ಮೂರ್ತಿಯವರು ಸ್ಥಳದಲ್ಲಿಯೇ ಮರಣಹೊಂದಿದರು. ಅವರ ಇಬ್ಬರು ಮಕ್ಕಳಿಗೆ ಬಲ್ಲನು ಆಸ್ಪತ್ರೆಗೆ ಒಯ್ಯುತ್ತಿದ್ದಾಗ ಮಾರ್ಗದಲ್ಲಿಯೇ ಮಡಿದರೆಂದೂ ಮತ್ತೊಬ್ಬನು ಚಿಕಿತ್ಸೆ ಪಡೆಯುತ್ತಿದ್ದಾನೆಂದೂ ವರದಿಯಾಗಿದೆ.

ಸರಕಾರೀ ಕೆಳವರ್ಗ ನೌಕರರ ಸಭೆ ಜೂನ ೧೦ ರಲ್ಲಿ ಸರಕಾರೀ ಸಾಬೂನು ಕಾರ್ಖಾನೆಯ ಮೈದಾನದಲ್ಲಿ ಶ್ರೀ ಜಿ ವಿ ರಮೇಶರವರ ಅಧ್ಯಕ್ಷತೆಯಲ್ಲಿ ಜರುಗಿತು.

ಮೈಸೂರು ಮಿಲ್ಸ್ ಕೆಲಸಗಾರರ ಸಭೆಯು ಜೂನ ೯ ರಲ್ಲಿ ಮಲ್ಲೇಶ್ವರಂ ಮೈದಾನದಲ್ಲಿ ಶ್ರೀ ಕೃಷ್ಣರವರ ಅಧ್ಯಕ್ಷತೆಯಲ್ಲಿ ನಡೆದು ಕಾರ್ಖಾನೆಗಳಲ್ಲಿ, ತುಟ್ಟಿಭತ್ತೆ ಇತ್ಯಾದಿಗಳ ಬಗ್ಗೆ ಬೇಡಿಕೆಗಳು ಮುಂಡಿಸಲ್ಪಟ್ಟವು.

ಬೆಂಗಳೂರು ವಿದ್ಯಾರ್ಥಿ ಮಹಾಸಂಘದ ಪ್ರತಿನಿಧಿಗಳ ನಿಯೋಗವೊಂದು ಜೂನ ೭ ರಲ್ಲಿ ವಿದ್ಯಾಸಚಿವರಾದ ಡಾ ರಾಮಣ್ಣನವರನ್ನು ಭೆಟ್ಟಿಮಾಡಿ ವಿದ್ಯಾರ್ಥಿಗಳ ವಸತಿ ಸೌಕರ್ಯಗಳ ಬಗ್ಗೆ ತಮ್ಮ ಸಲಹೆಗಳನ್ನೊಳಗೊಂಡ ಅಹವಾಲು ಪಟ್ಟಿಯೊಂದನ್ನು ಅವರ ಮುಂದಿಟ್ಟರು. ಸಚಿವರು ಸಹಾನುಭೂತಿಯಿಂದ ಎಲ್ಲವನ್ನೂ ಪರಿಶೀಲಿಸುವದಾಗಿ ಭರವಸೆಯಿತ್ತರೆಂದು ತಿಳಿದು ಬಂದಿದೆ.

ಶೈವ ಗುರುಗಳಾದ ಶ್ರೀ ಸೋಮಪುರ ಶಿವಶರ್ಮರು ಬೆಂಗಳೂರು ನಗರಕ್ಕೆ ರಾಯ ಚೂರಿನಿಂದ ಪಾದಚಾರಿಗಳಾಗಿ ಜೂನ ೧೨ರಲ್ಲಿ ಆಗಮಿಸಿದರು.

ಬೆಂಗಳೂರಿನ ಅರಳಿಯ ಪೇಟೆಯಲ್ಲಿರುವ ದರಿದ್ರನಾರಾಯಣ ಸಂಘದ ಸಾಮಾನ್ಯ ಸದಸ್ಯರ ಸಭೆಯು ಜೂನ ೧೮ ರಲ್ಲಿ ಬ್ರಹ್ಮಸಮಾಜ ಕಾರ್ಯಾಲಯದಲ್ಲಿ ಸೇರಿತ್ತು. ಸಂಘದ ಅಧ್ಯಕ್ಷರಾದ ಶ್ರೀ ಗಾಂಧೀನಹಳ್ಳಿ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಕಾರ್ಯದರ್ಶಿಗಳು ಕಳೆದವರ್ಷದ ವರದಿಯನ್ನೋದಿದರು.

ದಿವಂಗತ ಎಂ, ಕೇಶಯ್ಯಂಗಾರರ ಸ್ಮಾರಕ ಟೆನ್ನಿಸ್ ಪಂದ್ಯದಲ್ಲಿ ಜೂನ ೧೪ ರಲ್ಲಿ ಬೌರಿಂಗ್ ಸಂಸ್ಥೆಯವರು ಸೆಂಟ್ರಲ್ ಕಾಲೇಜಿನವರನ್ನು ಸೋಲಿಸಿದರು. ಜಿಲ್ಲಾ ಕಲೆಕ್ಟರರಾದ ಶ್ರೀ ಎನ್ ಪುಟ್ಟರಂಗಸ್ವಾಮಿಯವರು ಬಹುಮಾನ ಹಂಚಿದರು.

ಮದ್ರಾಸು ಮತ್ತು ಮುಂಬಯಿಯಂತಹ ಮುಖ್ಯನಗರಗಳಲ್ಲಿರುವ ಮಾದರಿಯಲ್ಲಿ ಬೆಂಗಳೂರು ನಗರದ ಪೋಲೀಸ್ ದಳವನ್ನು ಈಗ ಪುನರ್ವ್ಯವಸ್ಥೆಗೊಳಿಸಲು ಸರಕಾರವು ಆಜ್ಞೆ ಮಾಡಿದೆ.

ಮೈಸೂರು ಪೌರಸಭೆಯು ಮುಂಬರಿದ ಸಭೆಯು ಜೂನ ೧೮ ರಲ್ಲಿ ಸೇರಿತ್ತು. ಜೋಧಪುರದ ಮಹಾರಾಜರ ನಿಧನದ ಬಗ್ಗೆ ಸಂತಾಪ ಸೂಚಿಸಿ ಸಭೆಯನ್ನು ಪುನಃ ೧೮ಕ್ಕೆ ಮುಂಬರಿಸಲಾಯಿತು.

ಮೈಸೂರು ಪೌರಸಭೆಯ ಅಧ್ಯಕ್ಷರ ಮೇಲೆ ಅವಿಶ್ವಾಸ ಸೂಚಿಸಲು ಮೈಸೂರು ಕಾಂಗ್ರೆಸ್ಸಿನ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ ಪಕ್ಷದವರು ಕೂಡಿಸಿದ ಸಭೆಯು ಅಕ್ರಮವೆಂದು ಸರಕಾರದವರು ಆಜ್ಞೆ ಮಾಡಿದ್ದಾರೆ.


ಮೈಸೂರು ಜಿಲ್ಲಾ ಬೋರ್ಡಿಗೆ ಕಾಂಗ್ರೆಸಿಗರಾದ ಶ್ರೀ ಎಚ್ ಎಂ ಚನ್ನಬಸಪ್ಪನವರು ಜೂನ ೧೬ ರಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಆರಿಸಿಬಂದರು.

ಜೂನ ೧೬ರಲ್ಲಿ ನಡೆದ ಬೆಂಗಳೂರಿನ ಜಿಲ್ಲಾ ಬೋರ್ಡ ಚುನಾವಣೆಯಲ್ಲಿ ಶ್ರೀ ಗುರುವಾರೆಡ್ಡಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಮೈಸೂರು ಪೋಲಿಸ್ ಇಲಾಖೆಯ ಟ್ರಾನ್ಸ್ ಎಂಡಾಳಕ್ಕಿಗೆ 'ಡಬಿಗ್ಸ್ಟೇಟ್'ನಲ್ಲಿ ೧೯೦೦೦ ರೂ ಲಭಿಸಿದೆ.

ಸಂಸ್ಥಾನದ ಕಂದಾಯಮಂತ್ರಿಗಳಾದ ಶ್ರೀ ಜೆ. ಅಪ್ಪಾಜಿಗೌಡರು ಆಗಲೆ ಬೆಂಗಳೂರಿನ ಅಶಕ್ತ ಪೋಷಕ ಸಭೆಯ ಆಜೀವ ಸದಸ್ಯರಿದ್ದು ಮತ್ತೆ ೧೦೦ ರೂಪಾಯಿಗಳನ್ನು ಉದಾರದಾನ ಮಾಡಿದ್ದಾರೆ.

ಸರ್. ಸಿ. ವಿ. ರಾಮನ್ನರನ್ನು ರಶಿಯದ ವಿಜ್ಞಾನ ಕೇಂದ್ರದವರು ಸರ್. ಸಿ. ವಿ. ರಾಮನ್ನರು ತಮ್ಮ ಸಂಸ್ಥೆಯ ಸದಸ್ಯರನ್ನಾಗಿ ನಿಯಮಿಸಿ ರಶಿಯಕ್ಕೆ ಬರಬೇಕೆಂದು ಆಮಂತ್ರಿಸಿದ್ದಾರೆಂದು ತಿಳಿದುಬಂದಿದೆ.



ಮುಂಬಯಿ ಶೇರ ಪೇಟೆ

ತಾ. ೧೮

ಟಾಟಾ ಕಂಪನಿಯಲ್ಲಿ ಉತ್ಪಾದನೆ ಕಡಿಮೆಯಾಗಿದೆ, ಸಂಪು ಪ್ರಾರಂಭವಾಗುವದು ಎಂದು ಮೊದಲಾಗಿ ಸುದ್ದಿಯೆದ್ದು ಆ ಪಾಲುಗಳು ಸ್ವಲ್ಪ ಮಟ್ಟಿಗೆ ಇಳಿಮುಖವಾದವು. ಟಾಟಾ ಡೆಪರ್ಡ ೧೯೪೦-೦-೦ ಕ್ಕಿಳಿದುದು ೨೦೫೦—೦—೦ಕ್ಕೇರಿ ತಿರುಗಿ ೧೯೭೫-೦-೦ ಕ್ಕೆ ಬಂದಿತು. ಡಾಯಿಂಗ್ ೧೦೭೩—೮—೦ ರಿಂದ ೧೧೩೭-೦-೦ ಕ್ಕೇರಿ ೧೧೦೭—೦—೦ ಕ್ಕೂ ಫಿನ್ಲೆ ೩೦೯-೦-೦ ರಿಂದ ೩೦೯-೦-೦ ಕ್ಕೇರಿ ೩೦೬-೦-೦ ಕ್ಕೂ ಕೋಹಿನೂರು ೬೨೯-೦-೦ ರಿಂದ ೬೪೩-೮-೦ ಕ್ಕೇರಿ ೬೪೦-೦-೦ ಕ್ಕೂ ಸ್ವದೇಶಿ ೬೩೪-೦-೦ ರಿಂದ ೬೬೧-೦-೦ ಕ್ಕೇರಿ ೬೫೫—೦—೦ ಕ್ಕೂ ಗೇಕಾಕ ೩೧೮—೦—೦ ರಿಂದ ೩೩೨-೦-೦ ಕ್ಕೂ ಸ್ಥಿತ್ಯಂತರ ಹೊಂದಿದವು. ಇಂಡಿಯನ್ ಅಯರ್ನ ಮತ್ತು ಸ್ಟೀಲ ೨೬೯—೦—೦ ರಿಂದ ೨೭೬-೦-೦ ಕ್ಕೇರಿ ೨೭೩-೦-೦ ಕ್ಕೆ ಮರಳಿವರೆ ಅಸೋಸಿಯೇಟೆಡ್ ಸಿಮೆಂಟ್ಸ ೧೭೫—೦—೦ ರಿಂದ ೧೭೩-೮-೦ ಗಿಳಿಯಿತು. ಬ್ಯಾಂಕುಗಳಲ್ಲಿ ಸೆಂಟ್ರಲ್ ೯೮-೮-೦ ರಿಂದ ೯೯—೦—೦ ರ ನಡುವೆ ತುಳಿಯುತಿದ್ದರೆ, ಇಂಪೀರಿಯಲ್ ಎಸ್. ಸಿ. ೨೨೩೫-೦-೦ ರಿಂದ ೨೨೪೨-೦-೦ ಕ್ಕೇರಿ ೨೨೪೦-೦-೦ ಕ್ಕೂ ರಿಝರ್ವ ೧೨೦-೮-೦ ಯಿಂದ ೧೨೨-೦-೦ ಕ್ಕೇರಿ ೧೨೦-೮-೦ ಕ್ಕೂ ಮರಳಿದವು. ಜಿ. ಪಿ. ನೋಟು ೧೦೧—೧೦—೦ ರಿಂದ ೧೦೧—೬—೦ ಕ್ಕಿಳಿದು ೧೦೧-೯-೦ ಕ್ಕೇರಿತು.

ಚಿನ್ನ—ಬೆಳ್ಳಿ

ಬುಧವಾರ ಕಟ್ಟೆಯಲ್ಲಿ ವಾಯದಾ ವ್ಯಾಪಾರ ಪ್ರಾರಂಭವಾಗಿದ್ದು ಮೊದಲು ಬೆಲೆ ಸ್ವಲ್ಪ ಇಳಿಯುವ ಲಕ್ಷಣ ಕಂಡುಬಂದರೂ ಸಂಗ್ರಹದ ಅಭಾವ ಮತ್ತು ಆಯಾತಕ್ಕಿರುವ ತಡೆ ಇವುಗಳ ಕಾರಣದಿಂದ ಹಿಂದೆಂದೂ ಇಲ್ಲದ ಮಟ್ಟಕ್ಕೆ ಬೆಲೆಗಳು ಏರಿದವು. ತಯಾರಿ ಚಿನ್ನ ೧೧೨—೧೨—೦ ರಿಂದ ೧೧೫—೧೦—೦ ಕ್ಕೇರಿತು. ವಾಯದಾ ೧೧೫—೪—೦. ಬೆಳ್ಳಿ ತಯಾರಿ ೧೭೦—೧೨—೦ ರಿಂದ ೧೭೭—೦—೦ ಕ್ಕೇರಿತು. ವಾಯದಾ ೧೭೭ - ೨—೦

ಅರಳೆ ಪೇಟೆ

ನಿರ್ಯಾತದ ಮೇಲಿನ ನಿರ್ಬಂಧಗಳನ್ನು ಸಡಿಲಗೊಳಿಸಿರುವದರಿಂದ ಅರಳೆ ಪೇಟೆ ಸುಧಾರಿಸಿತು. ಹೊರಗಿನ ಗಿರಾಕಿಗಳೂ ದೇಶೀ ಗಿರಣಿಗಳೂ ಕೊಳ್ಳಲು ಬಂದಿವೆ. ತಯಾರಿ ಅರಳೆ ೪೩೭-೩-೦ ರಿಂದ ೪೩೩-೧೨-೦ ಕ್ಕಿಳಿಯಿತು. ಸೆಪ್ಟೆಂಬರ ವಾಯದಾ ೪೪೪-೧೨-೦ ರಲ್ಲಿದೆ.

ಎಣ್ಣೆಕಾಳು

ಶೇಂಗಾ	೧೫೭-೦-೦
ಅಗಸಿ	೨೭-೨-೦
ಅಗಸಿ ಎಣ್ಣೆ	೧೯-೮-೦

ಸಾಂಗಲಿ ಪೇಟೆ

ಅರಿಷಿಣ ಹೇರು	೧೦೦-೧೦೪
ಮೆಣಸಿನಕಾಯಿ ಹೇರು ,,	೧೦೦-೧೫೦
ಶೇಂಗಾ ಖಂಡಿ	೧೨೭

ಶಿವಮೊಗ್ಗೆ

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೪೯-೫೦
,, ,, ೨	೪೬-೪೮
ಅನ್ನಾವರಂ	೪೦-೪೪
ಕೊರಸಾಲು	೪೧-೪೪
ಚಿಟ್ಟೆ	೨೬-೨೯
ಬೀರೂರು ತುಡಕೆ	೪೬—೪೭
ಮೆಣಸು	೨೨—
ಅಂಟಕಾಯಿ	೯—೮—೦

ಹುಬ್ಬಳ್ಳಿ

ಜಯವಂತ ಹತ್ತಿ	ನಂ. ೧	೨೬೦-೨೭೦
"	ನಂ. ೨	೨೫೦-೨೫೫
"	ನಂ. ೩	೨೩೦-೨೪೫
ಆಪಲಂಡ ಹತ್ತಿ		೨೫೫-೨೭೦
ಜಿನ ಹೊಸದು		೧೬೫-೧೭೨
ಜಿನ ಹಳೇದು		೧೭೫-೧೮೦
ಡಬಲರೋಲ		೧೫೫-೧೬೫
ಸಾಜಿನ		೧೬೦-೧೭೦

ಪತ್ರಿಕೆಗಳ ಮೇಲೆ ನಿರ್ಬಂಧದ ಮಸೂದೆ

ಮೈಸೂರು ಪ್ರ. ಪ್ರ. ಸಭೆಯಲ್ಲಿ ಬಿದ್ದು ಹೋಯಿತು

ಪ್ರತಿಯೊಬ್ಬ ಪತ್ರಿಕಾ ಕರ್ತರೂ ತಾವು ಮುದ್ರಿಸುವ ಪತ್ರಿಕೆಗಳ ಪ್ರತಿಸಂಚಿಕೆಯ ಎರಡೆರಡು ಪ್ರತಿಗಳನ್ನು ಸರಕಾರಕ್ಕೆ ಯಾವ ವೆಚ್ಚವೂ ಬೀಳದಂತೆ ನಿಯಮಿತ ಅಧಿಕಾರಿಗೆ ನಿಯಮಿತ ಸ್ಥಳದಲ್ಲಿ ತಪ್ಪದೆ ತಲುಪಿಸಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಅವರು ಕಾನೂನಿನ ಪ್ರಕಾರ ಶಿಕ್ಷಾರ್ಹರು—ಎನ್ನುವ ಪತ್ರಿಕಾ ಕಾಯಿದೆಗಳ ತಿದ್ದುಪಡಿ ಮಸೂದೆಯು ಪ್ರಜಾಪ್ರತಿನಿಧಿ ಸಭೆಯಲ್ಲಿ ಜೂನ ೯ ರಲ್ಲಿ ಬಹುಮತದಿಂದ ತಿರಸ್ಕೃತವಾಯಿತು. ಕಾಂಗ್ರೆಸ್ ಸದಸ್ಯರು ಈ ಮಸೂದೆಯ ಚರ್ಚೆಯಲ್ಲಿ ಭಾಗವಹಿಸಿದುದರಿಂದ ಮಸೂದೆ ಬಿದ್ದು ಹೋಯಿತು.

ಮಸೂದೆಯನ್ನು ಅನುಮೋದಿಸಿದವರಲ್ಲಿ ರಾ ಬ ರಾಮಸ್ವಾಮಿ, ಶ್ರೀ ದೇವರಾಜೇ ಅರಸು ಮುಂತಾದವರೂ, ವಿರೋಧಿಸಿದವರಲ್ಲಿ ಶ್ರೀಗಳಾದ ಸೈಯದ ಗೌಸ ಮೋಹಿಯುದ್ದೀನರು, ಎಸ್ ವಿ ಕೃಷ್ಣಮೂರ್ತಿರಾಯರು, ಬಿ ಎನ್ ಗುಪ್ತರು ಮೊದಲಾದವರು ಪ್ರಮುಖರು.

ಸರಕಾರದ ಕಾಯಿದೆ ಕಾರ್ಯದರ್ಶಿಗಳಾದ ಶ್ರೀ ಎಸ್. ಕನಕರತ್ನರಾಜರು ಸರಕಾರದ ಪರವಾಗಿ ಉತ್ತರ ಕೊಡುತ್ತ ಜೊತೆಗಾರ ಸರಕಾರಗಳಿರುವ ಇಂಗ್ಲಂಡು, ಅಮೇರಿಕೆ ಮುಂತಾದ ದೇಶಗಳಲ್ಲೂ ಪತ್ರಿಕೆಗಳ ಮೇಲೆ ಹಲವು ನಿರ್ಬಂಧಕ ಕಾನೂನುಗಳಿವೆಯೆಂಬುದನ್ನು ಸಭೆಯ ಗಮನಕ್ಕೆ ತಂದರು. ಮತಗಣನೆ ನಡೆದಾಗ ಪರವಾಗಿ ೧೦೪ ಜನರೂ ವಿರೋಧವಾಗಿ ೧೧೧ ಜನರೂ ಮತಕೊಟ್ಟದ್ದರಿಂದ ಮಸೂದೆ ಬಿದ್ದು ಹೋಗಿ ಕಾಂಗ್ರೆಸ್ಸಿಗರು "ವಂದೇ ಮಾತರಂ" ಎಂದು ಘೋಷಿಸಿದರು.

ಅನಂತರ ಈ ವರ್ಷ ಹೆಂಡ ಮತ್ತು ಸರಾಯಿ ಅಂಗಡಿಗಳನ್ನು ಲಿಲಾವು ಮಾಡದಿರುವುದರಿಂದ ಸಂಸ್ಥಾನದ ಆದಾಯ ಕಡಿಮೆ ಯಾಗಿರುವದಲ್ಲದೆ ಕಳೆದ ವರ್ಷದ ಕಂತ್ರಾಟುದಾರರಿಗೆ ಮಿತಿಮೀರಿದ ಲಾಭಸಿಗುವಂತಾಗಿದೆಯೆಂದೂ ಇದರಿಂದ ಕಂತ್ರಾಟುದಾರರಿಗೆ ಪೂರ್ಣಾಧಿಕಾರ ಕೊಟ್ಟಂತಾಗಿದೆಯೆಂದೂ ಶ್ರೀ ಎಸ್. ರಾಮಪ್ಪನವರು ತಂದಿದ್ದ ನಿಲುವಳಿ ಸೂಚನೆ ಚರ್ಚೆಯಲ್ಲೇ ಮುಕ್ತಾಯವಾಯಿತು. ಎಣಿಕೆ ತೆಗೆದುಕೊಂಡಾಗ ಕೋರಂ ಇಲ್ಲವಾದುದರಿಂದ ಅಧಿವೇಶನವನ್ನು ಮುಕ್ತಾಯಗೊಳಿಸಲಾಯಿತು.

ಇಂಡೋನೇಶಿಯದಲ್ಲಿ ಮತ್ತೆ ಹೋರಾಟ?

ಇಂಡೋನೇಶಿಯನ್ ಪ್ರಜಾರಾಜ್ಯ ಸರಕಾರ ಡಚ್ ರಾಯಸಕ್ಕೆ ಕೊಟ್ಟ ಉತ್ತರದಲ್ಲಿ ಹಾಕಿದ ಕರಾರುಗಳು ಡಚ್ಚರಿಗೆ ಒಪ್ಪಿಗೆಯಾಗಿಲ್ಲವೆಂದೂ ಅವರು ಇಂಡೋನೇಶಿಯನ್ನರ ಮೇಲೆ ಮತ್ತೆ ದಾಳಿಯನ್ನು ಪ್ರಾರಂಭಿಸಬಹುದೆಂದೂ ಭಯವುಂಟಾಗಿದೆ. ಇಂಡೋನೇಶಿಯಾ ಸಂಯುಕ್ತ ರಾಜ್ಯಸ್ಥಾಪನೆಯ ಪೂರ್ವಭಾವಿಯಾಗಿ ಸ್ಥಾಪಿಸಬೇಕಾದ ನಡುಗಾಲ ಸರಕಾರಕ್ಕೆ ಹಿಂದೀ ನಡುಗಾಲ ಸರಕಾರಕ್ಕೆ ಕೊಡಲ್ಪಟ್ಟ ವಿಶಾಲ ಅಧಿಕಾರಗಳು ಬೇಕೆಂದು ಮೊದಲಾಗಿ ಇಂಡೋನೇಶಿಯಾದ ಬೇಡಿಕೆಯಿತ್ತು. ಆದರೆ ಡಚ್ಚ ಸರಕಾರ ಹಲವು ನೆವ ತೆಗೆದು ಇದನ್ನು ನಿರಾಕರಿಸುವಂತೆ ತೋರುತ್ತದೆ. ಪರಿಣಾಮವಾಗಿ ಉಂಟಾಗಬಹುದಾದ ಪರಿಸ್ಥಿತಿಯನ್ನು ಎದುರಿಸಲು ಇಂಡೋನೇಶಿಯನ್ ಸರಕಾರ ತನ್ನ ಸೈನ್ಯವನ್ನು ಸಜ್ಜುಗೊಳಿಸುತಿದೆ. ಪರಿಸ್ಥಿತಿ ಗಂಭೀರವಾಗಿದೆಯೆಂದು ಇಂಡೋನೇಸಿಯನ್ ವರ್ಗಗಳು ಹೇಳುತ್ತವೆ. ಒಪ್ಪಂದವಾಗದಿದ್ದರೆ ತೃತೀಯ ಪಕ್ಷವೊಂದರ—ಬಹುಶಃ ಬ್ರಿಟಿಶರ — ಮಧ್ಯಸ್ಥಿಯನ್ನು ಇಂಡೋನೇಶಿಯನ್ನರ ಕೋರಬಹುದು ಅಥವಾ ಯುಕ್ತರಾಷ್ಟ್ರ ಸಂಘಕ್ಕೆ ಅರ್ಜಿ ಮಾಡಬಹುದು ಇದಲ್ಲದೆ ತನ್ನ ಸ್ಥಿತಿಯನ್ನು ಬಲಗೊಳಿಸಲು ಇಂಡೋನೇಶಿಯಾ ಬೇರೆ ಬೇರೆ ರಾಷ್ಟ್ರಗಳೊಡನೆ ಸಂಧಾನ ಮಾಡತೊಡಗಿದೆ. ಇಜಿಪ್ತದೊಡನೆ ಅದು ಈಗಾಗಲೆ ಪರಸ್ಪರ ಸಹಾಯ ಒಪ್ಪಂದ ಮಾಡಿಕೊಂಡಿದ್ದು ಇತರ ಅರಬ ರಾಷ್ಟ್ರಗಳನ್ನೂ ಕೇಳಿಕೊಳ್ಳಲಿದೆ.

ಮೈಸೂರು ಘಟನಾ ಸಮಿತಿ ಸೇರುವುದು

ದಿವಾನರ ಘೋಷಣೆ

ಮೈಸೂರು ದಿವಾನರಾದ ಸರ್. ಎ. ರಾಮಸ್ವಾಮಿ ಮೊದಲಿಯಾರರು ಜೂನ ೧೭ ರಲ್ಲಿ ಜರುಗಿದ ಪತ್ರಿಕೋದ್ಯೋಗಿಗಳ ಪರಿಷತ್ತಿನಲ್ಲಿ ಮೈಸೂರು ಘಟನಾ ಸಮಿತಿಯಲ್ಲಿ ಸೇರಬೇಕೆಂದು ನಿರ್ಣಯಿಸಿರುವುದಾಗಿ ಘೋಷಿಸಿದರು.

ತನಗೆ ಹೊಂದಿಕೊಂಡಿದ್ದ ಪ್ರಾಂತಗಳೂ ಸಂಸ್ಥಾನಗಳೂ ಸೇರಿದ ಘಟನಾ ಸಮಿತಿಯನ್ನೇ ಮೈಸೂರು ಸೇರುವುದೆಂದೂ ಅದರಲ್ಲಿ ಭಾಗವಹಿಸಲು ಸಪ್ತಪ್ರತಿನಿಧಿ ಮಂಡಲವೊಂದನ್ನು ಕಳುಹಿಸುವುದೆಂದೂ ಫೆಬ್ರುವರಿಯಲ್ಲಿ ಉಭಯ ಸಂಧಾನ ಸಮಿತಿಗಳಲ್ಲಾದ ಒಪ್ಪಂದದ ಪ್ರಕಾರ ಅದು ಸಮಿತಿಯನ್ನು ಸೇರುವುದೆಂದೂ ಅವರು ಸಾರಿದರು.

ಮೈಸೂರು ಸಂಯುಕ್ತ ಸರಕಾರವನ್ನು ಸೇರುವ ಇಲ್ಲವೆ ಬಿಡುವ ಪ್ರಶ್ನೆಯನ್ನು ಸಂಯುಕ್ತ ಸರಕಾರದ ಘಟನೆಯಲ್ಲಿ ಮೈಸೂರಿನ ವಿಷಯವಾಗಿ ಆಗುವ ವಿಶೇಷ ವ್ಯವಸ್ಥೆಯ ಮೇಲೆ ನಿರ್ಧರಿಸಲಾಗುವುದೆಂದು ಅವರು ವಿಶದಪಡಿಸಿದರು.

ದಕ್ಷಿಣ ಕನ್ನಡ

ಮಂಗಳೂರಿನ ಕೇಂದ್ರ ಮೈದಾನದಲ್ಲಿ ಜೂನ ೮ ರಲ್ಲಿ ದ. ಕ. ಜಿಲ್ಲಾ ಹೊಟೇಲ ಕೆಲಸಗಾರರ ಸಂಘದ ಆಶ್ರಯದಲ್ಲಿ "ತಾಜಮಹಾಲು ಕೆಲಸಗಾರರ ಮುಷ್ಕರ" ವನ್ನು ಕುರಿತು ಸಂಘದ ಅಧ್ಯಕ್ಷರಾದ ಡಾ. ಸಂಜೀವನಾಥರ ಅಧ್ಯಕ್ಷತೆಯಲ್ಲಿ ಕೆಲಸಗಾರರನೇಕರು ಭಾಷಣ ಮಾಡಿದರು.

ಜೂನ ೯ ರಲ್ಲಿ ಕಾಸರಗೋಡಿನ ಬಿ. ಇ. ಎಂ. ಶಾಲೆಯಲ್ಲಿ ಶ್ರೀ ಯು ಕೇಶವರಾವ ಇವರ ಅಧ್ಯಕ್ಷತೆಯಲ್ಲಿ ಕಾರ್ಯದರ್ಶಿಗಳಾದ ಶ್ರೀ ಪಿ. ಪಿ. ಕಡಂಬಳಿತ್ತಾಯರು ಹಿಂದೀ ಪ್ರಚಾರ ಸಮಿತಿಯ ಚಟುವಟಿಕೆಗಳ ವರದಿಯನ್ನೋದಿದರು.

"ಕೆನರಾ ಚೇಂಬರ ಅಫ್ ಕಾಮರ್ಸಿ"ನ ವಾರ್ಷಿಕ ಮಹಾಸಭೆಯು ಜೂನ ೭ ರಲ್ಲಿ ಮಂಗಳೂರಿನಲ್ಲಿರುವ ಚೇಂಬರಿನ ಅಧಿಕೃತ ಕಚೇರಿಯಲ್ಲಿ ಶ್ರೀ ಎ. ದಾಮೋದರ ಪೈಗಳ ಅಧ್ಯಕ್ಷತೆಯಲ್ಲಿ ಸೇರಿ ಮುಂದಿನ ವರ್ಷದ ಅಧಿಕಾರಿಗಳನ್ನು ಆರಿಸಿತು.

ಎಂ. ಕೆ. ನಾಟಕ ಸಭಾ ಕದ್ರಿ, ಮಂಗಳೂರು ಇದರ ಸಭೆಯೊಂದು ಇತ್ತೀಚೆಗೆ ಕದ್ರಿ ವಿದ್ಯಾಭೋಧಿನಿ ಹಾ. ಎ. ಶಾಲೆಯಲ್ಲಿ ಶ್ರೀ ಕೆ ಶ್ರೀನಿವಾಸರ ಅಧ್ಯಕ್ಷತೆಯಲ್ಲಿ ಜರುಗಿ ಕೇರಳದ ಕೇಳಪ್ಪನವರ "ಉತ್ತರ ಮತ್ತು ದಕ್ಷಿಣಕನ್ನಡ ಭಾಗಗಳು ಕೇರಳಕ್ಕೆ ಸೇರಬೇಕು." ಎಂಬುದನ್ನು ಖಂಡಿಸುವ ಠರಾವು ಪಾಸಾಯಿತು.

ಮಂಗಳೂರಿನ ಗೀತಾಮಂದಿರದ ವಾರ್ಷಿಕೋತ್ಸವವು ಜೂನ ೯ ರಲ್ಲಿ ಶ್ರೀ ಕೆ. ವೈ. ಪೂಜಾರಿಗಳ ಅಧ್ಯಕ್ಷತೆಯಲ್ಲಿ ಜರುಗಿ ಶ್ರೀ ಎಂ. ವಿ. ಶಾಸ್ತ್ರಿಗಳು ಗೀತೋಪದೇಶವನ್ನು ಕುರಿತು ಭಾಷಣ ಮಾಡಿದರು.

ಜೂನ ೮ ರಲ್ಲಿ ಐ. ಆರ್. ಆಸರಣ್ಣವರ ಅಧ್ಯಕ್ಷತೆಯಲ್ಲಿ ಅ. ಕ. ಆಯುರ್ವೇದ ಮಂಡಲದ ಸ್ಥಾಯಿ ಸಮಿತಿ ಮಣಿಪಾಲದಲ್ಲಿ ಸೇರಿ ದೇಶೀಯ ವೈದ್ಯರ ನೇಮಕದ ಬಗ್ಗೆ ಸರಕಾರವನ್ನು ಒತ್ತಾಯಿಸುವ, ಮಂಗಳೂರಿನಲ್ಲಿ ಆಯುರ್ವೇದ ಕಾಲೇಜನ್ನು ತೆರಿಯಬೇಕೆನ್ನುವ ಮತ್ತು ಇತ್ತೀಚೆಗೆ ಆರೋಗ್ಯಮಂತ್ರಿಗಳು ಆಯುರ್ವೇದಕ್ಕೆ ಅಪಮಾನವಾಗುವಂತಹ ಭಾಷಣಮಾಡಿದ್ದನ್ನು ಖಂಡಿಸುವ ಗೊತ್ತುವಳಿಗಳು ಪಾಸಾದವು.

ದ. ಕ. ಜಿಲ್ಲಾ ವಾಣಿಜ್ಯ ಸಂಘದ ಮಹಾಸಭೆ ಕಳೆದವಾರ ಮಂಗಳೂರಲ್ಲಿ ಸೇರಿ ಹೊಸವರುಷಕ್ಕೆ ಶ್ರೀ ವಿ ಎಲ್. ಕಾಮತರನ್ನು ಅಧ್ಯಕ್ಷರನ್ನಾಗಿಯೂ ಜ. ಮ. ಅ. ಸಕೂರರನ್ನು ಉಪಾಧ್ಯಕ್ಷರನ್ನಾಗಿಯೂ ಪಿ. ಆರ್ ಶೆಣೈಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಿತು.

ಒಂದು ಕತೆ—

ಮಂಗಲೆಯ ಮಾಂಗಲ್ಯ

—ಕತೆಗಾರ್ತಿ:— ಶ್ರೀಮತಿ ಜಾನಕಿಬಾಯಿ ರೊಟ್ಟಿ ಅವರು.—

ಅಂದು ಭಾನುವಾರ. ಎಲ್ಲರಿಗೂ ಬಿಡುವಿನ ದಿನವಾದ್ದರಿಂದ ರಂಗನೂ ಅವನ ಗೆಳೆಯರೂ ಕೂಡಿ ಅಡ್ಡಾಡಿಕೊಂಡು ಬರಲು ಹೊರಟರು. ಅದು ಶುಕ್ಲಪಕ್ಷವಾದದ್ದರಿಂದ ತಿಂಗಳಿನ ಬೆಳಕು ಚೆನ್ನಾಗಿ ಭೂಮಿತಾಯಿಯನ್ನು ಅಪ್ಪಿಕೊಂಡಿತ್ತು. ಅಲ್ಲಲ್ಲಿ ಬೆಳೆದಿದ್ದ ಗಿಡಮರಗಳ ಚೆಲುವು ಬೆಳುದಿಂಗಳಿನಲ್ಲಿ ಚೆನ್ನಾಗಿ ಒಡೆದು ಕಾಣುತ್ತಿತ್ತು. ಎಲ್ಲರೂ ಮನಸಾರೆ ಹರಟುತ್ತ ತಮಗೆ ಸರಿಯಾದ ಸ್ಥಳವನ್ನು ಹುಡುಕಿದರು. ತಿಂಗಳು ಎಲ್ಲೆಲ್ಲಿಯೂ ಸೃಷ್ಟಿಸೌಂದರ್ಯವಿದೆಯೆಂದು ತನ್ನ ಬೆಳಕಿನಿಂದ ಸ್ಪಷ್ಟಗೊಳಿಸುತ್ತಿದ್ದನು. ಅಲ್ಲಿ ಎಲ್ಲರೂ ಒಂದು ಬಂಡೆಗಲ್ಲಿನ ಮೇಲೆ ಒಟ್ಟಾಗಿ ಕುಳಿತರು. ಹರಟೆಯ ದೇವತೆಗೆ ಎಲ್ಲರೂ ಮನಸಾರೆ ಹೂಮಾಲೆಗಳನ್ನು ಅರ್ಪಿಸಿದರು. ಆದರೆ ರಂಗನು ಮಾತ್ರ ಒಂದು ಪಕಳೆಯನ್ನು ಕೂಡ ಅರ್ಪಿಸಲಿಲ್ಲ. ಅವನ ಮನಸ್ಸಿನ ಯೋಚನೆಯು ಒಂದು ಕಾಡು ಹೂವಿನ ಕೂಡ ನಡೆದಿತ್ತು. ಅವರಲ್ಲಿ ಯಾರಿಗೂ ಇದು ಗೊತ್ತಿರಲಿಲ್ಲ. ಇವನು ಹೀಗೆ ಕುಳಿತಿರುವದನ್ನು ನೋಡಿ ಅವರಲ್ಲಿಯ ಒಬ್ಬನು.

“ಏನು ಅಂಥ ಗಹನ ವಿಚಾರ ನಡೆಸಿದ್ದೀಯಪ್ಪಾ?” ಎಂದು ಕೇಳಿದನು. ಆವಾಗಲೇ ಅವನಿಗೆ ತಾನು ಎಲ್ಲಿ ಯಾರಕೂಡ ಇರುತ್ತೇನೆಂಬುದರ ಅರಿವಾಯಿತು. ಪುನಃ ಅದೇ ಪ್ರಶ್ನೆಯು ಶ್ಯಾಮನಿಂದ ಬಂದಿತು. ಅದನ್ನು ಕೇಳಿ ಅವಾಕ್ಕಾದ. ಏನು ಹೇಳಬೇಕೆಂಬುದು ಅವನಿಗೆ ಹೊಳೆಯಲಿಲ್ಲ.

“ಏನೂ ಇಲ್ಲ, ಸುಮ್ಮನೆ ನಿಮ್ಮ ಮಲ್ಲಿನಾಥಿಯನ್ನು ಕೇಳುತ್ತ ಕುಳಿತಿದ್ದೆ” ಅಂದ. ಯಾರೂ ಇದಕ್ಕೆ ಒಪ್ಪಲಿಲ್ಲ.

“ಎಂದೂ ಹೀಗೆ ಇರದ ನೀನು ಇಂದು ಹೀಗೇಕೆ?” ಎಂದು ಎಲ್ಲರೂ ಅವನನ್ನು ಕಾಡಲಾರಂಭಿಸಿದರು. ಮತ್ತು “ಹೇಳಿದ ವಿನಾ ನಿನ್ನ ಬಿಡುವ ಹಾಗೇ ಇಲ್ಲ” ಎಂದರು. ಅವರ ಮನಸ್ಸಿನ ದೃಢತೆಯನ್ನು ಕಂಡು ರಂಗ ಭೂಮಿಗಿಳಿದ. ಹೇಳದೆ ಬೇರೆ ಮಾರ್ಗವೇ ಇಲ್ಲ ಎಂದುಕೊಂಡ ಮತ್ತೂ ಅದೇ ಪ್ರಶ್ನೆಯೇ ಬಂದಿತು. ಉಪಾಯವಿಲ್ಲ ಎಂದುಕೊಂಡು.

“ಏನು ಮಾಡುತೀರಿ ಬಿಡ್ರೋ ನನ್ನ ಹಾಳರಗಳೆ ತಗೊಂಡು” ಎಂದು ಬಹಳ ನೊಂದ ಮನಸ್ಸಿನಿಂದ ಅಂದ.

ಅವನ ಮನಸ್ಸಿನ ಉದ್ವೇಗವನ್ನು ಕಂಡು ಹಿಡಿದ ರಾಮನು—

“ಮನೆಗೆ ತಿರಗೋಣ ರಾತ್ರಿಯಾಯಿತು” ಅಂದನು.

ಇದನ್ನು ಕೇಳಿ ರಂಗನ ಹೊರಲಾರದಂಥ ಭಾರ ಇಳಿದಂತಾಯಿತು. ಎಲ್ಲರೂ ಮೌನದಿಂದ ತಮ್ಮ ತಮ್ಮ ಮನೆಯನ್ನು ಸೇರಿದರು. ರಂಗನಿಗೆ ಮಾತ್ರ ರಾತ್ರಿಯೆಲ್ಲ ಅದೇ ವಿಚಾರ.

ಆದರೆ ರಂಗನು ತನ್ನ ಪ್ರಯಾಣದ ಹಾದಿಯನ್ನೇ ಬಹಳ ಕಾತರದಿಂದ ಕಾಯುತಿದ್ದ. ಅವನಿಗೆ ಇಲ್ಲಿ ಇರುವದೇ ಬೇಜಾರವಾಯಿತು. ರಂಗನಿಗೆ ತನ್ನ ಪರೀಕ್ಷೆಯ ಫಲಿತಾಂಶ ಏನೋ! ಎಂಬ ಭೀತಿ ಒಳಗೊಳಗೆ ತುಂಬಿತ್ತು. ಅದಕ್ಕೆಂದೇ ಯಾರೊಡನೆಯೂ ಮಾತು ಬೇಡಾಗಿತ್ತು. ತನ್ನೆಲ್ಲ ಗೆಳೆಯರು ಮನೆಗೆ ಹೊರಡುವಾ ಎಂದಾಗ ಅವನ ಮನಸ್ಸು ಹಗುರಾಗಿತ್ತು.

ಸಮಯವೇನು ಬರಲು ವೇಳೆ ಹಿಡಿಯಲಿಲ್ಲ. ಬಂದಿತು. ರಂಗನು ಬಿ.ಎ. ಪರೀಕ್ಷೆಯಲ್ಲಿ ಮೊದಲನೇ ತರಗತಿಯಲ್ಲಿ ಪಾಸಾಗಿದ್ದ. ಅವನ ಎಲ್ಲ ಗೆಳೆಯರೂ ಎರಡನೆ ತರಗತಿಯಲ್ಲಿ ಪಾಸಾಗಿದ್ದರು. ರಂಗನ ವಿಚಾರ ಮುಂದೆ ಓದುವದು ಇತ್ತು. ಅವನ ತಂದೆತಾಯಿಗಳ ವಿಚಾರ ಮನೆಗೆ ಸೊಸೆಯನ್ನು ತರುವದಿತ್ತು. ಒಂದು ಕಡೆ ನೋಡಿಯೂ ಇಟ್ಟಿದ್ದರು, ಅದನ್ನು ರಂಗನು ಮನಸ್ಸಿಲ್ಲದೆ ಕಂಡಿದ್ದ. ದಿನಬೆಳಗಾದರೆ ರಂಗನ ಮನೆಯಲ್ಲಿ ರಗಳೆಯೇನೂ ತಪ್ಪಲಿಲ್ಲ. ಕೊನೆಗೆ ರಂಗನು ಮದುವೆಯಾಗಿ ಮುಂದೆ ಓದುವದೆಂದು ನಿಶ್ಚಯವಾಯಿತು. ಮನಸಿಲ್ಲದೆ ರಂಗನೂ ಮತ ನಿತ್ತನು. ಇನ್ನು ಅವನ ಪ್ರಯಾಣಕ್ಕೆ ಹತ್ತು ಹದಿನೈದು ದಿನಗಳಿದ್ದವು. ಅಷ್ಟರಲ್ಲಿಯೇ ಮದುವೆ ಮುಗಿಸಬೇಕೆಂದು ಹೆಣ್ಣಿನವರಿಗೆ ಪತ್ರ ಬರೆದರು.

ಹೆಣ್ಣಿನ ಊರು ನಾಲ್ಕು ಮನೆಯ ಒಂದು ಹಳ್ಳಿ. ಆ ಊರಲ್ಲಿ ಗುಂಡುರಾಯರದೇ ಶ್ರೇಷ್ಠ ಮೇಲು. ಅಂದರೆ ರಂಗನ ಮಾವಂದಿರದು ಅವರಿಗೆ ಇದ್ದವಳೆಂದರೆ ಒಬ್ಬಳೇ ಒಬ್ಬ ಮಗಳು. ಮಂಗಲಾ. ಮಂಗಲೆ ಯಾವಾಗಲೂ ಸುಮಂಗಲೆಯಾಗಿದ್ದಳು. ಅವಳ ಜನ್ಮದಾರಭ್ಯ ಅವರ ಮನೆತನದ ಕೀರ್ತಿ ಬೆಳೆದಿತ್ತು. ರೂಪದಲ್ಲಿ ಚಲುವೆಯಾಗಿರದಿದ್ದರೂ ಕುರೂಪಿಯೇನೂ ಅಲ್ಲ. ಉಂಡುಟ್ಟು ಸುಖದಿಂದ ಬೆಳೆದ ದೇಹ. ಒಳ್ಳೇ ಯೌವನ ಪ್ರಾಪ್ತವಾದಾಗ ಗುಂಡು ಗುಂಡಾಗಿ ಕಾಣುತ್ತಿದ್ದರೂ ನಯ ಭಯಗಳಿಂದ ಕೂಡಿದ ಅವಳು ಅಷ್ಟೇನೂ ದಿಟ್ಟೆಯಾಗಿರಲಿಲ್ಲ. ನಾಲ್ಕು ಮನೆಯ ಹಳ್ಳಿಯೆಂದ ಮೇಲೆ ಶಾಲೆಯೆಲ್ಲಿಂದ ಬರಬೇಕು? ಅಂದ ಮೇಲೆ ಅವಳು ಅಕ್ಷರಶತ್ರು.

ಮನೆತನವೇನೋ ಶ್ರೀಮಂತವಿದ್ದುದರಿಂದ ರಂಗನ ಅಪ್ಪನು ಲಗ್ನ ಗೊತ್ತು ಮಾಡಿದ್ದರು. ಲಗ್ನವು ಸಮೀಪಿಸಿದ ಹಾಗೆ ರಂಗನ ಎದೆ ಹೊಡೆತವು ಜೋರಾಗಹತ್ತಿತು. ತಾನು ಹೇಗೆ ಅಕ್ಷರಶತ್ರುವಿನ ಕೂಡ ಸಂಸಾರ ಮಾಡಬೇಕೆಂದು ಆಲೋಚಿಸುತ್ತಿದ್ದನು ರಂಗನು ಬಿ ಎ ಪಾಸಾದ ಹುಡುಗ. ಅರ್ಥಾತ್ ಹೊಸ ನಮೂನೆಯ ಹುಡುಗ. ಯಾವಾಗಲೂ ಕಾಲೇಜಿನ ವಿದ್ಯಾರ್ಥಿನಿಯರ ಕೂಡ ಇದ್ದವನಿಗೆ ಇದು ಹೇಗೆ ರುಚಿಸೀತು? ಇವನ ಎದೆಯನ್ನು ದಾಹವು ದಹಿಸುತ್ತಿರುವಾಗ ಗಮನ ಮಾಡುವವರು ಯಾರೂ ಇಲ್ಲವೆಂದು ಅವನು ಮತ್ತಿಷ್ಟು ಕಾತರನಾಗಿದ್ದ. ಲಗ್ನಕ್ಕೆ ಮೂರು ನಾಲ್ಕು ದಿವಸಗಳುಳಿದ್ದವು ಮನೆಯಲ್ಲಿ ಅನೇಕರು ಬಂದಿದ್ದರು. ಇನ್ನೂ ಕೆಲವರು ಬರುವವರಿದ್ದರು. ಲಗ್ನದ ಎಲ್ಲ ವ್ಯವಸ್ಥೆಯು ಒಳ್ಳೆಯ ಭರಾಟಿಯಿಂದ ನಡೆದಿತ್ತು. ಆದರೆ ರಂಗನಿಗೆ ಮಾತ್ರ ಮನೆಯು “ನಂಬರು ಮನೆ”ಯಾಗಿತ್ತು. ಮಧ್ಯಾಹ್ನ ಊಟವಾದ ಮೇಲೆ ಸಂಜೆಯ ವರೆಗೆ ಮೋರೆಯೇ ತೋರಿಸುವದಿಲ್ಲ. ಇದು ಅವನ ಗೆಳೆಯನಾದ ಶ್ಯಾಮನ ಮೂಲಕ ಅವನ ಎಲ್ಲ ಗೆಳೆಯರಿಗೂ ಗೊತ್ತಾಯಿತು. ಆಗ ಅವರಿಗೆಲ್ಲ ತಿಳಿಯಿತು. ಅಂದಿನ ಗಹನ ವಿಚಾರ. ಎಲ್ಲರೂ ಅವನಿಗೆ ಸಹಾನುಭೂತಿಯನ್ನು ತೋರಿಸುವವರೇ ಹೊರತು ಸಂಕಟದಿಂದ ಬಿಡಿಸುವವರು ಯಾರೂ ಇಲ್ಲ.

ಲಗ್ನದ ದಿನವೂ ಬಂದಿತು. ಲಗ್ನವೂ ಆಯಿತು. ಎಲ್ಲವೂ ಮುಗಿಯಿತು. ರಂಗನು ಲಗ್ನವಾದಂದಿನಿಂದ ಮೌನವ್ರತವನ್ನೇ ಹಿಡಿದ. ಹೆಂಡತಿಯಾದವಳನ್ನು ಕಂಣೆತ್ತಿ ಕೂಡ ನೋಡಲಿಲ್ಲ. ಅವನ ಆ ವರ್ತನೆಯನ್ನು ನೋಡಿ ಮಂಗಲೆಗೇನೋ ಒಂದು ಅನುಮಾನ ಹುಟ್ಟಿತು ದೀರ್ಘಕ್ಕೆ ಬರಜಾರದೆಂದು ಅವಳು ತನ್ನ ದುಃಖವನ್ನು ನುಂಗಿಕೊಂಡಳು. ಅವಳದೇನು ಹೆಣ್ಣು ಹೃದಯವಲ್ಲವೆ? ದಿನಂಪ್ರತಿ ನೋಡಿ ನೋಡಿ ಒಂದು ದಿನ ದುಃಖ ತಡೆಯಲಾರದೆ ಗಂಡನನ್ನು ಕೇಳಿಯೇಬಿಟ್ಟಳು.

“ಹೌದು ಮನಸಿಲ್ಲದ ಲಗ್ನ”ವೆಂದು ಉತ್ತರಿಸಿದನು.

ಅವಳಿಗೆ ಮನಸ್ಸಿನಲ್ಲಿ ಬಹಳ ದುಃಖವಾಯಿತು. ಉರಿಯುವ ಬೆಂಕಿಯ ಮೇಲೆ ತುಪ್ಪ ಸುರಿವಿದಂತೆ ದಿನದ ಅವನ ನಡೆವಳಿಕೆಯಿಂದ ಅವಳಿಗೆ ಅಪಾರ ವೇದನೆಯಾಯಿತು. ದಿನವೂ ದೇವರ ಮುಂದೆ ಕೂತು ಕಂಣೀರು ಮಿಡಿಯುವಳು. ಯಾರು ದಯೆ ತೋರಿಸುವವರು ಅವಳಿಗೆ?

ಮುಂದೆ ಗಂಡನ ಪ್ರಯಾಣದ ದಿನವು ಗೊತ್ತಾಯಿತು. ಪ್ರಯಾಣವೂ ಸಾಗಿತು, ರಂಗನು ಎಂ. ಎ.ಗೆ ಟರ್ಮು ತುಂಬಿದ. ದಿನಂಪ್ರತಿ ಕೋಲೇಜಕ್ಕೆ ಹೋಗಿ ಬರುವುದು ಯಥಾಕ್ರಮವಾಗಿ ಸಾಗಿತು. ಅವನಿಗೆ ಮನೆಯ ಕಡೆಯ ಲಕ್ಷ್ಯವೇ ಇಲ್ಲವಾಯಿತು. ತನಗೆ ಲಗ್ನವಾಗಿದೆ. ಎಂಬದನ್ನು ಕೂಡ ಮರೆತು ಬಿಟ್ಟು ರಂಗನು ಅಲ್ಲಿ ಒಂದು ಹೆಣ್ಣು ರೂಪಕ್ಕೆ ಮರುಳಾಗಿದ್ದನು. ಯಾವಾಗಲೂ ಅವಳ ಕೂಡ ಇರುವದು. ಅಲ್ಲಿ ಹೊಸ ತರದ ಯುವತಿಯ ಕೂಡ ಇದ್ದ ಅವನಿಗೆ ಹಳ್ಳಿಯ ಹೂವು ರುಚಿಸೀತೆ?

ಇತ್ತ ರಂಗನು ಹೋದಮೇಲೆ ಮಂಗಲೆಯ ಒಂದೊಂದು ದಿನವೂ ಒಂದೊಂದು ಯುಗವಾಗಿ ಉರುಳಹತ್ತಿದವು. ಇದೆಲ್ಲ ಸಮಾಚಾರ ಅತ್ತೆಯ ಮನೆಯವರಿಗಷ್ಟೇ ಗೊತ್ತು. ಅವನು ಹೋಗಿ ಎರಡು ವರುಷಗಳಾದರೂ ಒಂದು ಪತ್ರ ಕೂಡ ಇಲ್ಲ. ಹೀಗೆ ಒಂದು ದಿನ ಒಂದು ಹಾರುಸುದ್ದಿಯು ಬಂದಿತು. ರಂಗನು ಬೇರೆ ಮದುವೆಯಾಗುವನೆಂದು. ಇದನ್ನು ಕೇಳಿ ಮಂಗಲೆಯು ಬಹಳ ದುಃಖಪಟ್ಟಳು. ಒಂದು ದಿನ ತನ್ನ ಅತ್ತೆಯವರನ್ನು ಕೇಳಬೇಕೆಂದು ನಿರ್ಧರಿಸಿದಳು. ಅಂದು ಭಾನುವಾರ ಮಾವನವರು ಮನೆಯಲ್ಲಿರಲಿಲ್ಲ.

ಅದೇ ವೇಳೆಯೆಂದು ತಿಳಿದು ಮಂಗಲೆಯು ಅತ್ತೆಯವರು ಇದ್ದ ಕಡೆಗೆ ಹೋಗಿ ನಮಸ್ಕರಿಸಿ ಕುಳಿತುಕೊಂಡಳು. ಅತ್ತೆಯವರಿಗೆ ಆಶ್ಚರ್ಯವಾಯಿತು. ಆದರೆ ತೋರಗೊಡಲಿಲ್ಲ.

“ಮಂಗಲಾ, ದೀಪ ಹಚ್ಚಿದೆಯಾ ಮನೆಯಲ್ಲಿ?” ಎಂದು ಕೇಳಿದರು. ಅವಳು ‘ಹೂಂ’ ಎಂದು ಉತ್ತರಿಸಿದಳು.

“ಅತ್ತೆಯವರೇ ನಾನು ನಿಮಗೊಂದು ಮಾತು ಕೇಳಲು ಬಂದಿದ್ದೇನೆ” ಎಂದು ಅಂದು ಅವರ ಉತ್ತರವನ್ನು ನಿರೀಕ್ಷಿಸದೆ “ಅತ್ತೆಮ್ಮಾ ನಾನು ಇಂದಿನಿಂದ ಶಾಲೆಗೆ ಹೋಗಬೇಕೆಂದಿದ್ದೇನೆ. ನೀವು ದಯಮಾಡಿ ನನ್ನನ್ನು ಕಳಿಸಿಕೊಡಬೇಕು” ಎಂದಳು ಅವಳ ಅತ್ತೆಯವರು ಅವಳ ಮನಸಿನ ಒಲವನ್ನು ತಿಳಿದು “ಆಗಲಿ” ಎಂದರು. ಅವಳಿಗೆ ಬಹಳ ಆನಂದವಾಯಿತು. ಮುಂದೆ ಅವಳು ಒಂದೇ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣವೆಲ್ಲ ಮುಗಿಸಿದಳು. ಅಲ್ಲಿ ಇಂಗ್ಲೀಷ ಶಾಲೆ ಇಲ್ಲದ್ದರಿಂದ ಮಂಗಲೆಯು ಹಳ್ಳಿಯಿಂದ ಪಟ್ಟಣಕ್ಕೆ ಬಂದಳು. ಒಂದು ತಿಂಗಳಲ್ಲಿಯೇ ಹಳ್ಳಿಯ ಹೂವೆನಿಸಿದ ಮಂಗಲೆಯು ಪಟ್ಟಣದ ಹೂವಾದಳು. ಹಿಂದೇ ವರ್ಷದಲ್ಲಿ ಮೂರುವರ್ಗಗಳನ್ನು ಸುಲಭವಾಗಿ ಪಾಸಾದಳು. ಸ್ವಲ್ಪ ಇಂಗ್ಲೀಷ ಭಾಷೆಯು ಅರಿವಾಯಿತು. ಮತ್ತೂ ಅವಳು, ತನ್ನ ಗಂಡನ ಮನಸ್ಸು ಹೀಗೆ ಏಕೆ ಆಗಿತ್ತೆಂಬುದನ್ನು ತಿಳಿದುಕೊಂಡಳು. ಆಗ ನಡುವೆ ಸೂಟಿಯಲ್ಲಿ ಬಂದು ಹೋಗಬೇಕೆಂದು ಪತ್ರ ಬಂದಿತ್ತು. ಅವಳು ಮತ್ತೆ ಹಳ್ಳಿಗೆ ಹೋದಳು. ಆದರೆ ಮಂಗಲೆಯು ಮೊದಲಿನವಳಾಗಿದ್ದಿಲ್ಲ. ಅವಳು ಪಟ್ಟಣವಾಸಿ ಮಂಗಲೆಯಾಗಿದ್ದಳು. ಎಲ್ಲರಿಗೂ ಮಾದರಿಯ ಮಂಗಲೆಯಾಗಿದ್ದಳು. ಹಳ್ಳಿಯನ್ನು ಸುಧಾರಿಸಿದಳು, ಒಂದೇ ಒಂದು ತಿಂಗಳಲ್ಲಿ ಹಳ್ಳಿಯನ್ನು ಪಟ್ಟಣವನ್ನಾಗಿ ಮಾಡಿಯೇ ಬಿಟ್ಟಳು! ಎಲ್ಲರಿಗೂ ವಿದ್ಯೆಯ ನಾದ ಹಚ್ಚಿದಳು. ಅಷ್ಟರಲ್ಲಿಯೇ ಅವಳ ಸೂಟಿಯು ಮುಗಿಯಿತು. ಆದರೆ ಮುಂದೆ ಕಲಿಯಲು ಹೋಗದೆ ಅಲ್ಲಿಗೇ ಬರುವಂಥ ಒಬ್ಬ ಅಧ್ಯಾಪಕಿಯನ್ನು ನಿಯಮಿಸಿಕೊಂಡಳು ಅವಳಿಂದ ಒಂದೇ ಒಂದು ವಿಷಯವನ್ನು ಪೂರ್ಣವಾಗಿ ಕಲಿತಳು ಅದೇ ಇಂಗ್ಲೀಷು. ಇತ್ತ ಅವಳ ಹಳ್ಳಿಯ ಸುಧಾರಣೆಯ ಕೆಲಸ ಸಾಗಿತ್ತು. ತಾನು ಕಲಿತದ್ದು ತನ್ನ ಗೆಳತಿಯರಿಗೆ ಕಲಿಸಿದ್ದಲ್ಲದೆ ಪಟ್ಟಣದ ಹೊಸ ಪದ್ಧತಿಯನ್ನೆಲ್ಲ ತಿಳಿಸಿಕೊಟ್ಟಳು. ಹೀಗೆಯೇ ಅವಳ ದಿನಚರಿ ನಡೆದಿತ್ತು.

ರಂಗನು, ತನಗೆ ಲಗ್ನವಾದಮೇಲೆ ಹೊಸ ತರದ ಹೆಂಡತಿಯನ್ನು ಕರೆದುಕೊಂಡು ಬರುವದು ತನ್ನ ತಾಯಿ ತಂದೆಗಳಿಗೆ ಸೇರಲಿಕ್ಕಿಲ್ಲವೆಂದು, ನಡುವೆ ಸೂಟಿಯಲ್ಲಿಯೇ ಅವರ ಭೆಟ್ಟಿಯಾಗಬೇಕೆಂದು ನಿರ್ಧರಿಸಿದನು. ಅವನ ನಿರ್ಧಾರವು ಮಂಗಲೆಗೆ ತಿಳಿದಿತ್ತೋ ಅಥವಾ ಅಂದು ಅವಳಿಗೆ ಉತ್ಸಾಹ ಹುಟ್ಟಿತ್ತೋ ಅವಳು ಅಂದು ಒಳ್ಳೇ ಹುರುಪಿನಲ್ಲಿದ್ದಳು ಮಂಗಲೆಯು ಅಂದು ಒಳ್ಳೇ ಹೊಸತರದ ಪತ್ತಲವನ್ನುಟ್ಟಿದ್ದಳು. ಮಂಗಲೆಯು ಅಂದು ಸುಮಂಗಲೆಯಾಗಿದ್ದಳು. ಪಟ್ಟಣದ ಹೂವಾಗಿದ್ದಳು. ರಂಗನು ಬಂದು ತಾಯಿತಂದೆಗಳಿಗೆ ನಮಸ್ಕರಿಸಿ ತನ್ನ ಕೋಣೆಗೆ ಹೋಗಿ ಕುಳಿತುಕೊಂಡನು; ಅಂದು ಮೊದಲೇ ವರುಷದಲ್ಲಿ ಮಂಗಲೆಗೆ ತನ್ನ ಇನಿಯನ ತನ್ನ ಸನಿಯಕ್ಕೆ ಹಾಯುವನೆಂದು ಮತ್ತಿಷ್ಟು ಆನಂದವಾಗಿತ್ತು. ಅವಳು ಅವನಿಗೆ ನಮಸ್ಕಾರ ಮಾಡದೆ ಲಗುಬಗೆಯಿಂದ ಚಹವನ್ನು ತಯಾರಿಸಿ ಒಂದ “ಟ್ರೇ” ಯಲ್ಲಿ ಎರಡು ಚಹದ ಕಪ್ಪುಗಳನ್ನಿಟ್ಟುಕೊಂಡು ಧೈರ್ಯವಿಲ್ಲದೆ ಧೈರ್ಯದಿಂದ ಅವನ ಕೋಣೆಯನ್ನು ಪ್ರವೇಶಿಸಿದಳು.

ಅವನು ತನ್ನ ಹೆಂಡತಿಯೇ ಬಂದಿರಬಹುದೆಂದು ತಿರಸ್ಕಾರದಿಂದ ಕೆಳಮೋರೆಯಿಂದಲೇ ಚಹದ ಕಪ್ಪನ್ನು ಎತ್ತಿದ. ಅವಳೂ ಕೂಡ ತನ್ನ ಚಹದ ಕಪ್ಪನ್ನು ತೆಗೆದುಕೊಂಡು ಅಲ್ಲಿಯೇ ಒಂದು ಕುರ್ಚಿಯನ್ನು ಎಳೆದುಕೊಂಡು ಗಂಡನ ಎದುರು ಕುಳಿತಳು.

“ಕೂಡೆಂದು ಸಹ ಹೇಳಬಾರದೇ?” ಎನ್ನುತ್ತ ಸನಿಯಕ್ಕೆ ಹೋದಳು. ಅವನು ತಿರಸ್ಕಾರದಿಂದ ಮೋರೆ ತಿರುವಿದ. ಅವಳೇನು ತನಗೆ ಮಾನಗೆಡಬೇಕೆಂದು ಅಲ್ಲಿಗೆ ಬಂದಿದ್ದಿಲ್ಲ. ಅವಳದು ಒಂದೇ ಒಂದು ಆಶೆ: ಗಂಡನು ತನ್ನ ಕೂಡ ಪ್ರೀತಿವಾಕ್ಯಗಳಿಂದಿರಬೇಕೆಂದು: ಆಶೆ ಈಡೇರುವ ಸಮಯವೂ ಬಂದಿತ್ತು. ಅವಳು ಅಲ್ಲಿಯೇ ತಳವೂರಿಬಿಟ್ಟಳು.

ಇವಳು ಮಂಗಲೆಯಲ್ಲ ಯಾವದೋ ಒಂದು ಮೋಹರೂಪವಿದು” ಎಂದು ತನ್ನನ್ನು ತಾನೇ ನಂಬದಾದ. ಮಂಗಲೆಯು ಇಷ್ಟು ಮೋಹಕಳಾಗುವಳೆಂದು ಎಂದೂ ನಂಬಿದ್ದಿಲ್ಲ. ಅವಳ ತೀಕ್ಷ್ಣ ದೃಷ್ಟಿಯನ್ನು ಎದುರಿಸುವದಾಗದೇ ಅವಳನ್ನು ತನ್ನ ಕಡೆಗೆ ಎಳೆದು ಅಪ್ಪಿ ಮುದ್ದಿಟ್ಟ. ಮಂಗಲೆಯ ಆಶೆ ಈಡೇರಿತು. ಅವಳು ಪತಿಯ ಪಾದಕ್ಕೆರಗಿ ಏಳುವಾಗ ಪತಿಯ ಮಂದಸ್ಮಿತಮುಖವು ಎದುರಿನಲ್ಲಿದ್ದಿತು ಅವಳು ಅತ್ತೆ ಮಾವರಿಗೆ ನೂರುಸಲ ಮನಸ್ಸಿನಲ್ಲಿ ವಂದಿಸಿದಳು.

“ನಾನು ಇಂದು ನಿಜವಾದ ಮಾಂಗಲ್ಯವನ್ನು ಪಡೆದು ಧನ್ಯಳಾದೆನೆಂದು” ನಗುತ್ತ ಪತಿಯ ಪಾದಕ್ಕೆ ಮತ್ತೊಮ್ಮೆ ಎರಗಿದಳು.

ಸಾದರ ಸ್ವೀಕಾರ

೧ ಡ್ರಾಯಿಂಗ ಶಿಕ್ಷಕ

ಚಿತ್ರಶಿಲ್ಪಿ— ಅ. ಕಮಡೊಳ್ಳಿ ಅವ... ಪುಸ್ತಕ ಪ್ರಕಾಶಕರು— ಗುರುಪಾದ ಮಹಾದೇವ ಜೋಶಿ ಮಾರಾಟಗಾರರು ಸುಪ್ರೀಮ ಸ್ಟುಡಿಯೋ ಸ್ಟೇಷನ್ ರೋಡ ಹುಬ್ಬಳ್ಳಿ— ಪುಟಗಳು ೩೦— ಬೆಲೆ ೦-೨-೦

೨ ಬಾಡಿದ ಹೂವು

ಲೇಖಕರು— ಎಸ್ ಅನಂತ ನಾರಾಯಣ ಪ್ರಕಾಶಕರು ಸಾಹಿತ್ಯಮಂದಿರ ಮೈಸೂರು ಪುಟಗಳು ೬೦— ಬೆಲೆ ೧-೦-೦

೩ ಪ್ರೇತ ಸಂಹಾರ

ಲೇಖಕರು— ದಾಶರಥಿ ದೀಕ್ಷಿತ. ಪ್ರಕಾಶಕರು— ದೀಕ್ಷಿತ ಅಂಡ್ ಕೊ. ಬಸವನಗುಡಿ ಬೆಂಗಳೂರ ಪುಟಗಳು ೧೨೦ ಬೆಲೆ ೧—೦—೦.

೪ ಶ್ರೀ ಸತ್ಯಧ್ಯಾನ ವಿಜಯವು

ಲೇಖಕರು— ಕೇಶವ ಕಟ್ಟಿ. ಪ್ರಕಾಶಕರು ಬೆಳಗಾವಿ. ರಾಮಚಂದ್ರರಾಯರು ಮನೋರಂಜನ ಪ್ರಕಾಶಕ ಸಮಿತಿ ಧಾರವಾಡ ಬೆಲೆ ೧ ರೂ.

೫ ಸ್ವಾಮಿ ದಯಾನಂದರ ಸಂದೇಶ

ಲೇಖಕರು— ಎಮ್. ಚಂದ್ರೇಶ್ವರರು ಪ್ರಕಾಶಕರು— ಬಿ. ಲಕ್ಷ್ಮಣದೇವ ವಿದ್ಯಾರ್ಥಿ “ವೈದಿಕ ಧರ್ಮ ಪ್ರಚಾರ” ಸಂಪಾದಕ “ಸದ್ಧರ್ಮ ಪ್ರಚಾರಕ ಗ್ರಂಥ ಮಾಲೆ” ಮಂಗಳೂರ.

೬ ಪಾರಸೀ ಕವೀಂದ್ರರು

ಲೇಖಕರು— ಎಂ. ವಾಸುದೇವಮೂರ್ತಿ ಪ್ರಕಾಶಕರು— ಕರ್ನಾಟಕ ಸಂಘ ಕೊಪ್ಪಳ ಪುಟಗಳು ೭೬. ಬೆಲೆ ೧—೦—೦

(English) ಇಂಗ್ಲೀಷ

೭ Commodity Exchanges

By C. G. Salvi

ಪ್ರಕಾಶಕರು— ದಿ. ಕೊ. ಆ. ಬುಕ್ ಡಿಪೊ. ಬೇಕಹೌಸ ಲೇ. ನ. ಫೋರ್ಟ ಬಾಂಬೆ ಪುಟಗಳು ೨೪೦ ಬೆಲೆ ೧೫-೦-೦

ಪುಸ್ತಕ ಮತ್ತು ವಿಮರ್ಶೆ

(೨ ನೇ ಪುಟದಿಂದ)

ಕತೆಗಳು ಸರಸ ಸಾಹಿತ್ಯವಾಗಿಯೂ ಕಂಗೊಳಿಸುವ “ಉಷೆ”ಯನ್ನು ಓದುಗರು ಆದರದಿಂದ ಬರಮಾಡಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಮತ್ತೂ ಹಲವಾರು ಉತ್ತಮ ಬರಹಗಳಿವೆ— ರಸದೂಟಕ್ಕೆಂದು. ಪುಟ ಸಂಖ್ಯೆ ಮತ್ತು ಲೇಖನಗಳ ತೂಕಕ್ಕೆ ಸರಿಯೆನ್ನ ಬಹುದಾದ ಬೆಲೆಯನ್ನಿಟ್ಟಿರುವುದು ಸಂತೋಷದ ಸಂಗತಿ.

Reg. No. B. 3148

LICENCE No 3
Licenced to Post without Prepayment

Karmaveer 23-6-47



ಜ್ಯೋತಿಷಿ—ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜೂನ ೨೩ ರಿಂದ ೨೯ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಯಲ್ಲಿ ಸಾಧಾರಣ ಕಳಕಳಿ. ಆದರೆ ಉಭಯತರಲ್ಲಿ ಪ್ರೇಮ ಮತ್ತು ಮುಕ್ಕೈಕ್ಯ ಉತ್ತಮ. ಉಳಿದ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳು ಬಹಳ ಆನಂದದಲ್ಲಿ ಉಳಿಯುವಂಥ ಕೆಲ ಉತ್ತಮ ಸಂಗತಿಗಳು ಸಂಭವಿಸುವ ಯೋಗ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಉತ್ತಮ. ಆದರೆ ಅಂದಾಜಿಗಿಂತ ದ್ರವ್ಯ ಲಾಭ ಕಡಿಮೆ. ಆಪ್ತರು ಮತ್ತು ಮಿತ್ರರು ನಿಮ್ಮ ಕೆಲ ವ್ಯವಹಾರದ ಬಗ್ಗೆ ಬಹಳ ಅಸಮಾಧಾನಗೊಳ್ಳುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಾದಿ ಕೆಲಸ ಮನಸ್ಸಿನಂತೆ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೇ ಚರಣಕ್ಕೆ ಮಾತ್ರ ತೊಂದರೆಯಿಂದ ಯುಶಸ್ಸು. ತಾ. ೨೩, ೨೪, ೨೮, ೨೯ ಅನುಕೂಲ

ವೃಷಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಉಭಯತರಲ್ಲಿ ಎಳೆಜೀವಿಗಳಂತೆ ಪ್ರೇಮದ ವರ್ತನೆ. ಆದರೆ ಕೆಲವೊಂದು ವಿಪರೀತ ಸಂಗತಿ ತಿಳಿಯುವದರಿಂದ ಇಬ್ಬರ ಮನಸ್ಸು ವಿಷಣ್ಣವಾಗುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅವ್ಯವಸ್ಥಿತ. ಆದರೆ ಧ್ಯಾರಪೇಕ್ಷಿಸುವಂತೆ ಪ್ರತಿಯೊಬ್ಬರು ಹೆಚ್ಚಿನ ಖರ್ಚಿನ ಬೇಡಿಕೆ ಮುಂದೆ ಮಾಡುವರು. ಮಿತ್ರತ್ವದಲ್ಲಿ ವಿರೋಧ ಹೆಚ್ಚು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಹೆಚ್ಚು. ಆದರೆ ಕೆಲವೊಂದು ಅನಪೇಕ್ಷಿತ ಕಾರಣದಿಂದಾಗುವ ಲಾಭಕ್ಕೆ ಅಡ್ಡಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳು ಒಳ್ಳೆ ಜೋರಿನಲ್ಲಿ. ಆದರೆ ಯುಶಸ್ಸಿನ ಒಲವು ನಿಮ್ಮ ಕಡೆಗಿದೆ. ಅಸ್ತಿಯಲ್ಲಿ ಹೆಚ್ಚಳ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ರೋಹಿಣಿಯ ಕೊನೆಯ ೩ ಮತ್ತು ಮೃಗಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೨೩, ೨೪, ೨೫, ೨೬ ಅನುಕೂಲ.

ಮಿಥುನ

ಪ್ರಕೃತಿ ಉತ್ತಮ ಮತ್ತು ಸ್ತ್ರೀಸುಖ ಅನುಕೂಲ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೇ. ಮಕ್ಕಳಿಂದ ಕೆಲ ಅಪ್ರಿಯ ಮತ್ತು ಲೋಕನಿಂದೆಯಾಗುವಂತಹ ಕೃತ್ಯಗಳು. ಬಂಧುವರ್ಗದವರಲ್ಲಿ ಉನ್ನತಿ. ವೆಚ್ಚ ಹೆಚ್ಚು. ಆದರೆ ಅದರಲ್ಲಿಯ ಹೇಳು ಸಾಧ್ಯ. ಪ್ರತಿಯೊಂದು ಕೆಲಸದಲ್ಲಿ ಯುಶಸ್ಸು. ಆದರೆ ಪ್ರಥಮ ಮಾಡಾದವರು ಅಡ್ಡ ಬರುತ್ತಿರುವ ಯೋಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆಯು ತೊಂದರೆಯಿಂದ ಸಾಧ್ಯ. ಆದರೆ ಲಾಭ ಬಹಳ ಕಡಿಮೆ. ಸ್ಥಾವರದಲ್ಲಿ ಕೆಲ ಅನುಕೂಲ ಸಂಗತಿಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಹೆಚ್ಚು ಆದರೆ ಕೊನೆಗೆ ಯುಶಸ್ಸು ಅನುಕೂಲ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಆರಿದ್ರಾದ ಕೊನೆಯ ೩ ಮತ್ತು ಪುನರ್ವಸಿನ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೨೩, ೨೪, ೨೮ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ ಆದರೆ ಪತಿಪತ್ನಿಯರಲ್ಲಿ ಮೇಲಿಂದ ಮೇಲೆ ಮತಭೇದ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅತಿ ತೊಂದರೆಯುದು. ಪ್ರತಿಯೊಂದು ಮಾತಿನಲ್ಲಿ ಹೆಚ್ಚು ಶ್ರಮವಿಲ್ಲದೆ ಇಮ್ಮಡಿ ವೆಚ್ಚವಾದರೂ ಮನಸ್ಸಿನಂತೆ ಕೆಲಸ ಆಗದಿರುವದು. ಉದ್ಯೋಗದಲ್ಲಿ ಪ್ರಗತಿ ಕಡಿಮೆ ಆದರೆ ಪ್ರತಿಷ್ಠೆ ಮತ್ತು ಲಾಭವೂ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳದೇ ಹೆಚ್ಚು ಜೋರು ಆದರೆ ಅದರಲ್ಲಿ ಒಬ್ಬರಿಗೆ ನಿಸರ್ಗ ಕೋಪದಿಂದ ಬಹಳ ಹಾನಿ. ಮಿತ್ರ ಸುಖ ಉತ್ತಮ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೨೩, ೨೪, ೨೫, ೨೬ ಅನುಕೂಲ.

ಸಿಂಹ

ಪ್ರಕೃತಿ ಉತ್ತಮ. ಆದರೆ ಹೆಂಡತಿಗೂಡ ಬಹಳ ಮತಭೇದ. ಇತರ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ. ಪ್ರತಿಯೊಂದು ಕೆಲಸದಲ್ಲಿ ವೆಚ್ಚ ಮತ್ತು ತೊಂದರೆ ಅತಿಶಯ. ಮಿತ್ರರಿಂದ ವಿಶೇಷ ಭಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಅತಿ ಉತ್ತಮ. ಆದರೆ ಆ ಮಾನದಿಂದ ಲಾಭ ಕಡಮೆಯೆ. ಮಕ್ಕಳಲ್ಲಿ ಸ್ವಲ್ಪ ಉನ್ನತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿನ್ನೈಸುವದು. ಸ್ಥಾವರದಲ್ಲಿ ಮಾತ್ರ ಸ್ವಲ್ಪ ಅನುಕೂಲ ಮಾತುಗಳು. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಹೆಚ್ಚು ಅನುಕೂಲ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೨೫, ೨೬, ೨೭, ೨೮ ಅನುಕೂಲ.

ಕನ್ಯಾ

ಪ್ರಕೃತಿ ಉತ್ತಮ ಆದರೆ ಹೆಂಡತಿಗೂಡ ಸ್ವಲ್ಪ ವಿರೋಧ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ. ಬಂಧುವರ್ಗದವರಿಗೆ ಸ್ವಲ್ಪ ಕ್ಲೇಶ. ಉದ್ಯೋಗದಲ್ಲಿ ಉತ್ತಮ ಪ್ರಗತಿ, ಒಳ್ಳೆ ಪ್ರತಿಷ್ಠೆ ಮತ್ತು ತುಂಬ ಲಾಭ. ಆದರೆ ವೆಚ್ಚವೂ ವಿಪರೀತ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅತಿ ಶ್ರಮ ತೊಂದರೆ ಆದರೆ ಕೊನೆಯಲ್ಲಿ ಯುಶಸ್ಸು. ಪ್ರವಾಸಾದಿ ಕೆಲಸ ಹಿತಕರ. ಹಸ್ತಾದ ಕೊನೆಯ ೩ ಚಿತ್ರಾದ ೧ ನೇ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೬, ೨೭, ೨೮, ೨೯ ಅನುಕೂಲ.

ತುಲಾ

ಪ್ರಕೃತಿ ಸಾಧಾರಣವೆ. ಪ್ರಾಪಂಚಿಕ ಸುಖ ಕಡಮೆಯೆ ಬಗೆಬಗೆಯ ಅಪ್ರಿಯ ಮಾತುಗಳಿಗೆ ಒಪ್ಪಿಗೆ ಕೊಡುವ ಪ್ರಸಂಗ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಉತ್ತಮ. ಪ್ರತಿಷ್ಠೆ ಮತ್ತು ತುಂಬ ಲಾಭ. ಆದರೆ ವೆಚ್ಚವೂ ವಿಪರೀತ. ಮಿತ್ರಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಅನಸ್ಸಿನಂತೆ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೨೬, ೨೭, ೨೮, ೨೯ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಮನಸಿನಂತೆ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅತಿ ಉತ್ತಮ. ಆದರೆ ಪ್ರತಿಷ್ಠೆ ಬಹಳ ಕಡಿಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯುಶಸ್ಸು. ಬಂಧುವರ್ಗದವರಲ್ಲಿ ಬಹಳ ಉನ್ನತಿ. ಮಿತ್ರಸುಖ ಉತ್ತಮ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅನುರಾಧೆಯ ಕೊನೆಯ ೩ ಜ್ಯೇಷ್ಠಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೨೩, ೨೪, ೨೫, ೨೬ ಅನುಕೂಲ.

ಧನು

ಪ್ರಕೃತಿ ನಿಮ್ಮದು ಬಹಳ ಉತ್ತಮ. ಆದರೆ ಹೆಂಡತಿಯದು ಅಷ್ಟೆ ಕೆಡುವದು. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಷ್ಟದ್ದು. ಉದ್ಯೋಗದಲ್ಲಿ ಉತ್ತಮ ಪ್ರಗತಿ ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ. ಪ್ರತಿಯೊಂದು ಕೆಲಸದಲ್ಲಿ ಅನಪೇಕ್ಷಿತ ಗೊಂದಲ ಬಹಳ. ಮಿತ್ರತ್ವದಲ್ಲಿ ವಿರೋಧ. ಮಕ್ಕಳಿಂದ ಕೆಲ ಅಶಕ್ಯತ್ವಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯುಶಸ್ಸು ಆದರೆ ಶತ್ರುಗಳ ಜೋರು ಪುನಃ ಮೊದಲಿನಷ್ಟೆ. ಪ್ರವಾಸ ಅನುಕೂಲ ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯುದು. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ೧ ನೇ ಚರಣಕ್ಕೆ ತೊಂದರೆ ವಿಪರೀತ. ತಾ ೨೩ ೨೪ ೨೫ ೨೬ ಅನುಕೂಲ.

ಮಕರ

ಪ್ರಕೃತಿ ಬಹಳ ಉತ್ತಮ. ಅದರಂತೆ ಪ್ರಾಪಂಚಿಕ ಸುಖ ಮನಸ್ಸಿನಂತೆ. ಮಕ್ಕಳಲ್ಲಿ ವಿಶೇಷ ಕಂಡು ಬರುವಂಥ ಉನ್ನತಿ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಒಳ್ಳೆ ಪ್ರತಿಷ್ಠೆ ಮತ್ತು ತುಂಬ ಲಾಭ. ಅದರೂ ಮನಸಿನ ವಿರುದ್ಧ ವೆಚ್ಚ ಮಾಡುವ ಅನೇಕ ಪ್ರಸಂಗಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯುಶಸ್ಸು. ಆದರೆ ಶತ್ರುಗಳು ಘಾತಕ ಅಡಚಣಿಯನ್ನುಂಟು ಮಾಡುವ ಅಂಜಿಕೆ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಶ್ರವಣಾದ ಕೊನೆಯ ೩ ಮತ್ತು ಧನಿಷ್ಠಾದ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೫, ೨೬, ೨೭, ೨೮ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ. ಸ್ತ್ರೀ ಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಮಕ್ಕಳಿಂದ ತೊಂದರೆಯು ಪತನ. ಉದ್ಯೋಗದಲ್ಲಿ ಉತ್ತಮ ಪ್ರಗತಿ ದೊಡ್ಡ ಪ್ರತಿಷ್ಠೆ ಮತ್ತು ತುಂಬ ಲಾಭ. ಆದರೂ ವೆಚ್ಚ ಸಹಿತ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯುಶಸ್ಸು. ಆದರೆ ಸ್ವತಃಕ್ಕೆ ವಿಸ್ಮರಣೆಯಾಗುವದರಿಂದ ಸ್ವಲ್ಪ ಗೊಂದಲ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೩, ೨೪, ೨೮, ೨೯ ಅನುಕೂಲ.

ಮೀನ

ಪ್ರಕೃತಿ ಸಾಧಾರಣ ಅನುಕೂಲ. ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭ ತುಂಬ. ಮಕ್ಕಳಿಂದ ಕೆಲ ಅಶಕ್ಯತ್ವ ಸಂಭವಿಸುವದರಿಂದ ಮನಸಿಗೆ ಉದ್ವೇಗ ವಾದದಲ್ಲಿ ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಆದರೆ ಶತ್ರುಗಳಿಗೂ ವಿಪರೀತ ತೊಂದರೆ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೫, ೨೬, ೨೭ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟದ" ಪರವಾಗಿ ಹ. ರಾ. ಪುರೋಹಿತ ಯವರಿಂದ ಮುದ್ರಿತವಾಗಿ ಪ್ರಕಟವಾಯಿತು.

ಹಿಂದುಸ್ಥಾನಕ್ಕೆ ರಶಿಯಾದಿಂದ ಗಂಡಾಂತರ ನಿಜವೆ?

(ಮೊದಲನೆ ಪುಟದಿಂದ)

ಸೇರಿಕೊಂಡು ಭೂಮಿಯನ್ನು ಸೆಳೆದುಕೊಳ್ಳಬೇಕಾದೀತು. ಆ ಮೇಲೆ ಪೋಲಂಡಿನಲ್ಲಿಯೂ ರುಮೇನಿಯಾದಲ್ಲಿಯೂ ಮಾಡಿದಂತೆ, ಹಿಂದೀ ಕಮ್ಯುನಿಸ್ಟರ ಸಹಾಯದಿಂದ ಹಿಂದುಸ್ಥಾನವನ್ನಾಳುವ ಸಲುವಾಗಿ ರಶಿಯನ್ ಅಧಿಕಾರಿಗಳ ಇನ್ನೊಂದು ಸೈನ್ಯದ ಪ್ರವೇಶಕ್ಕೆ ಅನುವು ಮಾಡಿಕೊಡಬೇಕಾಯಿತು.

ದಾಳಿ ಅಸಂಭವ

ಇಂಥ ರಶಿಯನ್ ಸಾಹಸ ಸಂಭವಿಸುವದು ಎಂದೆಂದಿಗೂ ಸಾಧ್ಯವಿಲ್ಲವೆಂದು ನಾನು ಹೇಳಬಲ್ಲೆ. ಇಂಥ ಕಪೋಲಕಲ್ಪಿತ ಕಥೆಗಳನ್ನು ಹಬ್ಬಿಸುವ ಬ್ರಿಟಿಶ ಸಾಮ್ರಾಜ್ಯವಾದಿಯಾಗಲಿ ಬ್ರಿಟಿಶ ಮಿಲಿಟರಿವಾದಿಯಾಗಲಿ ಮಕ್ಕಳನ್ನು ಹೆದರಿಸಲು ಗುಮ್ಮನ ಕತೆ ಹೇಳುವಂತೆ ಮಾಡುತಿದ್ದಾನೆ. ಇಂಥ ಸಾಹಸಗಳಲ್ಲಿ ಸೋವಿಯೆಟ್ ಜನತೆಯ ಸತ್ವಸಂಪತ್ತಿಗಳನ್ನು ಹಾಳುಮಾಡಲು ಸ್ಟಾಲಿನ್ನನೇನು ಹುಚ್ಚನಲ್ಲ. ಹೀಗೆ ಮಾಡುವದು ರಶಿಯಾಕ್ಕೆ ಸಾಧ್ಯವೂ ಇಲ್ಲ.

ಸಾಲದ್ದಕ್ಕೆ ಹಿಂದುಸ್ಥಾನದ ಮೇಲೆ ರಶಿಯಾ ದಾಳಿ ಮಾಡಿದರೆ ಯುರೋಪಿನಲ್ಲಿ ರಶಿಯಾದ ಮೇಲೆ ಅಮೇರಿಕೆಯೂ ಇಂಗ್ಲಂಡೂ ಏರಿ ಹೋಗುವದು ನಿಶ್ಚಿತ. ಜಗತ್ತು ಅಡ್ಡಗೋಡೆಯ ಮೇಲಿನ ದೀಪದಂತಿದೆ; ಶಕ್ತಿಯ ಸಮತೋಲನೆ ಅತ್ಯಂತ ಅಸ್ಥಿರವೂ ಸೂಕ್ಷ್ಮವೂ ಆಗಿದೆ; ಪ್ರಬಲ ರಾಷ್ಟ್ರಗಳಿಗೆ ಒಂದರ ಮೇಲೊಂದಕ್ಕೆ ಬಹಳ ಹೊಟ್ಟೆಕಿಚ್ಚು ಇದೆ; ಅಂದ ಮೇಲೆ ಯಾವುದೊಂದಕ್ಕೆ ಏನಾದರೂ ಲಾಭವಾದರೆ ಉಳಿದವು ಸೇರಿ ಆ ಲಾಭವನ್ನು ಹಾಳುಗೆಡಹದೆ ಬಿಡವು.

ರಶಿಯನ್ ದಾಳಿಯಿಂದ ಹಿಂದುಸ್ಥಾನವನ್ನು ರಕ್ಷಿಸಲು ಇಂಗ್ಲಂಡಾಗಲಿ ಅಮೇರಿಕೆಯಾಗಲಿ ಹಿಂದುಸ್ಥಾನದಲ್ಲಿಯೇ ನಿಲ್ಲಬೇಕೆಂದಿಲ್ಲ.

ಆದರೆ, ಹಿಂದುಸ್ಥಾನದಲ್ಲಿ ಹಬ್ಬಿರುವ ಹಿಂಸೆ, ಧಾರ್ಮಿಕ ವೈಷಮ್ಯ, ಅರ್ಥಿಕ ಬಿಕ್ಕಟ್ಟುಗಳಿಂದಲೂ ಹಿಂದುಸ್ಥಾನದ ಅವಶ್ಯಕತೆಗಳಿಗೂ ಅಭಿಮಾನಕ್ಕೂ ಗಮನ ಕೊಡದ ಯುರೋಪಿನ ದುರ್ಲಕ್ಷ್ಯದಿಂದಲೂ ರಾಜಕೀಯ ಪ್ರಯೋಜನೆಗಳನ್ನು ಸಂಪಾದಿಸಲಾರದೆಂದು ಮಾತ್ರ ಹೇಳಬರುವದಿಲ್ಲ. ಅದು ಬೇರೆಯೆ ಮಾತು.